Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ-19 | ಸಂಚಿಕೆ-9 | ಫೆಬ್ರವರಿ 24-ಮಾರ್ಚ್ 2, 2025 | ಪುಟ 16 | ರೂ.10/-
Volume-19 | Issue-9 | February 24-March 2, 2025 | Pages:16 | Price: 10/-



ಮಂಗಳೂರಿನಲ್ಲಿ ಮರಳು ದಂಧೆ ಹೊಣೆ ಯಾರು?

ಮೆಟ್ರೋ ರೈಲು ಪ್ರಯಾಣ ದರ ಯಾಕಿಷ್ಟು ದುಬಾರಿ?

ಭಾಲ್ಕಿ ಸ್ವಾಮಿಗಳ ನಡೆ ಎತ್ತ ಕಡೆ?

ಅರಳುವ ಮುನ್ನವೇ ಅನಾಥವಾದ ವಿಶ್ವವಿದ್ಯಾಲಯಗಳು

ಟ್ರಂಪ್ ದರ್ಬಾರಿನಲ್ಲಿ ಮೋದಿ

ಬಜೆಟ್ ನಿಂದ ವೇಗೋತ್ಕರ್ಷ ಪಡೆದ ಬಂಡವಾಳ ಸಂಗ್ರಹ, ಆರಾಮ ಜೀವಿಗಳ ಹುಸಿ ಸಂಸ್ಕೃತಿ

ಭಾಗ 15

ಜಿ.ಎನ್. ನಾಗರಾಜ್

1689ರಲ್ಲಿ ವಿಶ್ವದ ಮೊದಲ ಬಜೆಟ್ ಪ್ರಜಾಪ್ರಭುತ್ವದ ಅಂಗವಾಗಿ ಸಂಸತ್ತಿನ ಅಂಗೀಕಾರಕ್ಕಾಗಿ ಮಂಡನೆಯಾಯ್ತು. ರಾಜನೂ ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದ, ವೆಚ್ಚಗಳಿಗೆ ಹಣದ ಕೊರತೆ ಬಿದ್ದಾಗ ಸಾಲವನ್ನೂ ಪಡೆಯುತ್ತಿದ್ದ. ಸಂಸತ್ತಿನಲ್ಲಿ ಬಜೆಟ್ ಮಂಡಿಸಿದ ನಂತರವೂ ಕೂಡಾ ತೆರಿಗೆ ಹಾಕುವುದು, ಸಾಲ ಪಡೆಯುವುದು ಇವುಗಳು ಯಾವುದೂ ನಿಲ್ಲಲಿಲ್ಲ. ವ್ಯತ್ಯಾಸವೇನು ಎಂದೆನ್ನಿಸಬಹುದು. ಆದರೆ ಗಣನೀಯ ವ್ಯತ್ಯಾಸ ಉಂಟಾಯ್ತು.



ರಾಜನೊಬ್ಬನ ಹತ್ಯೆಯಾಯ್ತು, ಮತ್ತೊಬ್ಬ ರಾಜನನ್ನು ಓಡಿಸಿಯಾಯ್ತು. ಸಂಸತ್ ಪರ ಶಕ್ತಿಗಳ ಸರ್ವಾಧಿಕಾರವೂ ಹೇರಲ್ಪಟ್ಟಿತು. ಮುಂದೆ ಅಂದಿನ ಸಂಸತ್ತಿನ ಸದಸ್ಯರೇ ಆಯ್ಕೆ ಮಾಡಿಕೊಂಡ ಬೇರೊಂದು ದೇಶದ ರಾಜಮನೆತನದ ವ್ಯಕ್ತಿಯನ್ನು 1688ರಲ್ಲಿ ರಾಜನ ಪಟ್ಟಕ್ಕೆ ಏರಿಸಿಯಾಯ್ತು. ಸಂಸತ್ತಿಗೆ ಅಧೀನನಾಗಿರುತ್ತೇನೆಂದು ರಾಜನಿಂದ ಪ್ರಮಾಣ ವಚನ ತೆಗೆದುಕೊಂಡಾಯ್ತು. ಸರ್ಕಾರದ ಎಲ್ಲ ಆದಾಯ, ವೆಚ್ಚ ಸಂಸತ್ತಿನ ಚರ್ಚೆ, ತೀರ್ಮಾನದ ಅಧೀನಕ್ಕೆ ಬಂತು. 1689ರಲ್ಲಿ ವಿಶ್ವದ ಮೊದಲ ಬಜೆಟ್ ಸಂಸತ್ತಿನ ಅಂಗೀಕಾರಕ್ಕಾಗಿ ಮಂಡನೆಯಾಯ್ತು. ಬ್ರಿಟನ್ ನಲ್ಲಿ ಈ ಎಲ್ಲ ಘಟನೆಗಳೂ 1649–89ರ ನಡುವಣ ನಾಲ್ಕು ದಶಕಗಳಲ್ಲಿ ಸಂಭವಿಸಿದವು.

ವ್ಯತ್ಯಾಸವೇನಾಯ್ತು!

ರಾಜನೂ ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದ, ವೆಚ್ಚಗಳಿಗೆ ಹಣದ ಕೊರತೆ ಬಿದ್ದಾಗ ಸಾಲವನ್ನೂ ಪಡೆಯುತ್ತಿದ್ದ. ಬಜೆಟ್ ಮಂಡಿಸಿದ ನಂತರವೂ ಕೂಡಾ ತೆರಿಗೆ ಹಾಕುವುದು, ಸಾಲ ಪಡೆಯುವುದು ಇವುಗಳು ಯಾವುದೂ ನಿಲ್ಲಲಿಲ್ಲ. ವ್ಯತ್ಯಾಸವೇನು ಎಂದೆನ್ನಿಸಬಹುದು. ಆದರೆ ಗಣನೀಯ ವ್ಯತ್ಯಾಸ ಉಂಟಾಯ್ತು.

ರಾಜ ಹಾಕಿದ ತೆರಿಗೆ ತೆರುವ ಪ್ರಜೆಗಳಿಗೆ ಈ ತೆರಿಗೆ ರಾಜನ, ರಾಜ ಮನೆತನದವರ ಮೋಜು ಮಸ್ತಿಗೆ ಹೋಗುತ್ತದೆಯೋ, ಹೊಸ ಅರಮನೆಗಳನ್ನು ಕಟ್ಟಿಸಲು ಬೇಕಾಗಿದೆಯೋ, ರಾಜ ಮತ್ತು ಮನೆತನದವರ ವ್ಯವಹಾರಗಳಲ್ಲಿ, ಅವರ ರಾಯಲ್ ಕಂಪನಿಗಳಲ್ಲಿ ಹೂಡುವುದಕ್ಕೋ ಅಥವಾ ಜನರ ಯಾವುದಾದರೂ ಅಗತ್ಯ ಪೂರೈಸುವುದಕ್ಕೋ ಎಂಬ ಯಾವ ಸಂಗತಿಯೂ ತಿಳಿಯುತ್ತಿರಲಿಲ್ಲ. ಎಲ್ಲ ಗುಪ್ತ್, ಗುಪ್ತ್. ಅವನು ರಾಜ ಭೂಪತಿ ಆದುದರಿಂದ ಅವನಿಗೆ ವಿಧೇಯರಾಗಿರಬೇಕು ಎಂಬ ಭಕ್ತಿ, ತೆರಿಗೆ ಕಟ್ಟದಿದ್ದರೆ ಅವನ ಅಧಿಕಾರಿಗಳು, ಸಾಮಂತರು, ಸೈನ್ಯ ನಮ್ಮ ಆಸ್ತಿಗೆ ಮಾತ್ರವಲ್ಲ ಅಸ್ತಿತ್ವಕ್ಕೂ ಕೂಡಾ ಸಂಚಕಾರ ಬರಬಹುದೆಂಬ ಭಯ ತೆರಿಗೆಗಳನ್ನು ಕಟ್ಟಲು ಕಾರಣವಾಗುತ್ತಿತ್ತು.



ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದವರೂ ತಮ್ಮ ದಬ್ಬಾಳಿಕೆಯ ಮೂಲಕ ಜನರ ಮೇಲೆ ಹಿಡಿತ ಸ್ಥಾಪಿಸಿದ್ದರು. ಅವರು ವಸೂಲಿ ಮಾಡುತ್ತಿದ್ದ ತೆರಿಗೆ, ರೈತರಿಂದ ಗೇಣಿ ಮತ್ತು ಇತರ ಶುಲ್ಕಗಳಲ್ಲಿ ಎಷ್ಟು ಅವರ ಭೋಗ ಜೀವನಕ್ಕೆ, ಎಷ್ಟು ಅವರು ಕಾಲ್ಕೆರೆದು ಮಾಡುತ್ತಿದ್ದ ಕದನಗಳಿಗೆ, ಅದರಲ್ಲಿ ಎಷ್ಟು ರಾಜನಿಗೆ ಸೇರುತ್ತಿತ್ತು ಎಂಬುದು ಯಾರಿಗೂ ತಿಳಿಯುವಂತಿರಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ತೆರಿಗೆಗಳು ಜನರ ಮೇಲೆ ಹೇರುತ್ತಿದ್ದ ಹೊರೆ, ಜನರಲ್ಲಿ ಹುಟ್ಟು ಹಾಕುತ್ತಿದ್ದ ಭಾವನೆ ಬೇರೆ. ಸಂಗ್ರಹವಾಗುತ್ತಿದ್ದ ಪ್ರಮಾಣವೂ ಕೂಡಾ ಬಹಳ ವ್ಯತ್ಯಸ್ತ.

ಆದರೆ ಪ್ರಜಾಪ್ರಭುತ್ವದ ಅಂಗವಾಗಿ ಬಜೆಟ್ ಮೂಲಕ ಸಂಸತ್ತಿನ ಮುಂದೆ ಮಂಡಿಸಲ್ಪಟ್ಟಾಗ ಅದೇ ತೆರಿಗೆ, ಸಾಲಗಳನ್ನು ಪರಿಗಣಿಸುವ ದೃಷ್ಟಿ ಬದಲಾಯಿತು. ವಿಶ್ವದ ಮೊದಲ ಬಂಡವಾಳಶಾಹಿ ದೇಶ ಬ್ರಿಟನ್ ಎಂಬ ತಪ್ಪು ಕಲ್ಪನೆ ಇದೆ. ಆದರೆ ಡಚ್ಚರ ದೇಶವೇ ಮೊದಲ ಬಂಡವಾಳಶಾಹಿ ದೇಶ. ಬ್ರಿಟನ್ನಲ್ಲಿ ಪ್ರಜಾಪ್ರಭುತ್ವದ ಎಲ್ಲ ಬೆಳವಣಿಗೆಗಳು ಆಗುವ ಮೊದಲೇ ಅಲ್ಲಿ ಡಚ್ ಈಸ್ಟ್ ಇಂಡೀಸ್ ಕಂಪನಿಯ ಷೇರುಗಳ ಸಂಗ್ರಹದ ಜಾಯಿಂಟ್ ಸ್ಟಾಕ್ ಕಂಪನಿಯಾಗಿತ್ತು. ಅದರ ಷೇರುಗಳ ಮಾರಾಟಕ್ಕೆ ಸ್ಟಾಕ್ ಮಾರುಕಟ್ಟೆ ಅಸ್ತಿತ್ವಕ್ಕೆ ಬಂದಿತ್ತು. ಬ್ಯಾಂಕುಗಳೂ ಸ್ಥಾಪನೆಗೊಂಡಿದ್ದವು. ಹೀಗೆ ಹೊಸ ಹೊಸ ಆರ್ಥಿಕ ವಿಧಾನಗಳು, ಸಂಸ್ಥೆಗಳು ಚಾಲ್ತಿಯಲ್ಲಿದ್ದ ದೇಶದ ರಾಜಮನೆತನದ ಒಬ್ಬನನ್ನೇ ಬ್ರಿಟನ್ನಿನ ರಾಜನಾಗಲು ಆಹ್ವಾನಿಸಿದ್ದು. ಹೀಗೆ ಬ್ರಿಟನ್ ರಾಜನಾದ ಮೂರನೇ ವಿಲಿಯಂ, ಬ್ರಿಟನ್ನಿನಲ್ಲಿ ಈಗಾಗಲೇ ಸ್ಥಾಪನೆ ಆರಂಭವಾಗಿದ್ದ ಇಂತಹ ಸಂಸ್ಥೆಗಳು ವಿಧಾನಗಳ ಮತ್ತಷ್ಟು ವೇಗದಿಂದ ರೂಢಿಗೆ ತರಲು ಪ್ರೇರಣೆ ಒದಗಿಸಿದ್ದು ಆಶ್ಚರ್ಯವೇನಲ್ಲ. ವಿಶೇಷ ಸಂಗತಿ ಎಂದರೆ, ಬ್ರಿಟನ್ನಿನ ಅಂದಿನ ರಾಜನನ್ನು ಓಡಿಸಲು ಈ ವಿಲಿಯಂನ ಸೈನ್ಯಕ್ಕೆ ಹಣವನ್ನು ಸಾಲವಾಗಿ ನೀಡಿದ್ದು ಡಚ್ ದೇಶದ ಬ್ಯಾಂಕುಗಳು!

ಬಜೆಟ್ ಸೇರಿದ, ಬಾಂಡ್ ರೂಪ ಪಡೆದ ರಾಷ್ಟ್ರೀಯ/ಸರ್ಕಾರಿ ಸಾಲ

ಬಜೆಟ್ ನ ಎರಡು ಮುಖ್ಯ ಅಂಗಗಳು ತೆರಿಗೆ ಮತ್ತು ಸಾಲ. ಸರ್ಕಾರ ತನ್ನ ಅಗತ್ಯಗಳಿಗೆ ಎಷ್ಟು ಹಣ ಬೇಕೋ ಅದನ್ನು ತೆರಿಗೆಗಳ ಮೂಲಕ ಸಂಗ್ರಹಿಸಲು ಪ್ರಯತ್ನಪಡುತ್ತದೆ. ಆದರೆ ಅಷ್ಟು ಹಣ ಸಂಗ್ರಹಿಸಲು ಅವಶ್ಯವಾದಷ್ಟು ತೆರಿಗೆ ಹೇರಿದರೆ ಜನ ಸಹಿಸಿಕೊಳ್ಳುವುದಿಲ್ಲ ಎಂಬ ಭಯ ಸರ್ಕಾರಗಳು ಸಾಲದ ಮೊರೆ ಹೋಗುವಂತೆ ಮಾಡುತ್ತದೆ.

ಹಿಂದಿನ ಲೇಖನವೊಂದರಲ್ಲಿ ಸಾರ್ವಜನಿಕ ಸಾಲಗಳ ಬಗ್ಗೆ ವಿವರಿಸಿದೆ. ಅದರಲ್ಲಿ ಇಂತಹ ಸರ್ಕಾರಿ ಸಾಲಗಳನ್ನು ತೀರಿಸುವವರು ಯಾರು ಎಂಬ ಪ್ರಶ್ನೆಯೊಂದಿಗೆ ಲೇಖನ ಕೊನೆಗೊಳಿಸಿದ್ದೇನೆ. ಸರ್ಕಾರಿ ಸಾಲ ಸಾಮಾನ್ಯವಾಗಿ ರಾಷ್ಟ್ರೀಯ ಸಾಲ, ಸಾರ್ವಜನಿಕ ಸಾಲ ಎಂದೂ ಕರೆಯಲ್ಪಡುತ್ತದೆ. ಅದು ಬಹಳ ಸೂಕ್ತ ಹೆಸರು. ಏಕೆಂದರೆ ಈ ಸಾಲವನ್ನು ತೀರಿಸಬೇಕಾದ್ದು ಇಡೀ ರಾಷ್ಟ್ರದ ಸಾರ್ವಜನಿಕರೇ ಅಲ್ಲವೇ.

ಈಗ ಸರ್ಕಾರ ಪಡೆಯುವ ಎಲ್ಲಾ ಸಾಲ ಬಜೆಟ್ ನ ಅಡಿಯಲ್ಲಿ ಪಡೆಯಲಾಯಿತು. ಅದು ಸಾರ್ವಜನಿಕವಾಗಿ ದಾಖಲಾಯಿತು. ಸಂಸತ್ತಿನಲ್ಲಿ ಮಂಡನೆಯಾದ್ದರಿಂದ ಅದನ್ನು ಪಾವತಿಸಲು ಸಂಸತ್ ಹೊಣೆಗಾರನಾಯಿತು. ಸಂಸತ್ತು ಹೊಣೆಗಾರ ಎಂದರೆ ಜನರೂ ಹೊಣೆಗಾರರು ಎಂದಂತೆ ಅಲ್ಲವೇ.

ರಾಜಪ್ರಭುತ್ವದಲ್ಲಿ ರಾಜ ಪಡೆದ ಸಾಲ ರಾಜನಿಗೆ, ರಾಜನ ಆಪ್ತರಿಗೆ, ಕೆಲ ಅಧಿಕಾರಿಗಳಿಗಷ್ಟೇ ಗೊತ್ತು. ಅವನು ಅದನ್ನು ಸಾಲದ ವಾಯಿದೆಯಂತೆ ತೀರಿಸುತ್ತಾನೋ ಇಲ್ಲವೋ ಎಂಬುದಕ್ಕೆ ರಾಜ ಅಷ್ಟೇ ಗ್ಯಾರಂಟಿ. ರಾಜರುಗಳು ಬದಲಾದರೆ, ರಾಜ್ಯವೇ ಅಸ್ಥಿರವಾದರೆ ಸಾಲದ ಗತಿ ಎಂಬ ಆತಂಕಗಳನ್ನು ಮೀರಿ ಸಾಲ ಕೊಡುವವರು ಅದನ್ನು ವಾಪಸ್ ಪಡೆಯುವಷ್ಟು ಪ್ರಭಾವ ಇದ್ದ ಕೆಲವೇ ದೊಡ್ಡ ಶ್ರೀಮಂತರು. ಅವರಿಗೂ ಕೆಲವೊಮ್ಮೆ ರಾಜರುಗಳು ಬೆದರಿಕೆ ಹಾಕಿದ ಪ್ರಸಂಗಗಳಿದ್ದವು. ಆದ್ದರಿಂದ ರಾಜಪ್ರಭುತ್ವದ ಸ್ಥಿರತೆ, ರಾಜ ಯುದ್ಧದಲ್ಲಿ ತೊಡಗಿದ್ದರೆ ಅದರ ಸೋಲು ಗೆಲುವಿನ ಲೆಕ್ಕಾಚಾರ, ರಾಜನ ವೈಯಕ್ತಿಕ ವರ್ತನೆ ಇವುಗಳ ಮೇಲೆ ಸಾಲ ಎಷ್ಟು ಹುಟ್ಟುತ್ತದೆ ಎಂಬುದು ನಿರ್ಧಾರವಾಗುತ್ತಿತ್ತು. ದೇಶ ದೇಶಗಳ ನಡುವೆ ನಡೆಯುತ್ತಿದ್ದ ಯುದ್ಧಗಳಲ್ಲಿ ಯಾರಿಗೆ ಎಷ್ಟು ಸಾಲ ದೊರಕುತ್ತದೆ ಎಂಬುದರ ಮೇಲೆ ಅವರ ಸೋಲು ಗೆಲುವು ಅವಲಂಬಿಸಿತ್ತು.

ಈಗ ಬಜೆಟ್ನಲ್ಲಿ ಸಾಲದ ಲೆಕ್ಕ ಸೇರಿದ್ದರಿಂದ ಸಾಲಕ್ಕೆ ಬಹು ಮುಖ್ಯ ಗ್ಯಾರಂಟಿ ದೊರಕಿದ್ದರಿಂದ ಶ್ರೀಮಂತರು ಹೆಚ್ಚು ಸಾಲ ಕೊಡಲು ಮುಂದಾದರು. ಆದರೆ ಸರ್ಕಾರಗಳಿಗೆ ಅಷ್ಟೇ ಸಾಕಾಗಲಿಲ್ಲ. ಅದರಲ್ಲೂ ವಿಶ್ವದಲ್ಲೆಲ್ಲ ಸಾಮ್ರಾಜ್ಯ ಸ್ಥಾಪಿಸಬಯಸಿದ್ದ ಬ್ರಿಟನ್ನಿನ ಸರ್ಕಾರಕ್ಕೆ. ಅದರ ವಿವರಗಳನ್ನು ಮುಂದೆ ನೋಡೋಣ.

ಆ ವೇಳೆಗಾಗಲೇ ದೂರ ವಾಣಿಜ್ಯ, ಕುಶಲ ಕರ್ಮಿಗಳ ಉತ್ಪಾದನೆಯ ಬೆಳವಣಿಗೆ ಹಲವು ಸಾವಿರ ಜನರಲ್ಲಿ ಹೆಚ್ಚುವರಿ ಸಂಪತ್ತು ಶೇಖರವಾಗುತ್ತಿತ್ತು. ಆ ವೇಳೆಗೆ ಈ ಸಂಪತ್ತನ್ನು ಸಂಗ್ರಹಿಸಲು ಷೇರು ಕಂಪನಿಗಳು, ಷೇರು ಮಾರುಕಟ್ಟೆ ಸ್ಥಾಪನೆಯಾಗಿತ್ತು.

ಸರ್ಕಾರಕ್ಕೆ ಹೆಚ್ಚುವರಿ ಸಾಲ ಪಡೆಯಲು ಕೂಡಾ ಈ ಮಾರ್ಗವನ್ನು ಬಳಸಿಕೊಳ್ಳಲು ಈ ಸರ್ಕಾರಗಳು ಯೋಚಿಸಿದವು. ಇದಕ್ಕೆ ಕಂಡುಕೊಂಡ ಮಾರ್ಗ ಸರ್ಕಾರಿ ಬಾಂಡ್ಗಳು, ಸೆಕ್ಯುರಿಟಿಗಳು. ನಿರ್ದಿಷ್ಟ ಮೊತ್ತದ ಹಣಕ್ಕಾಗಿ ಯಾರು ಬೇಕಾದರೂ ಸರ್ಕಾರಕ್ಕೆ ನಿರ್ದಿಷ್ಟ ಮೊತ್ತದ ಬಾಂಡ್ ಕೊಳ್ಳುವ ಮೂಲಕ ಹಣ ನೀಡಲು ಅವಕಾಶ ನೀಡಲಾಯಿತು. ಈ ಬಾಂಡ್ ಗಳಲ್ಲಿ ಹಣದ ಮೊತ್ತ, ಅದನ್ನು ಯಾವಾಗ ಮುರಿಸಿಕೊಂಡು ಹಣ ಪಡೆಯಬಹುದು, ಎಷ್ಟು ಬಡ್ಡಿ ಎಂಬೆಲ್ಲ ವಿವರಗಳಿರುತ್ತವೆ. ಈ ಬಾಂಡ್ ಗಳನ್ನು ಪಡೆದವರು ತಮಗೆ ತುರ್ತಾಗಿ ಹಣ ಬೇಕಾದರೆ ಅವುಗಳನ್ನು ಕಂಪನಿಯ ಷೇರುಗಳನ್ನು ಮಾರಿದಂತೆ ಷೇರು ಮಾರುಕಟ್ಟೆಯಲ್ಲಿ ಮಾರಬಹುದು.

ಇಂತಹ ಅವಕಾಶದಿಂದ ಸಣ್ಣ ಮೊತ್ತದ ಬಂಡವಾಳ ಇರುವ ದೊಡ್ಡ ಸಂಖ್ಯೆಯ ಜನ ಭಾಗವಹಿಸಿ ಬಾಂಡ್ ಕೊಂಡರು. ಸರ್ಕಾರಕ್ಕೆ ಹಣ ಸಂಪನ್ಮೂಲಗಳ ಸಂಗ್ರಹ ಹಲವು ಪಟ್ಟು ಹೆಚ್ಚಾಯಿತು. ಕೆಲವೊಮ್ಮೆ ಹತ್ತಾರು ಪಟ್ಟು ಹೆಚ್ಚಾಯಿತು.

ಸರ್ಕಾರದ ಬಾಂಡ್ ಮಾರಾಟ, ಸರ್ಕಾರಕ್ಕೆ ಸಾಲ ನೀಡುವ ವ್ಯವಹಾರಗಳಿಗೆಂದೇ ಬ್ಯಾಂಕ್ ಆಫ್ ಇಂಗ್ಲೆಂಡ್ ಎಂಬ ಖಾಸಗಿ ಬ್ಯಾಂಕನ್ನು ಸಂಸತ್ತಿನ ಕಾಯಿದೆ ಅಡಿಯಲ್ಲಿ ಸರ್ಕಾರದ ಕೇಂದ್ರ ಬ್ಯಾಂಕ್ ಆಗಿ 1694ರಲ್ಲಿ, ಮೊದಲ ಬಜೆಟ್ ಮಂಡನೆಯಾದ ಐದು ವರ್ಷಗಳ ನಂತರ ಸ್ಥಾಪನೆಯಾಯಿತು.

ಹಣ ಉಳ್ಳವರು, ಆದರೆ ತಾವೇ ಕೈಗಾರಿಕೆಗಳ ಸ್ಥಾಪನೆ ಮಾಡಲು, ಹಡಗು ಕೊಂಡು ವಾಣಿಜ್ಯ ಕೈಗೊಳ್ಳಲು ಸಾಧ್ಯವಿಲ್ಲದವರ ಸಣ್ಣ ಬಂಡವಾಳಗಳ ಹೂಡಿಕೆಗೆ ಷೇರುಗಳು, ಬ್ಯಾಂಕ್ ನಲ್ಲಿ ಉಳಿತಾಯ, ಬಾಂಡ್ಗಳನ್ನು ಕೊಳ್ಳುವುದು ಮೊದಲಾದ ಹಲವು ಪರ್ಯಾಯ ಮಾರ್ಗಗಳು ದೊರಕಿದವು. ಈ ವಿಧಾನಗಳಿಂದ ಬಂಡವಾಳ ಸಂಗ್ರಹ ವೇಗೋತ್ಕರ್ಷ ಪಡೆಯಿತು. ಒಂದು ಕಡೆ ಸರ್ಕಾರ, ಮತ್ತೊಂದು ಕಡೆ ಕೈಗಾರಿಕಾ ವಾಣಿಜ್ಯೋದ್ಯಮಿಗಳಿಗೆ ದೊಡ್ಡ ಸಾಹಸಗಳಿಗೆ ಕೈ ಹಾಕುವ ಹುಮ್ಮಸ್ಸು ತುಂಬಿತು.

ಆರಾಮ ಜೀವಿಗಳ ಹುಸಿ ಸಂಸ್ಕೃತಿ

ಹಾಗೆಯೇ ಷೇರು, ಬಾಂಡ್ ಮಾರುಕಟ್ಟೆಗಳು ಕೇವಲ ಮಾರುಕಟ್ಟೆಗಳಾಗಿರಲಿಲ್ಲ. ಈ ಮಾರುಕಟ್ಟೆಗಳಲ್ಲಿ ಷೇರು ಬೆಲೆಗಳು, ಬಾಂಡ್ ಬೆಲೆಗಳು ಹೇಗೆಂದರೆ ಹಾಗೆ ಮೂಲ ಮೌಲ್ಯಕ್ಕೆ ಸಂಬಂಧವಿಲ್ಲದಂತೆ ಏರುಪೇರು ಆಗುವುದು ಕೂಡಾ ಆರಂಭವಾಯಿತು. ಹೀಗೆ ಇವು ಹಣದ ಜೂಜಾಟದ ಸಟ್ಟಾ ಮಾರುಕಟ್ಟೆಗಳೂ ಆಗಿದ್ದವು. ಇವುಗಳಲ್ಲಿ ಹಣ ಹೂಡಿದ ಬಂಡವಾಳಗಾರರು ಪಡೆದ ಲಾಭದ ಪಾಲು (ಡಿವಿಡೆಂಡ್), ಸಟ್ಟಾ ಮಾರುಕಟ್ಟೆಯ ಆದಾಯ ಮುಂತಾದವು ಇವುಗಳನ್ನೇ ಬದುಕಿನ ಆಧಾರವಾಗಿ ಮಾಡಿಕೊಂಡ ಆರಾಮ ಜೀವಿಗಳನ್ನು ಸೃಷ್ಟಿಸಿತು. ದುಡಿಮೆಯ ಶ್ರಮವನ್ನೇ ಕಾಣದ ಆರಾಮ ಜೀವಿಗಳು ದುಡಿಮೆಯನ್ನು, ದುಡಿಮೆಗಾರರನ್ನು ಹೀಗಳೆಯುತ್ತಾ, ತಮ್ಮೆಲ್ಲ ಆರಾಮ ಜೀವನಕ್ಕಾಗಿ ಸಂಜೆ ಪಾರ್ಟಿಗಳು, ಕುಣಿತ, ಕೇಕೆಗಳ ಹೀನ ಸಂಸ್ಕೃತಿಯ ಸೃಷ್ಟಿಕರ್ತರಾದರು. ಇಂತಹ ಜೀವನವನ್ನು ವರ್ಣಿಸುವ, ವೈಭವೀಕರಿಸುವ ಸಾಹಿತ್ಯ, ಅವರ ಅಭಿರುಚಿಗೆ ತಕ್ಕಂತಹ ಸಾಹಿತ್ಯ, ಅವರ ಕುಣಿತಕ್ಕೆ ತಕ್ಕ ಸಂಗೀತ, ಅವರ ಮನೆಯ ಗೋಡೆಗಳನ್ನು ಅಲಂಕರಿಸುವ ವರ್ಣ ಚಿತ್ರಗಳು ಹೀಗೆ ಒಂದು ಸಾಂಸ್ಕೃತಿಕ ಸಮುಚ್ಚಯವೇ ಸೃಷ್ಟಿಯಾಯಿತು.

ಸೇಡಂನಲ್ಲಿ ನಡೆದ ಸಂಘೋತ್ಸವಕ್ಕೆ ಬಸವಲಿಂಗ ಪಟ್ಟದ್ದೇವರು ಹೋಗಿದ್ದೇಕೆ? ಅವರಲ್ಲಿ ಹೋಗುವ, ಹೋಮ ಹವನದ ಕರ್ಮಸಿದ್ಧಾಂತದ ಉತ್ಸವಕ್ಕೆ ಸಾಕ್ಷಿಯಾಗುವ ಗರ್ಜೇನಿತ್ತು? ಅಲ್ಲಿ ಹೋಗಿ ವೈದಿಕತೆಯನ್ನು ಖಂಡಿಸಿದ್ದಾರೆಯೇ? ಬ್ಯಾಹ್ಮಣ್ಯದ ಶ್ರೇಷ್ಠತೆ ಮೆರೆವ ಸಕಲ ಪ್ರಕ್ರಿಯೆ ಅಲ್ಲಿತ್ತು. ಇವರು ಅದನ್ನು ಖಂಡಿಸಿದ್ದಾರೆಯೇ? ಆ ಉತ್ಸವಕ್ಕೆ ಬಂದವರಲ್ಲಿ ಬಹುಳಷ್ಟು ಜನರು ಲಿಂಗಾಯತ ಧರ್ಮಕ್ಕೆ ಮಾನ್ಯತೆ ಸಿಗಬಾರದೆಂದು ಹೇಳಿದ ಪಕ್ಷದವರೇ ಇದ್ದರು. ಅಲ್ಲಿಗೆ ಹೋಗುವ ಮೂಲಕ ಸ್ವಾಮಿಗಳು ತಮ್ಮ ನಿಜ ಬಣ್ಣವನ್ನು ಖಂಡಿತ ಅನಾವರಣಗೊಳಿಸಿದ್ದಾರೆ. ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮಿಗಳಾದ ಚನ್ನಬಸವ ಪಟ್ಟದ್ದೇವರು ಅಪ್ಪಟ ಬಸವಪ್ರೇಮಿಗಳಾಗಿದ್ದರು. ಆದರೆ ಬಸವಲಿಂಗ ಪಟ್ಟದ್ದೇವರು ಮಾತ್ರ ಹೀಗೇಕೆ?

ಭಾಲ್ಕಿ ಸ್ವಾಮಿಗಳ ನಡೆ ಕರ್ಮಸಿದ್ಧಾಂತದ ಕಡೆ ಸಾಗುತ್ತಿದೆಯೇ?

ಕೆ. ನೀಲಾ

ಈಚೆಗೆ ಭಾಲ್ಕಿ ತಾಲ್ಲೂಕಿನ ಮೊರಂಬಿ ಎಂಬಲ್ಲಿ ನಂದಿ ಬಸವೇಶ್ವರ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡಿ ಎಲ್ಲರೂ ಶರಣರ ಸತ್ಸಂಗದಲ್ಲಿ ಇರಬೇಕು ಎಂದು ಹೇಳಿದ್ದಾರೆ. ಸತ್ಸಂಗ ಪ್ರಾಣ ಪ್ರತಿಷ್ಠಾಪನೆ ಇವೆಲ್ಲವೂ ಈಚೆಗೆ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆ ಸಂದರ್ಭದಲ್ಲಿ ಕೇಳಿ ಬಂದವುಗಳಾಗಿವೆ. ಪ್ರಾಣ ಪ್ರತಿಷ್ಠಾಪನೆಯಂತಹ ಉತ್ಸವಗಳು ನಡೆಯುತ್ತಿರುವುದಕ್ಕೆ ಅವರು ಪ್ರಶಂಸೆ ಮಾಡಿದ್ದಾರೆ.

ಬಸವಣ್ಣನೆಂದರೆ ಕಲ್ಲಿನ ಎತ್ತನ್ನು (ನಂದಿಯನ್ನು) ತೋರುತ್ತಿದ್ದರು!!

ನಾವು ಚಿಕ್ಕವರಿದ್ದಾಗ ಬಸವಣ್ಣನೆಂದರೆ ಕಲ್ಲಿನ ಎತ್ತನ್ನು (ನಂದಿಯನ್ನು) ತೋರುತ್ತಿದ್ದರು. ಅನೇಕ ಭಕ್ತಾದಿಗಳು ಬಸವಣ್ಣನ ಗುಡಿಗೆ ಹೋಗಿ ತೆಂಗಿನಕಾಯಿ ಒಡೆದು ಬಿಲ್ವಪತ್ರಿ ಏರಿಸಿ ಬರುತ್ತಿದ್ದರು. ಮನೆಯಲ್ಲಿ ನನ್ನವ್ವ ವಚನ ತತ್ವಪದಗಳನ್ನು ಹಾಡುತ್ತಿದ್ದಳು. ನನ್ನ ತಂದೆಯು ಬಸವಣ್ಣನೆಂದರೆ ಕಲ್ಲು ದೇವರಲ್ಲ, ಮನುಷ್ಯ. ಅಪ್ಪಟ ಸಮಾನತೆಯ ಕನಸುಣಿ. ತಮ್ಮನ್ನು ಗಂಧದಂತೆ ತೇದುಕೊಂಡು ನಮ್ಮ ಬದುಕಿಗೆ ಪರಿಮಳ ಎರೆದವರು. ಶರಣರು ತಮ್ಮ ಮೈಯ ರಕ್ತವನ್ನು ಕಲ್ಯಾಣದ ಪಟ್ಟಣಕ್ಕೆ ಚಲ್ಲಿ, ವೈದಿಕರ ಕ್ರೌರ್ಯದ ಶಿಕ್ಷೆಗೆ ದೇಹ ದಂಡಿಸಿ, ಜೀವನ ಹಂಗು ಹರಿದು ನಮ್ಮ ಬದುಕಿನ ಹಾದಿಯ ಕಲ್ಲು ಮುಳ್ಳುಗಳನ್ನು ತೆಗೆದು ಹಸನಾಗಿಸಿದವರು. ಅವರು ಶರಣ ಸಂಗಾತಿಗಳು ಎಂದು ಹೇಳಿದರು. ನಂತರ ಲಿಂಗಾನಂದ ಸ್ವಾಮಿಯವರ ಪ್ರವಚನ ಕೇಳಿದ ಮೇಲೆ ಬಸವಣ್ಣನೆಂದರೆ ನಂದಿಯಲ್ಲ, ಕಲ್ಲಿನ ಎತ್ತಲ್ಲ, ಬದಲಿಗೆ ಮನುಷ್ಯರಾಗಿದ್ದರು. ನಮ್ಮ ನಿಮ್ಮಂತೆ ಅಂಗಾಂಗಗಳುಳ್ಳ ಉಸಿರುಳ್ಳ ಮನುಷ್ಯರಾಗಿದ್ದರು ಎಂಬುದು ಸಮಾಜದ ಎಲ್ಲರ ಅರಿವಿಗೆ ಬರತೊಡಗಿತು. ವಚನಗಳು ನಿಜ ಚರಿತ್ರೆಯನ್ನು ಬಿಚ್ಚಿಡತೊಡಗಿದವು. ಬಸವಣ್ಣ, ಮಾದಾರ ಚನ್ನಯ್ಯ, ಹಡಪದ ಅಪ್ಪಣ್ಣ, ಸತ್ಯಕ್ಕ, ಸಂಕವ್ವೆ ಹೀಗೆ ಶರಣಾದಿ ಪ್ರಮಥರು ಜನರ ಹೃದಯಕ್ಕಿಳಿಯತೊಡಗಿದರು. ಅಲ್ಲಿಗೆ ವೈದಿಕರು ನಮ್ಮ ಬಸವಣ್ಣ ಮತ್ತು ಶರಣರನ್ನು ಕಲ್ಲಾಗಿಸಿದ ಹುನ್ನಾರ ಬಯಲಾಗಿ ವಿಫಲವಾಗಿ, ಬಸವಣ್ಣ ಮತ್ತು ಶರಣರು 770 ಅಮರಗಣಂಗಳ ಭಾವ ಕೋಶದಲ್ಲಿ ಸೇರತೊಡಗಿದರು. ಮತ್ತೆ ಈಗ ಹೊಸ ಹುನ್ನಾರ ಹೊಸೆದು ವಚನ ಸಾಹಿತ್ಯ ತಿರುಚುವ ಷಡ್ಯಂತ್ರಕ್ಕೆ ಮುಂದಾಗಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ನಮ್ಮದೇ ಕಣ್ಣು ನಮ್ಮದೇ ಬೆರಳು ಮೂಲಕ ನಮ್ಮನ್ನು ಕುರುಡರನ್ನಾಗಿಸಲು ಮುಂದಾಗಿದ್ದಾರೆ. ನಮ್ಮವರನ್ನೇ ಬಲೆಯಲ್ಲಿ ಕೆಡವಿ ಬಲಿಗಟ್ಟುವ ಕುತಂತ್ರ ನಡೆಯುತ್ತಿದೆ.

ಬಸವಲಿಂಗ ಪಟ್ಟದ್ದೇವರು ಮಾತ್ರ ಹೀಗೇಕೆ?

ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮಿಗಳಾದ ಚನ್ನಬಸವ ಪಟ್ಟದ್ದೇವರು ಅಪ್ಪಟ ಬಸವಪ್ರೇಮಿಗಳಾಗಿದ್ದರು. ಆದರೆ ಬಸವಲಿಂಗ ಪಟ್ಟದ್ದೇವರು ಮಾತ್ರ ಹೀಗೇಕೆ? ಕೆಲವು ವರ್ಷಗಳ ಹಿಂದೆ ಮಠದಲ್ಲಿ ಕರ್ಮಸಿದ್ಧಾಂತಿಗಳಿಗೆ ಆಸ್ಪದ ಕೊಡುತ್ತಿರುವ ಸುದ್ದಿ ಹಬ್ಬಿದ್ದಾಗ ನಾವು ಅವರೊಂದಿಗೆ ಬಸವಾನುಯಾಯಿಗಳ ಮನೆಯಲ್ಲಿ ಬಹಳ ಹೊತ್ತು ಚರ್ಚಿಸಿದ್ದೆವು. ಈಚೆಗೆ ಒಂದು ಕಾರ್ಯಕ್ರಮಕ್ಕೆ ಬಂದಾಗ ಸ್ವಾಮಿಯವರು ನನ್ನ ಹೆಸರು ಹೇಳಿಯೇ 'ತಾವು ತಪ್ಪು ಭಾವಿಸಿದ್ದೀರಿ, ನಮ್ಮ ಮಠವು ಎಂದೂ ಬಸವ ಚಿಂತನೆ ಬಿಟ್ಟು ಕೊಡುವುದಿಲ್ಲ. ಮಠದ ಆವರಣದಲ್ಲಿ ಯಾರೆಲ್ಲ ಕಾರ್ಯಕ್ರಮ ಮಾಡಿರುತ್ತಾರೆ. ನಾವು ಅವರಂತಲ್ಲ' ಎಂದು ಹೇಳಿದ್ದರು. ಮಠದ ಆವರಣವೂ ಸಹ ಕರ್ಮಸಿದ್ಧಾಂತಿಗಳಿಗೆ ಯಾಕೆ ಬಿಟ್ಟುಕೊಡಬೇಕು ಎಂದು ಪ್ರಶ್ನಿಸಲಾಗಿತ್ತು. ಕೆಲವು ತಿಂಗಳ ಹಿಂದೆ ಇರಬೇಕು, ವಿಶ್ವ ಹಿಂದೂ ಪರಿಷತ್ ನವರು ತಮ್ಮ ಒಂದು ಕಾರ್ಯಕ್ರಮಕ್ಕೆ ಬಸವಲಿಂಗ ಪಟ್ಟದ್ದೇವರು ಅವರ ಹೆಸರು ಮತ್ತು ಫೋಟೊ ಹಾಕಿದ್ದರು. ಅದನ್ನು ಪ್ರಶ್ನಿಸಿದಾಗ ತಮಗೆ ಕೇಳದೇ ಬಳಸಿದ್ದಾರೆ ಅದಕ್ಕೆ ತಮ್ಮ ಒಪ್ಪಿಗೆ ಇಲ್ಲ ಎಂದು ಹೇಳಿದ್ದು ನನಗೆ ನೆನಪಿದೆ.

ಅದು ಹೇಗೆ ಶರಣ ತತ್ವ ವಿರೋಧಿಗಳು ನಮ್ಮ ಹೆಸರು ಬಳಸುತ್ತಾರೆ? ಯಾಕೆ? ನಾವು ಅವರಿಗೆ ಸ್ಪೇಸ್ ಕೊಟ್ಟಿದ್ದೀವಾ? ಅಥವ ಅವರೇ ಆ ಸ್ಪೇಸ್ ಬಳಸಿಕೊಳ್ಳುತ್ತಿದ್ದಾರೆ? ನಮ್ಮ ಪ್ರಶ್ನೆಗೆ ಉತ್ತರ ಸಿಕ್ಕಿದ್ದು ಸೇಡಂನಲ್ಲಿ ನಡೆದ ಸಂಘೋತ್ಸವಕ್ಕೆ ಸ್ವಾಮಿಯವರು ಹೋಗಿದ್ದು. ಆ ಕಾರ್ಯಕ್ರಮವು ನೇರಾನೇರವಾಗಿ ವಚನ ತತ್ವ ವಿರೋಧಿಯೇ ಆಗಿತ್ತು.

ಬಸವರಾಜ ಪಾಟೀಲ ಸೇಡಂ ಅವರು ಶರಣರ ತತ್ವ ತಿರುಚುವ 'ವಚನ ದರ್ಶನ' ಪುಸ್ತಕ ವಿರೋಧ ಮಾಡಿದ್ದಾರೆಯೇ? ಮನುಸ್ಮೃತಿ ತಪ್ಪೆಂದು ಹೇಳುವರೆ? ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ಬೆಂಬಲ ಸೂಚಿಸಿದ್ದಾರೆಯೇ? ಬಸವಾದಿ ಶರಣರ ಚಿಂತನೆಗಳನ್ನು ಒಪ್ಪಿ, ಅಪ್ಪಿ, ಅದರಲ್ಲಿ ಒಂದಾದರೂ ಜಾರಿ ಮಾಡಿತ್ತಿದ್ದಾರೆಯೇ? ಇಲ್ಲವೆಂಬುದು ಬೆಳಕಿನಷ್ಟೇ ಸತ್ಯವಾಗಿದೆ. ಹೀಗಿದ್ದಾಗ ಅವರಲ್ಲಿ ಹೋಗುವ, ಹೋಮ ಹವನದ ಕರ್ಮಸಿದ್ಧಾಂತದ ಉತ್ಸವಕ್ಕೆ ಸಾಕ್ಷಿಯಾಗುವ ಗರ್ಜೇನಿತ್ತು? ಅಲ್ಲಿ ಹೋಗಿ ವೈದಿಕತೆಯನ್ನು ಖಂಡಿಸಿದ್ದಾರೆಯೇ? ಬ್ಯಾಹ್ಮಣ್ಯದ ಶ್ರೇಷ್ಠತೆ ಮೆರೆವ ಸಕಲ ಪ್ರಕ್ರಿಯೆ ಅಲ್ಲಿತ್ತು. ಇವರು ಅದನ್ನು ಖಂಡಿಸಿದ್ದಾರೆಯೇ? ಆ ಉತ್ಸವಕ್ಕೆ ಬಂದವರಲ್ಲಿ ಬಹುಳಷ್ಟು ಜನರು ಲಿಂಗಾಯತ ಧರ್ಮಕ್ಕೆ ಮಾನ್ಯತೆ ಸಿಗಬಾರದೆಂದು ಹೇಳಿದ ಪಕ್ಷದವರೇ ಇದ್ದರು. ಅಲ್ಲಿಗೆ ಹೋಗುವ ಮೂಲಕ ಸ್ವಾಮಿಗಳು ತಮ್ಮ ನಿಜ ಬಣ್ಣವನ್ನು ಖಂಡಿತ ಅನಾವರಣಗೊಳಿಸಿದ್ದಾರೆ.

ಆದರೆ ಮೊರಂಬಿಯ ಕಾರ್ಯಕ್ರಮ ಮತ್ತು ಅವರು ಬಳಸಿದ ಪರಿಭಾಷೆ, ಬಸವಣ್ಣನನ್ನು ಕಲ್ಲಿನ ಎತ್ತು ಮಾಡಿ ಅದಕ್ಕೆ ಪ್ರಾಣ ಪ್ರತಿಷ್ಠಾಪನೆ ಮಾಡುವ ಪ್ರಕ್ರಿಯೆಯನ್ನು ಬೆಂಬಲಿಸಿದ್ದು, ಶ್ಲಾಘಿಸಿದ್ದು, ಎಲ್ಲವೂ ಅವರ ನಡೆ, ನುಡಿ, ನಿಲುವು ಸ್ಫುಟಗೊಳಿಸಿದೆ. ನಮ್ಮ ವಚನ ಸಾಹಿತ್ಯವೇ ಪರಾಮರ್ಶೆಗೆ ಒದಗಿ ಬರುವ ಮಾನದಂಡವಾಗಿದೆ. ಮೊರಂಬಿಯ ಕಾರ್ಯಕ್ರಮವು ವಚನ ಸಾಹಿತ್ಯದ ಸಂಪೂರ್ಣ ವಿರೋಧಿ ನೆಲೆಯಿಂದ ಕೂಡಿದೆ ಎಂಬುದು ಪ್ರತಿ ಹಂತವೂ ಋಜುಗೊಳಿಸುತ್ತದೆ.



ದೇಹವನ್ನೇ ದೇವಾಲಯದೆತ್ತರಕ್ಕೆ ಒಯ್ದಿದ್ದಾರೆ

ಕಲ್ಲಿನ ನಂದಿಗೆ ಬಸವೇಶ್ವರ ಮೂರ್ತಿ ಎಂದು ಹೆಸರಿಟ್ಟು ಪ್ರಾಣ ಪ್ರತಿಷ್ಠಾಪನೆ ಮಾಡುವುದು ಅಂದರೆ ಏನು? ಪ್ರಾಣ ಪ್ರತಿಷ್ಠಾಪನೆ, ಪುನರ್ಜನ್ಮ, ಪಾಪ–ಪುಣ್ಯ ಇವೆಲ್ಲವೂ ವೈದಿಕರು, ಶೂದ್ರ, ದಲಿತ, ದಮನಿತ ಮತ್ತು ಸಮಸ್ತ ಮಹಿಳೆಯರನ್ನು ತಮ್ಮ ಗುಲಾಮರನ್ನಾಗಿಸಿಕೊಳ್ಳಲು ಹುಟ್ಟಿಸಿದ ಸುಳ್ಳುಗಳೆಂಬುವುದು ನಮ್ಮ ಶರಣರು ನೇರವಾಗಿ ಹೇಳಿದ್ದಾರಲ್ಲವೆ? ಹಾಗೆ ನೋಡಿದರೆ ಶರಣರ ಚಿಂತನೆ ಮತ್ತು ಚಳುವಳಿ ಎರಡೂ ಈ ಕರ್ಮಸಿದ್ಧಾಂತದ ವಿರುದ್ಧವೇ ಆಗಿತ್ತಲ್ಲವೆ? ಬಸವಣ್ಣನನ್ನು ಮತ್ತೆ ಕಲ್ಲು ಮಾಡುವ ಪ್ರಾಣ ಪ್ರತಿಷ್ಠಾಪನೆಯ ಪ್ರಕ್ರಿಯೆಯೇ ಕರ್ಮಸಿದ್ಧಾಂತವಾಗಿದೆ. ಸತ್ಸಂಗದಲ್ಲಿ ನಿರತರಾಗುವುದು ಎಂದರೆ ಏನು? ಇದೂ ಸಹ ಕರ್ಮಸಿದ್ಧಾಂತದ ಪರಿಕಲ್ಪನೆ ಅಲ್ಲವೆ? ಕಾಯಕದಲ್ಲಿ ನಿರತರಾದಡೆ ಗುರು ಲಿಂಗ ಜಂಗಮದ ಹಂಗು ಹರಿಯಬೇಕು ಎಂದು ಶರಣರು ಹೇಳಿಲ್ಲವೆ? ಅರ್ಚನೆ ಪೂಜನೆ ನೇಮವಲ್ಲ, ಮಂತ್ರ ತಂತ್ರ ನೇಮವಲ್ಲ ಎಂಬ ವಚನ ಏನನ್ನು ಸೂಚಿಸುತ್ತದೆ? ಉಸುರಿನ ಪರಿಮಳವಿರಲು ಕುಸುಮದ ಹಂಗೇತಕಯ್ಯ ಎಂದು ಅಕ್ಕ ಹೇಳಿಲ್ಲವೆ? ಬಸವಣ್ಣನ ವಚನವಂತೂ ಬಹಳ ಸ್ಪಷ್ಟವಾಗಿ ದೇವಾಲಯವನ್ನು ತಿರಸ್ಕರಿಸಿ ದೇಹವನ್ನೇ ದೇವಾಲಯದೆತ್ತರಕ್ಕೆ ಒಯ್ದಿದ್ದಾರೆ. 'ಉಳ್ಳವರು ಶಿವಾಲಯವ ಮಾಡುವರು. ನಾನೇನು ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಭ ದೇಹವೇ ದೇಗುಲ ಶಿರ ಹೊನ್ನ ಕಳಸವಯ್ಯ..' ಎಂದರು. ಕಾಯಕ ಜೀವಿಗಳನ್ನು ಗುಡಿ ಸಂಪ್ರದಾಯದ ಮೌಢ್ಯಕ್ಕೆ ನೂಕಿ ಅವರನ್ನು ಅಜ್ಞಾನಿಗಳನ್ನಾಗಿ ಮಾಡುವ ಕುತಂತ್ರ ಶರಣರಿಗೆ ಗೊತ್ತಿತ್ತು. ಆದ್ದರಿಂದಲೇ ವೈಜ್ಞಾನಿಕ ಮತ್ತು ನಿಸರ್ಗ ಸತ್ಯದ ಸಂಬಂಧಗಳನ್ನು ಹೇಳಿದರು. ಉಳ್ಳವರು ತಮ್ಮ ಹಿತಾಸಕ್ತಿಗಾಗಿ ಶಿವಾಲಯ ಮಾಡುವರು. ಆದರೆ ಕಾಯಕ ಜೀವಿಗಳೇ ನಿಜವಾದ ದೇವರು. ಅವರ ಕಾಯದಿಂದಲೇ, ಕಾಯಕದಿಂದಲೇ ಈ ಲೋಕ ಬೆಳಗಿದೆ ಎಂಬ ಸ್ಪಷ್ಟತೆಯನ್ನು ಕೊಟ್ಟರು. ಕಾಯಕ ಜೀವಿಗಳ ಕಾಯದಿಂದ ಕಾಯಕ. ಕಾಯಕದಿಂದ ಲೋಕ ವಾದ ಕಾರಣ ಅವರ ದೇಹವೇ ದೇವಾಲಯಗೊಳಿಸಿದರು. ಅವರನ್ನು ಬಡವರನ್ನಾಗಿ ಮಾಡಿದ ಉಳ್ಳವರ ದೇವಾಲಯವನ್ನು ಧಿಕ್ಕರಿಸಿದರು, ತಿರಸ್ಕರಿಸಿದರು ಮತ್ತು ಜನತೆಯನ್ನು ಆ ಮೌಢ್ಯದಿಂದ ಬಿಡುಗಡೆಗೊಳಿಸಿದರು. ಅರ್ಥಾತ್ ಕರ್ಮಸಿದ್ಧಾಂತದ ಮೌಢ್ಯದಿಂದ ಬಿಡುಗಡೆಗೊಳಿಸಿದರು. ಇದು ಸ್ವಾಮಿಗಳಿಗೆ ಹೇಗೆ ಅರ್ಥವಾಗುವುದು? ಅವರಿಗೆ ಭೇದ ಭಾವದ ಗಾಳಿಯೇ ಸೋಕಿಲ್ಲವಲ್ಲ. ವಚನ ಸಾಹಿತ್ಯ ತಿರುಚುವಿಕೆಯ ಶಕ್ತಿಗಳೊಂದಿಗೆ ಅವರ ಸಿದ್ಧಾಂತದೊಂದಿಗೆ ಕೈ ಜೋಡಿಸುವುದೆಂದರೆ ಏನು ಎಂಬುದು ಅವರ ಅರಿವಿಗೆ ಬರಬೇಕು.

> **ಲಿಂಗಾಯತ ಎಂಬುದು ಜಾತಿಯಲ್ಲ. ಅದೊಂದು ತತ್ವ. ಸಕಲ ಜೀವರಿಗೆ ಲೇಸು ಬಯಸುವ ತತ್ವ. ವರ್ಗ, ವರ್ಣ, ಲಿಂಗ, ಜಾತಿ ತಾರತಮ್ಯವನ್ನು ಕಿತ್ತು ಹಾಕುವ ತತ್ವ. ಸರ್ವ ಸಮಾನತೆಯ ಭೂಮಂಡಲ ಕಟ್ಟುವ, ಅರ್ಥಾತ್ ಮನುಷ್ಯರಿಂದ ಮನುಷ್ಯರ ಶೋಷಣೆಯಿಲ್ಲದ ಸಮಾಜ ಕಟ್ಟುವ ಸಿದ್ಧಾಂತವನ್ನು ಯಾರು ಆಯ್ಕೆ ಮಾಡಿಕೊಳ್ಳುವರೊ ಅವರು ಲಿಂಗಾಯತರು. ಇದನ್ನು ಆಗು ಮಾಡಲಿಕ್ಕಾಗಿ ಈ ಗುರಿ ಗಮ್ಯವನ್ನು ತಲುಪಲಿಕ್ಕಾಗಿ ಬಸವಣ್ಣ ಮತ್ತು ಶರಣರು ನೆಚ್ಚಿದ್ದು ಪ್ರಭುತ್ವವನ್ನಲ್ಲ, ರಾಜಶಾಹಿಯನ್ನಲ್ಲ, ಅಥವ ಉಳ್ಳವರನ್ನಲ್ಲ. ಇದನ್ನು ಆಗು ಮಾಡುವವರು ಕಾಯಕ ಜೀವಿಗಳು ಎಂಬ ಸ್ಪಷ್ಟತೆ ಶರಣರಿಗಿತ್ತು.**

ನನ್ನೊಳಗಿನ ಹೆಣ್ತನವೆಂಬ ಸೂತಕ ಅಳಿಸಿ ಹಾಕಿದ್ದು ನಮ್ಮ ಶರಣರು

ಇಂದಿನ ಲಿಂಗಾಯರು ಅಂದಿನ ಅಸ್ಪೃಷ್ಯರೇ ಹೌದಲ್ಲವೆ? ಶೂದ್ರ, ದಲಿತ, ದಮನಿತ, ಹಿಂದುಳಿದ ಮತ್ತು ಸಮಸ್ತ ಮಹಿಳೆಯರು ಇಂದು ತಲೆಯೆತ್ತಿ ಘನತೆಯಿಂದ ನಡೆಯುತ್ತಿದ್ದೇವೆಂದರೆ ಅದಕ್ಕೆ ಶರಣರ ತ್ಯಾಗ ಬಲಿದಾನಗಳು ಕಾರಣವಾಗಿವೆ. ಮನುಸ್ಮೃತಿ ಹೆಣ್ಣೆಂದರೆ ನರಕವೆಂದಿದೆ. ಅದರ ಒಂಬತ್ತನೆಯ ಅಧ್ಯಾಯ ಓದಬಹುದು. ಸ್ತ್ರೀ ಎಂದರೆ ಜನ್ಮಜಾತೆ ಚಂಚಲೆ ಮತ್ತು ವ್ಯಭಿಚಾರಿ ಎನ್ನುತ್ತದೆ ಮನುಸ್ಮೃತಿ. ಅರ್ಥಾತ್ ಬಸವರಾಜ ಪಾಟೀಲ ಸೇಡಂ ಅವರು ನಂಬಿಕೊಂಡಿರುವ ಸಿದ್ಧಾಂತ. ನಾನಿದನ್ನು ಬರೆಯುವಾಗ ಬಹಳ ನೋವಿನಿಂದ ಅಕ್ಷರ ಪೋಣಿಸುತ್ತಿದ್ದೇನೆ. ಸಂಪೂರ್ಣ ಸಮಾನತೆಗಾಗಿ ವೈಜ್ಞಾನಿಕ ಚಿಂತನೆ ಮತ್ತು ಸೂತ್ರ ಹೆಣೆದುಕೊಟ್ಟ ಕಾರ್ಲ್ ಮಾರ್ಕ್ಸ್ ನೆಡೆಗೆ ಬೆಳಕು ಬೀರಿ ದಾರಿಗಾಣಿಸಿದ್ದು ನಮ್ಮ ಬಸವಣ್ಣ, ಅಲ್ಲಮ ಪ್ರಭುದೇವರು, ಅಕ್ಕ, ದಾಸಿಮಯ್ಯ, ಸಮಸ್ತ ಶರಣರು. ನನ್ನೊಳಗಿನ ಹೆಣ್ತನವೆಂಬ ಸೂತಕ ಅಳಿಸಿ ಹಾಕಿದ್ದು ನಮ್ಮ ಶರಣರು. ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ, ಗಂಡು ಗಂಡಾದಡೆ ಹೆಣ್ಣಿನ ಸೂತಕ/ ಮನದ ಸೂಕತ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ? ಮುನ್ನಿಲ್ಲದ ಸೂತಕಕ್ಕೆ ಜಗ ಮರುಳಯಾತು/ ಎನ್ನ ದೇವ ಚನ್ನಮಲ್ಲಿಕಾರ್ಜುನನೆಂಬ

ಪುಟ 4 ಕ್ಕೆ

ಭಾಲ್ಕಿ ಸ್ವಾಮಿಗಳ ನಡೆ ಕರ್ಮಸಿದ್ಧಾಂತದ ಕಡೆ ಸಾಗುತ್ತಿದೆಯೇ.........

ಪುಟ 3 ರಿಂದ

ಗರುವಂಗೆ ಜಗವೆಲ್ಲ ಹೆಣ್ಣು ನೋಡಾ/ ಎಂದು ಅಕ್ಕ ಜಗತ್ತಿನವರ ಮನಕ್ಕಂಟಿ ಮರುಳಾದ ಸೂತಕ ನೀಗಿಕೊಳ್ಳಬೇಕು ಎಂಬುದು ಕಲಿತಿದ್ದು ಶರಣರಿಂದ. ಇದು ಸ್ವಾಮಿಗಳಿಗೆ ಅರ್ಥವಾಗುವುದಿಲ್ಲ. ಹೆಣ್ಣನ್ನು ಮಾಯೆ ಎಂದು ಕರ್ಮಸಿದ್ಧಾಂತ ಹೇಳಿದರೆ, ಮನದ ಮುಂದಣ ಆಸೆಯೇ ಮಾಯೆ, ಹೆಣ್ಣು ಸಾಕ್ಷಾತ ಕಪಿಲ ಸಿದ್ದಮಲ್ಲಿಕಾರ್ಜುನ ಎಂದು ಹೇಳಿಲ್ಲವೆ? ಅರಿವಿಂಗೆ ಬೇರೊಂದೊಡಲಿಲ್ಲ ಎಂದರು. ಅಂದಿನ ಪಾಳೇಗಾರಿ ಊಳಿಗಮಾನ್ಯ ವ್ಯವಸ್ಥೆಯನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿದ್ದ ಪೌರೋಹಿತಶಾಹಿಯನ್ನು ಅತ್ಯಂತ ಧೈರ್ಯದಿಂದ ಎದುರು ಹಾಕಿಕೊಂಡ ಅವರ ಸುಳ್ಳು ಸೃಷ್ಟಿಯನ್ನೆಲ್ಲ ಒಂದೊಂದೇ ಅನಾವರಣಗೊಳಿಸಿ ಸತ್ಯ ತೋರಿದರವಲ್ಲವೆ.

ವಚನ ಸಾಹಿತ್ಯ ವೇದಗಳ ಮುಂದುವರಿಕೆಯೇ!!

ವಚನ ಸಾಹಿತ್ಯ ವೇದಗಳ ಮುಂದುವರಿಕೆ ಎಂದು ಹೇಳಿದ್ದಾರಲ್ಲ ಇದೇ ಬಸವರಾಜ ಪಾಟೀಲ ಸೇಡಂ ಅವರ ಗೆಳೆಯರು. ಇದು ಸತ್ಯವೇ? ಹೌದೆ? ಖಂಡಿತ ಇಲ್ಲ. ವೇದ, ಆಗಮ, ಪುರಾಣ, ಶಾಸ್ತ್ರಗಳೆಲ್ಲವನ್ನು ಗುಡಿಸಿ ಬೀಸಾಕಿದರು. ಅವುಗಳೊಳಗಿನ ಟೊಳ್ಳುತನವನ್ನು ಬಯಲುಗೊಳಿಸಿದರು. ಅವು ಪೋಷಿಸುವ ಅಸ್ಪೃಶ್ಯಾಚರಣೆಯನ್ನು ಬಹಳ ಮಾರ್ಮಿಕವಾಗಿ ಅನಾವರಣ ಮಾಡುತ್ತಾರೆ ಬಸವಣ್ಣ. ವೇದ ನಡುನಡುಗಿತ್ತು/ ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯ/ ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯ/ ಆಗಮ ಹೆರತೊಲಗಿ ಅಗಲಿದ್ದಿತಯ್ಯ/ನಮ್ಮ ಕೂಡಲ ಸಂಗಯ್ಯನು/ ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ ಎನ್ನುತ್ತಾರೆ ಬಸವಣ್ಣ. ಈ ವೈದಿಕರ ವರ್ಣ ವ್ಯವಸ್ಥೆಯಲ್ಲಿ ಮಾದಾರ ಚೆನ್ನಯ್ಯನವರ ಸಮಾಜಕ್ಕೆ ಸ್ಥಾನವೇ ಇಲ್ಲ. ವರ್ಣ ವ್ಯವಸ್ಥೆಯು ಬ್ರಹ್ಮನೇ ಸೃಷ್ಟಿಸಿದ ಎಂದು ಸುಳ್ಳು ಹೇಳುತ್ತಾರೆ ವೈದಿಕರು. ಇದನ್ನು ನಮ್ಮ ಶರಣರು ಮೂಲದಲ್ಲಿಯೇ ತಿರಸ್ಕರಿಸುತ್ತಾರೆ. ಯಾರನ್ನೂ ಕರ್ಮಸಿದ್ಧಾಂತದ ಪ್ರಕಾರ ಕಟ್ಟಕಡೆಯಲ್ಲಿ ದೂಡಿ ಪ್ರಾಣಿಗಳಿಗಿಂತಲೂ ಕಡೆಯಾಗಿ ನೋಡಲಾಗಿತ್ತೋ, ಆ ಸಮುದಾಯದ ಮಾದಾರ ಚೆನ್ನಯ್ಯನ ಮನೆಯಲ್ಲಿ ಸ್ವತಃ ಕೂಡಲಸಂಗಯ್ಯನೇ ಉಣ್ಣುತ್ತಾನೆ. ಆಗ ಇವರ ವೇದ, ಆಗಮ, ತರ್ಕ, ಶಾಸ್ತ್ರಗಳ ಗತಿ ಏನಾಯಿತು ಎಂಬುದನ್ನು ವಚನ ಅರ್ಥಪೂರ್ಣವಾಗಿ ನಿರ್ವಚಿಸುತ್ತದೆ. ಮಾತ್ರವಲ್ಲ ಬಸವಣ್ಣ ತಾನು ಮಾದಾರ ಚೆನ್ನಯ್ಯನ ಮನೆಯ ದಾಸಿಯ ಮಗ, ಡೋಹಾರ ಕಕ್ಕಯ್ಯನ ಮನೆಯ ದಾಸಿಯ ಮಗಳು ಬೆರಣಿಗೆ ಹೋದಾಗ ಅವರ ಹುಟ್ಟಿದ ಮಗ ನಾನು, ಎನಗೆ ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ ಎನ್ನುತ್ತಾರೆ. ಎಲ್ಲ ರೀತಿಯ ಭೇದ ಭಾವ ಪೋಷಿಸುವ ಅಸಮಾನ ಬ್ರಾಹ್ಮಣ್ಯವನ್ನು ಬಸವಣ್ಣ ಖಂಡತುಂಡವಾಗಿ ಧಿಕ್ಕರಿಸಿ 'ಏನಯ್ಯ ವಿಪ್ರ, ನುಡಿದಂತೆ ನಡೆಯರು, ತನಗೊಂದು ಬಟ್ಟೆ ಲೋಕಕ್ಕೊಂದು ಬಟ್ಟೆ' ಎಂದು ಬಹಿರಂಗವಾಗಿ ಹೇಳುತ್ತಾರೆ. ಇದು ಸ್ವಾಮಿಗಳಿಗೆ ಪಚನವಾಗಿದ್ದರೆ ಒಳ್ಳೆಯದಿತ್ತು.

ಸಿದ್ಧಾಂತವನ್ನು ಮೂಲೆಗೊತ್ತಿ ಆಸ್ತಿಗಾಗಿಯೇ ಜಗಳ, ಕೋರ್ಟು, ಕಚೇರಿ

ಲಾಂಛನಗಳನ್ನು ಮಾತ್ರ ಧರಿಸಿ ಮುಂದೆ ಮಾಡಿ ಬಸವಣ್ಣ ಮತ್ತು ಶರಣರ ಹೆಸರಿನಲ್ಲಿ ಮಠ ಪೀಠಗಳಿಗೆ ದೊಡ್ಡವರಾಗಿ ಕುಳಿತಿರುವಿರಿ. ಮಠ ಪೀಠಗಳಿಗೆ ಆಸ್ತಿಯೂ ತಳುಕು ಹಾಕಿಕೊಂಡಿದೆ. ಮತ್ತು ಸಿದ್ಧಾಂತವನ್ನು ಮೂಲೆಗೊತ್ತಿ ಆಸ್ತಿಗಾಗಿಯೇ ಜಗಳ, ಕೋರ್ಟು, ಕಚೇರಿ ಮಾಡಲಾಗುತ್ತಿದೆ. ಆರ್ಥಿಕ ಲಾಭಕ್ಕಾಗಿಯೇ ಎಲ್ಲ ಸಂಚಲನೆಯೆ? ಹಾಗೆ ನೋಡಿದರೆ ವಚನ ಸಾಹಿತ್ಯದಲ್ಲಿ ಅಥವ ಚಳುವಳಿಯಲ್ಲಿ ಮಠ ಪೀಠ ಸನ್ಯಾನಸತ್ವಕ್ಕೆ ಉಲ್ಲೇಖಗಳಿಲ್ಲ. ಮತ್ತು ಸಮರ್ಥನೆಯಿಲ್ಲ. ಆದಾಗ್ಯೂ ನಮ್ಮ ಮುಗ್ಧ ಭಕ್ತಾದಿಗಳು ಹೇಗಾದರೂ ಮಾಡಿ ಲಿಂಗಾಯತ್ ತತ್ವವು ಎಲ್ಲೆಡೆ ಬೆಳಕಾಗಲಿ ಎಂಬ ಕಾರಣಕ್ಕೆ ಮಠ ಪೀಠಗಳಿಗೆ ನಡೆದುಕೊಳ್ಳುತ್ತಿದ್ದಾರೆ. ಆದರೆ ತಾವು ಮಾತ್ರ ಲಾಂಛನ ಮಾತ್ರ ಇಟ್ಟುಕೊಂಡು ಬಸವ ತತ್ವಕ್ಕೆ ವಚನ ಸಿದ್ಧಾಂತಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಹುದೆ? ಪ್ರಾಣ ಪ್ರತಿಷ್ಠಾಪನೆ, ಕಲ್ಲು ನಂದಿ, ಸತ್ಸಂಗ ಇತ್ಯಾದಿಗಳೆಲ್ಲವನ್ನು ಜನಮಾನಸದ ತಲೆಯಲ್ಲಿ ಸೇರಿಸಿ ವೈದಿಕತೆಯ ಗುಲಾಮಗಿರಿಯತ್ತ ಹೊರಳಿಸುವುದು ಎಂದರೆ ಏನು? ಲಾಂಛನಕ್ಕೆ ತಕ್ಕ ನಡೆ ಇಲ್ಲದಿದ್ದರೆ ಥೀ ಎಂಬೆ ಎಂದು ನಮ್ಮ ಶರಣರು ಹೇಳಿಲ್ಲವೆ?

ಲಿಂಗಾಯತ ಎಂಬುದು ಜಾತಿಯಲ್ಲ, ಅದೊಂದು ತತ್ವ

ಒಂದು ಸತ್ಯ ಈ ಹೊತ್ತಿನಲ್ಲಿಯೇ ಹೇಳಬಯಸುತ್ತೇನೆ. ಲಿಂಗಾಯತ ಎಂಬುದು ಜಾತಿಯಲ್ಲ. ಅದೊಂದು ತತ್ವ. ಸಕಲ ಜೀವರಿಗೆ ಲೇಸು ಬಯಸುವ ತತ್ವ. ವರ್ಗ, ವರ್ಣ, ಲಿಂಗ, ಜಾತಿ ತಾರತಮ್ಯವನ್ನು ಕಿತ್ತು ಹಾಕುವ ತತ್ವ. ಸರ್ವ ಸಮಾನತೆಯ ಭೂಮಂಡಲ ಕಟ್ಟುವ, ಅರ್ಥಾತ್ ಮನುಷ್ಯರಿಂದ ಮನುಷ್ಯರ ಶೋಷಣೆಯಿಲ್ಲದ ಸಮಾಜ ಕಟ್ಟುವ ಸಿದ್ಧಾಂತವನ್ನು ಯಾರು ಆಯ್ಕೆ ಮಾಡಿಕೊಳ್ಳುವರೊ ಅವರು ಲಿಂಗಾಯತರು. ಇದನ್ನು ಆಗು ಮಾಡಲಿಕ್ಕಾಗಿ ಈ ಗುರಿ ಗಮ್ಯವನ್ನು ತಲುಪಲಿಕ್ಕಾಗಿ ಬಸವಣ್ಣ ಮತ್ತು ಶರಣರು ನೆಚ್ಚಿದ್ದು ಪ್ರಭುತ್ವವನ್ನಲ್ಲ, ರಾಜಶಾಹಿಯನ್ನಲ್ಲ, ಅಥವ ಉಳ್ಳವರನ್ನಲ್ಲ. ಇದನ್ನು ಆಗು ಮಾಡುವವರು ಕಾಯಕ ಜೀವಿಗಳು ಎಂಬ ಸ್ಪಷ್ಟತೆ ಶರಣರಿಗಿತ್ತು. ಆದ್ದರಿಂದಲೇ ಬಿಜ್ಜಳನ ಪಾದಕ್ಕೆ ಕಿರೀಟವಿಟ್ಟು ಬಸವಣ್ಣ ನಡೆದಿದ್ದು 770 ಅಮರಗಣಂಗಳೆಂಬ ಕಾಯಕ ಜೀವಿಗಳತ್ತ. ಅವರಿಗಾಗಿ ಕಟ್ಟಿದ ತತ್ವವನ್ನು ಚಳುವಳಿಯನ್ನು ಮುನ್ನಡೆಸಬಲ್ಲವರು ಮಾದಾರ ಚೆನ್ನಯ್ಯ, ಹಡಪದ ಅಪ್ಪಣ್ಣ, ನನ್ನವ್ವ ಸೂಳೆ ಸಂಕವ್ವೆ, ಸತ್ಯಕ್ಕ ಮುಂತಾದವರೆಲ್ಲ ಈ ಸಿದ್ಧಾಂತವನ್ನು ಎದೆಗಪ್ಪಿಕೊಂಡು ಪ್ರಾಣ ತೆತ್ತಾದರೂ ಇದನ್ನು ಉಳಿಸುವರು ಎಂಬ ಭರವಸೆ ಇತ್ತು. ಇದಕ್ಕೆ ಪುರಾವೆ ಎಂಬಂತೆ ಚರಿತ್ರೆ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತದೆ. ಕಲ್ಯಾಣ ಪಟ್ಟಣದಲ್ಲಿ ವಿಪ್ಲವ ನಡೆಯಿತು. ವೈದಿಕರ ಕುತಂತ್ರ ಫಲಿಸಿತು. ಜಾತಿ ಬಿಟ್ಟು ಮನುಷ್ಯರಾಗಿ ಮಧುವರಸ ಹರಳಯ್ಯರ ಮಕ್ಕಳ ಮದುವೆಯಾಗುವುದು. ಜಾತಿ ವ್ಯವಸ್ಥೆಯ ಪೋಷಣೆಗೆ ಮದುವೆಯೆಂಬ ಸಂಸ್ಥೆಯೇ ಬಹುದೊಡ್ಡ ಅಸ್ತ್ರ. ಜಾತಿಯೊಳಗೆ, ರಕ್ತ ಸಂಬಂಧದೊಳಗೆ (ಅದು ಅವೈಜ್ಞಾನಿಕವೇ) ಮದುವೆಯಾಗಬೇಕೆಂಬ ಕಾನೂನು ಮಾಡಿದ್ದು ಇದೇ ಊಳಿಗಮಾನ್ಯ ವ್ಯವಸ್ಥೆ, ಪುರೋಹಿತಶಾಹಿ ವ್ಯವಸ್ಥೆ. ಆದರೆ ಶರಣರು ಇದನ್ನು, ಈ ಅವೈಜ್ಞಾನಿಕ ನಂಬಿಕೆಯನ್ನು ಮುರಿದರು. ಅದಕ್ಕಾಗಿ ತೆತ್ತ ಬೆಲೆ ಬಹು ಆಗಾಧವಾದದ್ದು. ಹರಳಯ್ಯ ಮಧುವರಸ ದಂಪತಿಗಳ ಕಣ್ಣು ಕಿತ್ತಿ, ಆನೆ ಕಾಲಿಗೆ ಕಟ್ಟಿ, ಕಲ್ಯಾಣದ ಪಟ್ಟಣದ ತುಂಬ ಎಳಹೂಟೆ ಮಾಡಲಾಯಿತು. ಇದೊಂದು ಮನುವಾದಿಗಳ ಸಾಂಸ್ಕೃತಿಕ ಭಯೋತ್ಪಾದನೆಯೇ ಆಗಿತ್ತು. ಕಲ್ಯಾಣದ ಪಟ್ಟಣಕ್ಕೆ ಅಂದು ಅಂಟಿದ ಶರಣರ ರಕ್ತದ ಕಲೆ ಇನ್ನೂ ಮಾಸಿಲ್ಲ. ಶರಣರ ಮೇಲೆ ವೈದಿಕರ ಧಾಳಿ ನಡೆಯುತ್ತದೆ. ಶರಣರು ದಿಕ್ಕಾಪಾಲಾಗುವ ಪರಿಸ್ಥಿತಿ ಬರುತ್ತದೆ. ಆಗ ಮಕ್ಕಳು, ಮನೆ ಅನ್ನಲಾರದೆ ಶರಣರು ವಚನ ಸಾಹಿತ್ಯದ ಕಟ್ಟುಗಳನ್ನು ಬೆನ್ನಿಗೆ ಕಟ್ಟಿಕೊಂಡು ಅಟ್ಟಡವಿ, ದುರ್ದಾಳಿ, ಭಯೋತ್ಪಾದನೆಯ ಬೇಟೆ ಎಲ್ಲವನ್ನು ಎದುರಿಸುತ್ತ ಓಡಿದರು. ಮತ್ತು ತಮ್ಮ ಜೀವಕ್ಕಿಂತಲೂ ಮಿಗಿಲಾಗಿ ವಚನ ಸಾಹಿತ್ಯವನ್ನು ರಕ್ಷಿಸಿದರು. ಅವರು ಚಳುವಳಿಯನ್ನು, ಚರಿತ್ರೆಯನ್ನು, ಜನ ಚರಿತ್ರೆಯನ್ನು ಉಳಿಸಿದರು. ಮೈಯ ರಕ್ತ ಹರಿಸಿ ಉಳಿಸಿದರು. ಇಂತಹ ಚರಿತ್ರೆಯನ್ನೇ ತಿರುಚಲು ಹೊರಟಿದ್ದಾರೆ ಬಸವರಾಜ ಪಾಟೀಲ ಸೇಡಂ ಮತ್ತವರ ಸಂಘದ ಗೆಳೆಯರು. ಅವರೆಲ್ಲ ಕರ್ಮಸಿದ್ಧಾಂತಿಗಳೇ. ಸೇಡಂನ ಸಂಘೋತ್ಸವದಲ್ಲಿ ಹೋಮ ಹವನ ಮಾಡಿದ್ದಾರೆ. ಅಲ್ಲಿಗೆ ಹೋದ ಲಿಂಗವಂತ ಮಠಾಧೀಶರೆನ್ನಿಸಿಕೊಳ್ಳುವವರು ಕಿಂಚಿತ್ತಾದರೂ ಅದನ್ನು ಖಂಡಿಸಿದ್ದಾರೆಯೇ? ಅಲ್ಲಿ ಹೋಗಿಯೂ ಬಸವಣ್ಣನ ಮಾತೇ ಆಡುತ್ತೇವೆಂದು ಮರುಳು ಮಾತಾಡಿದರಲ್ಲ. ಅವರದ್ದೇ ತುತ್ತೂರು ಊದಿ ಬಂದಿದ್ದಾರೆ ಅಷ್ಟೆ.

ಜನಸಾಮಾನ್ಯರು ವಚನ ತತ್ವ ಉಳಿಸುತ್ತಾರೆ

ಮೇಲೆ ಉಲ್ಲೇಖ ಮಾಡಿದಂತೆ, ಕಾಯಕ ಜೀವಿಗಳನ್ನು ಒಗ್ಗೂಡಿಸಿ ಆ ಜ್ಞಾನ ಶಿಶುಗಳನ್ನು ಅಜ್ಞಾನದ ತೊಟ್ಟಿಲಲ್ಲಿ ಹಾಕಿ, ಸಕಲ ವೇಧ ಶಾಸ್ತ್ರಗಳ ನೇಣು ಬಿಗಿದು, ಭ್ರಾಂತಿ ಹಾಡುತ್ತಿದ್ದ ಜೋಗುಳವನ್ನು ನಿಲ್ಲಿಸಲಾರದೆ ಗುಹೇಶ್ವನೆಂಬ ವಿವೇಕವು ಕಾಣಲಾಗದು ಎಂದು ಅಲ್ಲಮಪ್ರಭುದೇವರು ಹೇಳಿದರೆ, ಆ ಕಾಯಕ ಜೀವಿಗಳಿಗೆಲ್ಲ ಅನುಭವ ಮಂಟಪದಲ್ಲಿ ಚಿಂತನೆಯ ಮೂಸೆಗೊಡ್ಡಿ, ಚಳುವಳಿಯ ಹಾದಿಗೆ ಸಜ್ಜುಗೊಂಡರು. ಬಸವಣ್ಣ ಮತ್ತು ಶರಣರು ಸಮತೆಯ ಸಿದ್ಧಾಂತವನ್ನು ಮುಂದಕ್ಕೊಯ್ಯುವುದಕ್ಕಾಗಿ ನೆಚ್ಚಿದ್ದು ಕಾಯಕ ಜೀವಿಗಳನ್ನು ಎಂದು ಹೇಳಿದೆನಲ್ಲ, ಅದು ಚರಿತ್ರೆಯಲ್ಲಿ ಪುರಾವೆಯೊಂದಿಗೆ ನಮ್ಮ ಮುಂದಿದೆ. ಈಗಲೂ ಹಾಗೆಯೇ ಇದೆ ಪರಿಸ್ಥಿತಿ. ಕಸ ಹೊಡೆಯುವ ನನ್ನ ಜನ, ಚರಂಡಿ ತೆಗೆವ ನನ್ನ ಜನ ಕೊರಳಲ್ಲಿ ಲಿಂಗ ಧರಿಸಿ, ತಾವೇ ವಿಭೂತಿ ಪೂಸಿಕೊಂಡು, ಗುರು ಲಿಂಗ ಜಂಗಮದ ಹಂಗಿಲ್ಲದ ನಿರಂತರವಾಗಿ ಕಾಯಕದಲ್ಲಿ ನಿರತರಾಗಿದ್ದಾರೆ. ಅವರಿಗೆ ಇಂತಹ ಯಾವ ಸ್ವಾಮಿಗಳು ಅವರ ಓಣಿಯತನಕ, ಮನೆಯತನಕ ಹೋಗಿ ದೀಕ್ಷೆ ಕೊಟ್ಟಿಲ್ಲ. ಬಸವಣ್ಣ ಹೇಳಿದಂತೆ ತಮ್ಮ ಕಾಯಕದ ಕೈಗಳ ಮೂಲಕ, ತಮ್ಮ ದೇಹಾಲಯವೆಂಬ ದೇವಾಲಯದ ಮೂಲಕ ವಚನ ತತ್ವವನ್ನು ಆವಾಹಿಸಿಕೊಂಡಿದ್ದಾರೆ. ಅಂತೆಯೇ ಅಂದಿಗೂ ಇಂದಿಗೂ ಎಲ್ಲರೂ ಬಳಸುವ ಸಕಲ ಸಂಪತ್ತನ್ನು ಸೃಷ್ಟಿಸಿಕೊಡುತ್ತಿದ್ದಾರೆ. ಮತ್ತು ಕರ್ಮಸಿದ್ಧಾಂತಕ್ಕೆ ಎದುರಾಗಿ ಸೆಡ್ಡು ಹೊಡೆಯುತ್ತಿದ್ದಾರೆ. ಗುರುಮನೆ ಅರಮನೆಯ ಹಂಗಿಲ್ಲದ ಶರಣ ತತ್ವದ ಮೇಲೆ ಪಟ್ಟಭದ್ರ ಸ್ವಾರ್ಥಿಗಳು ಕೋಟೆ ಕಟ್ಟ ಹೊರಟರೆ ಅದು ಶರಣ ದ್ರೋಹವೇ ಆಗುವುದು. ಮತ್ತು ಲಾಂಛನಗಳನ್ನು ಧರಿಸಿ ಮಠ ಪೀಠದಾಶ್ರಯದಲ್ಲಿ ಮತ್ತೆ ಬಸವ ತತ್ವವನ್ನು, ಶರಣ ಸಿದ್ಧಾಂತವನ್ನು ವೈದಿಕೀಕರಣಗೊಳಿಸುವ ಹುನ್ನಾರ ಹೆಣೆಯುವುದನ್ನು ಜನತೆ ಸಹಿಸುವುದಿಲ್ಲ. ಜನಸಾಮಾನ್ಯರು ಈ ತತ್ವ ಉಳಿಸುತ್ತಾರೆ.

ಬಸವಣ್ಣ ಮತ್ತು ಶರಣರ ಹೆಸರಿನಲ್ಲಿ ವಚನ ವಿರೋಧಿ ವ್ಯಕ್ತಿ ಶಕ್ತಿಗಳನ್ನು ಕರೆಸುವುದಾಗಲಿ, ತಾವೇ ಅಂತಲ್ಲಿ ಹೋಗುವುದಾಗಲಿ ಮಾಡಿದರೆ ಅದು ತಮ್ಮ ಹಿಪೋಕ್ರಸಿ ಎಂದೇ ಭಾವಿಸಬೇಕಾಗುತ್ತದೆ. ಮತ್ತು ಎಲ್ಲರ ಹಂಗು ಹರಿದು ವಚನ ಸಿದ್ಧಾಂತ ವಚನ ಚಳುವಳಿಯ ಚರಿತ್ರೆ ರಕ್ಷಿಸಲು ಮತ್ತದೇ ಶರಣರು ತೋರಿದ ಮಾರ್ಗದಲ್ಲಿ ನಡೆಯಬೇಕಾಗುತ್ತದೆ.

ಕೊಪ್ಪಳ: ಕೈಗಾರಿಕೆಗಳಿಂದ ಕಲುಷಿತ ಹೊಗೆ, ಮಾಲಿನ್ಯ ತಡೆಯದ ಸರಕಾರದ ದುರ್ನಡೆ ಖಂಡನೀಯ: ಸಿಪಿಐ(ಎಂ)

ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಗಿಣಿಗೆರೆ ಭಾಗದ ಕೈಗಾರಿಕಾ ಪ್ರದೇಶದಲ್ಲಿನ ಬಹುತೇಕ ಎಲ್ಲ ಕೈಗಾರಿಕೆಗಳು ವಿಪರೀತ ಕಲುಷಿತ ಹೊಗೆ ಬಿಡುತ್ತಿವೆ. ಜೊತೆಗೆ ಅವುಗಳು ಎಬ್ಬಿಸುವ ಕೆಂಧೂಳು ಪರಿಸರದ ಮೇಲೆ, ಜನಜೀವನ ಹಾಗು ಕೃಷಿಯ ಮೇಲೆ ತೀವ್ರ ಸ್ವರೂಪದ ಕೆಟ್ಟ ಪರಿಣಾಮ ಬೀರುತ್ತಿವೆ. ಇದೂ ಅಲ್ಲದೆ, ಹೆದ್ದಾರಿ ರಸ್ತೆ ನಿರ್ಮಾಣದ ವಿಪರೀತ ಧೂಳು ಈ ಭಾಗದ ಜನತೆಯ ಜೀವನವು ತೀವ್ರ ಸಂಕಷ್ಟಕ್ಕೆ ತುತ್ತಾಗುವಂತೆ ಮಾಡಿದೆ. ಇದರಿಂದಾಗಿ ಕೃಷಿ ಉತ್ಪಾದನೆಗೆ ಮತ್ತು ಜಾನುವಾರುಗಳ ಆರೋಗ್ಯಕ್ಕೆ ತೀವ್ರ ಧಕ್ಕೆ ಉಂಟಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿರುವ ಸಿಪಿಐ(ಎಂ), ಮಾಲಿನ್ಯ ತಡೆಯದ ಸರಕಾರದ ದುರ್ನಡೆಯನ್ನು ಖಂಡಿಸಿದೆ.

ಕಲುಷಿತ ವಾತಾವರಣಕ್ಕೆ ಕಾರಣರಾದ ಕೈಗಾರಿಕಾ ಮಾಲೀಕರ ಹಾಗು ರಸ್ತೆ ನಿರ್ಮಾಣದ ಗುತ್ತಿಗೆದಾರರ ವಿರುದ್ಧ ಮತ್ತು ಪರಿಸರ ಸಂರಕ್ಷಣೆಗೆ ಅಗತ್ಯ ಕಾನೂನಿನ ಕ್ರಮ ಕೈಗೊಳ್ಳದೆ, ಕೈಗಾರಿಕಾ ಮಾಲೀಕರ ಜೊತೆ ಶಾಮೀಲಾಗಿರುವ ಕೆಐಏಡಿಬಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಜಿಲ್ಲಾ ಆಡಳಿತದ ಅಧಿಕಾರಿ ವರ್ಗ, ಶಾಸಕರು ಮತ್ತು ರಾಜ್ಯ ಸರಕಾರದ ದುರ್ನಡೆಯನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ), ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಕೈಗಾರಿಕೆಗಳ ಮೇಲೆ ಕಠಿಣ ಕಾನೂನು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದೆ. ಪರಿಸರ ಸಂರಕ್ಷಣೆಯ ಸುರಕ್ಷಾ ಕ್ರಮ ವಹಿಸುವವರೆಗೆ ಅವುಗಳನ್ನು ಬಂದ್ ಮಾಡಲು ಮತ್ತು ನಿರ್ಲಕ್ಷ್ಯ ವಹಿಸಿದ ಎಲ್ಲಾ ಜವಾಬ್ದಾರಿಹೀನ ಅಧಿಕಾರಿಗಳನ್ನು ಅಮಾನತಿನಲ್ಲಿಟ್ಟು ಕಠಿಣ ಕಾನೂನು ಕ್ರಮವಹಿಸಬೇಕು, ಈ ಭಾಗದ ಜನತೆಗಾದ ಎಲ್ಲ ರೀತಿಯ ಹಾನಿಯನ್ನು ತುಂಬಿಕೊಡಲು ಅಗತ್ಯ ಪರಿಹಾರ ಕ್ರಮವಹಿಸಬೇಕು ಎಂದು ರಾಜ್ಯ ಸರಕಾರವನ್ನು ಅದು ಒತ್ತಾಯಿಸಿದೆ.

ಇದೇ ಕಾರಣದಿಂದ, ಈ ಭಾಗದಲ್ಲಿ ಕೈಗಾರಿಕೆಗಳೇ ಬೇಡವೆಂಬ ಅಭಿಪ್ರಾಯ ರೂಪುಗೊಳ್ಳಲು ಕಾರಣವಾಗುತ್ತಿದೆ. ರಾಜ್ಯ ಸರಕಾರ ಈ ಕುರಿತ ಜನತೆಯ ಭಾವನೆಗಳನ್ನು ಗೌರವಿಸಿ ಅಗತ್ಯ ಕ್ರಮವಹಿಸದೆ, ಕಠಿಣ ಕ್ರಮವಹಿಸದೆ ಜನತೆಯ ಬೆಂಬಲ ಗಳಿಸಲು ಸಾದ್ಯವಿಲ್ಲವೆಂಬುದನ್ನು ಮುಖ್ಯಮಂತ್ರಿಗಳು ಗಮನಿಸಬೇಕಾಗಿದೆ ಎಂದು ಅದು ಹೇಳಿದೆ.

ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಮುಖಂಡರ ಕೈಗಾರಿಕಾ ವಿರೋಧಿ ನಿಲುಮೆ

ಒಂದೆಡೆ, ಬಿಜೆಪಿ ಹಾಗು ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳು ಸರಕಾರದ ನೇತೃತ್ವ ವಹಿಸಿ, ಕೈಗಾರಿಕಾ ನಿರ್ಮಾಣಕ್ಕೆ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಅದ್ದೂರಿಯಾಗಿ ಸಂಘಟಿಸುತ್ತಿದ್ದರೆ, ಕೊಪ್ಪಳ ಜಿಲ್ಲೆಯ ಈ ಪಕ್ಷಗಳ ಮುಖಂಡರು ಕೈಗಾರಿಕೆಗಳೇ ಬೇಡ ಎಂದು ಪ್ರತಿಭಟನೆ ಸಂಘಟಿಸಲು ತೊಡಗಿರುವುದು ಕಂಡು ಬಂದಿದೆ. ಇದು ಈ ಪಕ್ಷಗಳ ನಾಯಕರು ಜನತೆಯನ್ನು ತಮ್ಮ ಅಧಿಕಾರದಾಹದಿಂದ ತಪ್ಪುದಾರಿಗೆ ಎಳೆಯುತ್ತಿರುವುದನ್ನು ವಿರೋಧಿಸಿರುವ ಸಿಪಿಐ(ಎಂ), ಪರಿಸರ ಮಾಲಿನ್ಯದ ಭಯವಿದ್ದರೆ,



ಅಂತಹ ಪ್ರಶ್ನೆಯ ನಿವಾರಣೆಗೆ ಕ್ರಮಗಳಾಗಬೇಕು ಮತ್ತು ಜನವಸತಿಯಿಂದ ದೂರದಲ್ಲಿ ಅತ್ಯಂತ ಸುರಕ್ಷತೆಯಲ್ಲಿ ನಿರ್ಮಿಸುವಂತೆ ಒತ್ತಾಯಿಸಬಹುದೇ ಹೊರತು, ಕೈಗಾರಿಕೆ ನಿರ್ಮಾಣಕ್ಕೆ ಅಡ್ಡಿಪಡಿಸುವುದನ್ನು ಒಪ್ಪುವುದಿಲ್ಲ ಎಂದು ಹೇಳಿದೆ.

ಕೈಗಾರಿಕೆ ಸ್ಥಾಪನೆಗೆ ಬೆಂಬಲ

ಕೈಗಾರಿಕೆ ನಿರ್ಮಾಣವನ್ನು ಸಿಪಿಐ(ಎಂ) ಖಂಡಿತಾ ವಿರೋಧಿಸುವುದಿಲ್ಲ ಮತ್ತು ಅದನ್ನು ಸ್ವಾಗತಿಸುತ್ತದೆ ಎಂದಿರುವ ಸಿಪಿಐ(ಎಂ), ಕೈಗಾರಿಕಾ ನಿರ್ಮಾಣವು ಈ ಭಾಗದ ಹಿಂದುಳಿದಿರುವಿಕೆಯ ನಿವಾರಣೆಗೆ, ಉದ್ಯೋಗ ನಿರ್ಮಾಣಕ್ಕೆ ಅಗತ್ಯವಾಗಿದೆ. ಆದರೆ, ಅದರಿಂದ ಜನಜೀವನಕ್ಕೆ ಯಾವುದೇ ಧಕ್ಕೆ ಬಾರದಂತೆ, ಸುರಕ್ಷತಾ ಕ್ರಮ ವಹಿಸುವ ಖಾತರಿ ಭರವಸೆಯನ್ನು ನೀಡುವಂತೆ ಮತ್ತು ಜನತೆಯ ವಿಶ್ವಾಸದೊಂದಿಗೆ, ಜನವಸತಿಯಿಂದ ದೂರದಲ್ಲಿ ನಿರ್ಮಿಸಲು ಕ್ರಮವಹಿಸುವಂತೆ ಸರಕಾರಗಳನ್ನು ಒತ್ತಾಯಿಸಿದೆ.

ಭೂ ಸ್ವಾಧೀನ ಕಾಯ್ದೆ–2013 ರಂತೆ, ಕೈಗಾರಿಕಾ ಸ್ಥಾಪನೆಗೆ ಮುಂಚೆ, ಕೈಗಾರಿಕಾ ಸ್ಥಾಪನೆಯಿಂದ ಪರಿಸರ ಹಾಗು ಜನಜೀವನದ ಮೇಲಾಗುವ ಪರಿಣಾಮಗಳನ್ನು ತಜ್ಞರ ಸಮಿತಿಯ ಮೂಲಕ ಅಧ್ಯಯನ ನಡೆಸಬೇಕು. ಹಾಗೂ ನಾಗರೀಕ ಒಪ್ಪಿಗೆ ಪಡೆಯಬೇಕು ಮತ್ತು ಫಲವತ್ತಾದ ಕೃಷಿ ಭೂಮಿಗಳನ್ನು ಕೈಗಾರಿಕಾ ನಿರ್ಮಾಣಕ್ಕೆ ಬಳಸದೆ ಇರುವುದು, ಕೃಷಿ ಯೋಗ್ಯವಲ್ಲದ ಹಾಗು ಮಳೆಯಾಧಾರಿತ ಜಮೀನುಗಳ ಶೇ. 75 ರೈತರ ಒಪ್ಪಿಗೆ ಮೇರೆಗೆ ಮತ್ತು ಮಾರುಕಟ್ಟೆ ದರದ ಮೂಲಕ ಭೂ ಸ್ವಾಧೀನಕ್ಕೆ ಕ್ರಮವಹಿಸಬೇಕು. ಭೂಮಿ, ವಸತಿ, ಉದ್ಯೋಗ ಕಳೆದುಕೊಂಡವರಿಗೆ ಖಾಯಂ ಉದ್ಯೋಗ ಸಹಿತ ಪುನರ್ವಸತಿ, ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಖಾತರಿ ಪಡಿಸುವುದು ಮುಂತಾದ ಜನಪರ ಕ್ರಮಗಳ ಮೂಲಕ, ಕೈಗಾರಿಕೆ ನಿರ್ಮಾಣಕ್ಕೆ ಸರಕಾರ ಅಗತ್ಯ ಕ್ರಮ ವಹಿಸುವಂತೆ ಸಿಪಿಐ(ಎಂ) ಆಗ್ರಹಿಸಿದೆ.

ಪರಿಸರ ಹಾಗು ನಾಗರೀಕ ಜೀವನದ ಮೇಲೆ ತೀವ್ರ ಸ್ವರೂಪ ದಾಳಿ ನಡೆಸಿರುವ ಕೈಗಾರಿಕಾ ಮಾಲೀಕರ ಮತ್ತು ಮಾಲಿನ್ಯ ತಡೆಯದ ಸರಕಾರದ ದುರ್ನಡೆ–ಸಿಪಿಐ(ಎಂ) ಖಂಡನೆ

ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಗಿಣಿಗೆರೆ ಭಾಗದಲ್ಲಿ ಕೈಗಾರಿಕಾ ಪ್ರದೇಶದಲ್ಲಿನ ಬಹುತೇಕ ಎಲ್ಲ ಕೈಗಾರಿಕೆಗಳು, ಅವು ಬಿಡುವ ವಿಪರೀತ ಕಲುಷಿತ ಹೊಗೆ ಹಾಗು ಎಬ್ಬಿಸುವ ಕೆಂಧೂಳು ಮತ್ತು ಹೆದ್ದಾರಿ ರಸ್ತೆ ನಿರ್ಮಾಣದ ವಿಪರೀತ ಧೂಳುಗಳ ಮೂಲಕ ಪರಿಸರ ಹಾಗು ನಾಗರೀಕ ಜನ ಜೀವನ ಹಾಗು ಕೃಷಿಯ ಮೇಲೆ ಆಗುತ್ತಿರುವ ತೀವ್ರ ಸ್ವರೂಪದ ಕೆಟ್ಟ ಪರಿಣಾಮಗಳಿಂದ ಈ ಭಾಗದ ಜನತೆಯ ಜೀವನವು ತೀವ್ರ ಸಂಕಷ್ಟಕ್ಕೆ ತುತ್ತಾಗುತ್ತಿದೆ. ಕೃಷಿ ಭೂಮಿಯ ಉತ್ಪಾದನೆಗೆ ಮತ್ತು ಜಾನುವಾರುಗಳ ಆರೋಗ್ಯಕ್ಕೆ ತೀವ್ರ ಧಕ್ಕೆ ಉಂಟಾಗುತ್ತಿದೆ. ಕೈಗಾರಿಕಾ ಮಾಲೀಕರ ಹಾಗು ರಸ್ತೆ ನಿರ್ಮಾಣದ ಗುತ್ತಿಗೆದಾರರ ವಿರುದ್ಧ ಮತ್ತು ಈ ದುಷ್ಕೃತ್ಯವನ್ನು ಮತ್ತು ಪರಿಸರ ಸಂರಕ್ಷಣೆಗೆ ಅಗತ್ಯ ಕಾನೂನಿನ ಕ್ರಮ ಕೈಗೊಳ್ಳದೆ ಕೈಗಾರಿಕಾ ಮಾಲೀಕರ ಜೊತೆ ಶಾಮೀಲಾಗಿ ಇಂತಹದ್ದೊಂದು ಕೆಟ್ಟ ಸ್ಥಿತಿ ನಿರ್ಮಾಣಕ್ಕೆ ಕಾರಣರಾದ ಕೆಐಏಡಿಬಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಜಿಲ್ಲಾ ಆಡಳಿತದ ಅಧಿಕಾರಿ ವರ್ಗ, ಶಾಸಕರು ಮತ್ತು ರಾಜ್ಯ ಸರಕಾರದ ದುರ್ನಡೆಯನ್ನು ಸಿಪಿಐಎಂ ಬಲವಾಗಿ ಖಂಡಿಸುತ್ತದೆ ಮತ್ತು ಈ ಕೂಡಲೆ ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಕೈಗಾರಿಕೆಗಳ ಮೇಲೆ ಕಠಿಣ ಕಾನೂನು ಕ್ರಮ ವಹಿಸಿ, ಪರಿಸರ ಸಂರಕ್ಷಣೆಯ ಸುರಕ್ಷಾ ಕ್ರಮ ವಹಿಸುವವರೆಗೆ ಅವುಗಳನ್ನು ಬಂದ್ ಮಾಡಲು ಮತ್ತು ನಿರ್ಲಕ್ಷ್ಯ ವಹಿಸಿದ ಎಲ್ಲ ಜವಾಬ್ದಾರಿ ಹೀನ ಅಧಿಕಾರಿಗಳನ್ನು ಅಮಾನತಿನಲ್ಲಿಟ್ಟು ಕಠಿಣ ಕಾನೂನು ಕ್ರಮವಹಿಸಲು ಸಿಪಿಐಎಂ ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ ಮತ್ತು ಈ ಭಾಗದ ಜನತೆಗಾದ ಎಲ್ಲ ರೀತಿಯ ಹಾನಿಯನ್ನು ತುಂಬಿಕೊಡಲು ಅಗತ್ಯ ಪರಿಹಾರ ಕ್ರಮವಹಿಸುವಂತೆ ಸಿಪಿಐಎಂ ಆಗ್ರಹಿಸುತ್ತದೆ.

ಇದೇ ಕಾರಣದಿಂದ, ಈ ಭಾಗದಲ್ಲಿ ಕೈಗಾರಿಕೆಗಳೇ ಬೇಡವೆಂಬ ಅಭಿಪ್ರಾಯ ರೂಪುಗೊಳ್ಳಲು ಕಾರಣವಾಗುತ್ತಿದೆ. ರಾಜ್ಯ ಸರಕಾರ ಈ ಕುರಿತ ಜನತೆಯ ಭಾವನೆಗಳನ್ನು ಗೌರವಿಸಿ ಅಗತ್ಯ ಕ್ರಮವಹಿಸದೆ, ಕಠಿಣ ಕ್ರಮವಹಿಸದೆ ಜನತೆಯ ಬೆಂಬಲ ಗಳಿಸಲು ಸಾದ್ಯವಿಲ್ಲವೆಂಬುದನ್ನು ಮುಖ್ಯಮಂತ್ರಿಗಳು ಗಮನಿಸಬೇಕಾಗಿದೆ.

ಬಿಜೆಪಿ ಹಾಗು ಜೆಡಿಎಸ್ ಮತ್ತು ಕಾಂಗ್ರೆಸ್ ಮುಖಂಡರ ಕೈಗಾರಿಕಾ ವಿರೋದಿ ನಿಲುಮೆ – ಸಿಪಿಐಎಂ ವಿರೋಧ

ಒಂದೆಡೆ, ಬಿಜೆಪಿ ಹಾಗು ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳು ಸರಕಾರದ ನೇತೃತ್ವ ವಹಿಸಿ ಕೈಗಾರಿಕಾ ನಿರ್ಮಾಣಕ್ಕೆ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಅದ್ದೂರಿಯಾಗಿ ಸಂಘಟಿಸುತ್ತಿದ್ದರೆ, ಕೊಪ್ಪಳ ಜಿಲ್ಲೆಯ ಈ ಪಕ್ಷಗಳ ಮುಖಂಡರು ಕೈಗಾರಿಕೆಗಳೆ ಬೇಡವೆಂದು ಪ್ರತಿಭಟನೆ ಸಂಘಟಿಸಲು ತೊಡಗಿರುವುದು ಕಂಡು ಬಂದಿದೆ. ಇದು, ಈ ಪಕ್ಷಗಳ ನಾಯಕರು ಜನತೆಯನ್ನು ತಮ್ಮ ಅಧಿಕಾರದಾಹದಿಂದ ತಪ್ಪು ದಾರಿಗೆಳೆಯುತ್ತಿರುವುದನ್ನು ತೋರುತ್ತಿದೆ. ಇದನ್ನು ಸಿಪಿಐ(ಎಂ) ವಿರೋಧಿಸುತ್ತಿದೆ.

ಪರಿಸರ ಮಾಲಿನ್ಯದ ಭಯವಿದ್ದರೆ, ಅಂತಹ ಪ್ರಶ್ನೆಯ ನಿವಾರಣೆಗೆ ಕ್ರಮಗಳಾಗ ಬೇಕೆಂದು ಮತ್ತು ಜನ ವಸತಿಯಿಂದ ದೂರದಲ್ಲಿ ಅತ್ಯಂತ ಸುರಕ್ಷತೆಯಲ್ಲಿ ನಿರ್ಮಿಸುವಂತೆ ಒತ್ತಾಯಿಸಬಹುದೇ ಹೊರತು, ಕೈಗಾರಿಕೆ ನಿರ್ಮಾಣಕ್ಕೆ ಅಡ್ಡಿ ಪಡಿಸುವುದನ್ನು ಸಿಪಿಐ(ಎಂ) ಒಪ್ಪುವುದಿಲ್ಲ.

ಕೈಗಾರಿಕೆ ಸ್ಥಾಪನೆಗೆ ಸಿಪಿಐಎಂ ಬೆಂಬಲ

ಕೈಗಾರಿಕೆ ನಿರ್ಮಾಣವನ್ನು ಸಿಪಿಐಎಂ ಖಂಡಿತಾ ವಿರೋಧಿಸುವುದಿಲ್ಲ ಅದನ್ನು ಸ್ವಾಗತಿಸುತ್ತದೆ. ಇದು ಈ ಭಾಗದ ಹಿಂದುಳಿದಿರುವಿಕೆಯ ನಿವಾರಣೆಗೆ, ಉದ್ಯೋಗ ನಿರ್ಮಾಣಕ್ಕೆ ಅಗತ್ಯವಾಗಿದೆ.

ಆದರೆ, ಅದರಿಂದ ನಾಗರೀಕ ಜನ ಜೀವನಕ್ಕೆ ಯಾವುದೆ ಧಕ್ಕೆ ಬಾರದಂತೆ, ಸುರಕ್ಷತಾ ಕ್ರಮ ವಹಿಸುವ ಖಾತರಿ ಭರವಸೆಯನ್ನು ಜನತೆಗೆ ನೀಡುವಂತೆ ಮತ್ತು ಅವರ ವಿಶ್ವಾಸದೊಂದಿಗೆ, ಜನ ವಸತಿಯಿಂದ ದೂರದಲ್ಲಿ ನಿರ್ಮಿಸಲು ಕ್ರಮವಹಿಸುವಂತೆ ಸರಕಾರಗಳನ್ನು ಸಿಪಿಐಎಂ ಒತ್ತಾಯಿಸುತ್ತದೆ.

ಭೂ ಸ್ವಾಧೀನ ಕಾಯ್ದೆ–2013 ರಂತೆ, ಕೈಗಾರಿಕಾ ಸ್ಥಾಪನೆಗೆ ಮುಂಚೆ

ಕೈಗಾರಿಕಾ ಸ್ಥಾಪನೆಯಿಂದ ಪರಿಸರದ ಹಾಗು ಜನ ಜೀವನದ ಮೇಲಾಗುವ ಪರಿಣಾಮಗಳನ್ನು ತಜ್ಞರ ಸಮಿತಿಯ ಮೂಲಕ ಅಧ್ಯಯನ ನಡೆಸಬೇಕು. ಹಾಗೂ ಪರಿಸರದ ಸುರಕ್ಷತೆಯ ಖಾತರಿಯೊಂದಿಗೆ ನಾಗರೀಕ ಒಪ್ಪಿಗೆ ಪಡೆಯಬೇಕು ಮತ್ತು ಫಲವತ್ತಾದ ಕೃಷಿ ಭೂಮಿಗಳನ್ನು ಕೈಗಾರಿಕಾ ನಿರ್ಮಾಣಕ್ಕೆ ಬಳಸದೆ ಇರುವುದು, ಕೃಷಿ ಯೋಗ್ಯವಲ್ಲದ ಹಾಗು ಮಳೆಯಾಧಾರಿತ ಜಮೀನುಗಳ ಶೇ 75 ರೈತರ ಒಪ್ಪಿಗೆ ಮೇರೆಗೆ ಮತ್ತು ಮಾರುಕಟ್ಟೆ ದರದ ಮೂಲಕ ಭೂ ಸ್ವಾಧೀನಕ್ಕೆ ಕ್ರಮವಹಿಸಬೇಕು. ಭೂಮಿ, ವಸತಿ, ಉದ್ಯೋಗ ಕಳೆದುಕೊಂಡವರಿಗೆ ಖಾಯಂ ಉದ್ಯೋಗ ಸಹಿತ ಪುನರ್ವಸತಿಗೆ ಕ್ರಮ ವಹಿಸಬೇಕು. ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಖಾತರಿ ಪಡಿಸುವುದು ಮುಂತಾದ ಜನಪರ ಕ್ರಮಗಳ ಮೂಲಕ, ಜನ ವಸತಿಯಿಂದಾಚೆ, ಜನ ವಿಶ್ವಾಸದ ಮೂಲಕ ಕೈಗಾರಿಕೆ ನಿರ್ಮಾಣಕ್ಕೆ ಸರಕಾರ ಅಗತ್ಯ ಕ್ರಮ ವಹಿಸುವಂತೆ ಸಿಪಿಐಎಂ ಆಗ್ರಹಿಸುತ್ತದೆ.



ಒಂದು ದೇಶದ ಅಭಿವೃದ್ಧಿ ಆ ದೇಶದ ಉನ್ನತ ಶಿಕ್ಷಣ ಮಟ್ಟವನ್ನು ಅವಲಂಬಿಸಿರುತ್ತೆ ಎನ್ನೋ ಮಾತಿದೆ. ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿದಂತೆಲ್ಲಾ ಉತ್ತಮ ಸಂಶೋಧನೆಗಳು ನಡೆದು, ಸಮಾಜಕ್ಕೆ ಅಪಾರ ಕೊಡುಗೆ ಸಿಕ್ಕಿದರೆ ದೇಶದ ಅಭ್ಯುದಯಕ್ಕೂ ನೆರವಾಗುತ್ತೆ. ಹಾಗಾಗಿಯೇ ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣವನ್ನು ಉನ್ನತೀಕರಿಸುವ ಕೇಂದ್ರಗಳಾಗಿ ಗುರ್ತಿಸಿಕೊಂಡಿವೆ. ಆದರೆ, ಇತ್ತೀಚೆಗೆ ಸರ್ಕಾರಗಳ ನಿರ್ಲಕ್ಷ್ಯವೋ ಅಥವಾ ಖಾಸಗಿ ಲಾಭಿಯೋ ಸಾಕಷ್ಟು ವಿವಿ ಗಳು ಹೆಸರಿಗಷ್ಟೇ ಘೋಷಣೆಯಾಗಿದೆಯಾ ಎನ್ನೊ ಅನುಮಾನ ಮೂಡುತ್ತೆ. ಇಂತಹ ಅನುಮಾನಕ್ಕೆ ಕಾರಣ ಹಾಸನದ ವಿಶ್ವವಿದ್ಯಾಲಯ. 2023ರ ಮಾರ್ಚ್ ನಿಂದ ಕಾರ್ಯಾರಂಭ ಮಾಡಿರೊ ಹಾಸನದ ವಿಶ್ವ ವಿದ್ಯಾಲಯ ಅಕ್ಷರಶಃ ಅನಾಥವಾಗಿದೆ.

ಅರಳುವ ಮುನ್ನವೇ ಅನಾಥವಾದ ಹಾಸನ ವಿಶ್ವವಿದ್ಯಾಲಯ:

ಮಂಜುಶ್ರೀ ಜೆ.ಎಸ್.
ಹಾಸನ

ಎರಡು ವರ್ಷಗಳ ಹಿಂದೆ ಮೈಸೂರು ವಿವಿ ವ್ಯಾಪ್ತಿಯಲ್ಲಿದ್ದ ಹಾಸನ ವಿವಿ ಕೇಂದ್ರವನ್ನು ಪ್ರತ್ಯೇಕಿಸಿ ಹೊಸ ವಿಶ್ವವಿದ್ಯಾಯಲವನ್ನು ಸೃಜನೆ ಮಾಡಲಾಗಿದೆ. ಸಹಜವಾಗಿಯೇ ಹಾಸನದ ವಿವಿ ಸ್ಥಾಪನೆ ಆದಾಗ ಎಲ್ಲರಿಗೂ ಖುಷಿಯಾಗಿತ್ತು. ಶೈಕ್ಷಣಿಕವಾಗಿ ಸಾಕಷ್ಟು ಪ್ರಗತಿಯತ್ತ ಸಾಗುತ್ತಿರೊ ಹಾಸನಕ್ಕೆ ಆಡಳಿತಾತ್ಮಕ ದೃಷ್ಟಿಯಿಂದ ಈ ವಿವಿ ನೆರವಾಗುತ್ತೆ ಎಂದೇ ಎಲ್ಲರೂ ಭಾವಿಸಿದ್ರು. ಆದ್ರೆ ವಾಸ್ತವವೇ ಬೇರೆಯಾಗಿದೆ. ಈ ಹಿಂದಿನ ಬಿಜೆಪಿ ಸರ್ಕಾರದ ಕೊನೆ ಬಜೆಟ್‌ನಲ್ಲಿ ಘೋಷಣೆಯಾದ ಹಾಸನ ವಿವಿ ಹೆಸರಿಗಷ್ಟೇ ಸೀಮಿತವಾಗಿ, ಯಾವುದೇ ಅಭಿವೃದ್ಧಿ ಇಲ್ಲದೆ, ಅಭಿವೃದ್ಧಿಗೆ ಅನುದಾನ ಇಲ್ಲದೆ ಸೊರಗುತ್ತಿದೆ. ಕನಿಷ್ಟ ಆಡಳಿತಾತ್ಮಕ ಸೌಲಭ್ಯಗಳಿಲ್ಲದೆ ಅನಾಥವಾಗಿದ್ದು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತಿದೆ.

ಬಾರದ ಅನುದಾನ, ಸಿಗದ ಸೌಲಭ್ಯ

2023ರ ಮಾರ್ಚ್‌ವರೆಗೂ ಮೈಸೂರು ವಿವಿ ವ್ಯಾಪ್ತಿಗೆ ಸೇರಿದ್ದ ಹಾಸನ ಜಿಲ್ಲೆ ಪದವಿ ಹಾಗು ಸ್ನಾತಕೋತ್ತರ ಕಾಲೇಜುಗಳು, ಹಾಸನ ವಿವಿ ಸ್ಥಾಪನೆ ಬಳಿಕ ಹಾಸನ ವಿವಿ ವ್ಯಾಪ್ತಿಗೆ ಸೇರಿಕೊಂಡಿದೆ. 22 ಸರ್ಕಾರಿ, 20 ಖಾಸಗಿ, 2 ಸ್ವಾಯತ್ತ ಪದವಿ ಕಾಲೇಜುಗಳು, 2 ವಿವಿ ಕೇಂದ್ರಗಳು ಸೇರಿ 54 ಪದವಿ ಕಾಲೇಜುಗಳು, 16 ಸ್ನಾತಕೋತ್ತರ ಕಾಲೇಜುಗಳು ಸೇರಿ ಒಟ್ಟು 70 ಕಾಲೇಜುಗಳು ಈ ವಿವಿ ಕೇಂದ್ರದ ವ್ಯಾಪ್ತಿಗೆ ಬರುತ್ತವೆ. ಇವುಗಳಲ್ಲಿ ಸರಿಸುಮಾರು 20 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಅಬ್ಯಾಸ ಮಾಡುತ್ತಿದ್ದಾರೆ.

ಇಷ್ಟೆಲ್ಲ ಕಾಲೇಜುಗಳು ಈ ವಿವಿ ವ್ಯಾಪ್ತಿಗೆ ಸೇರಿದ್ದರೂ ಆಡಳಿತಾತ್ಮಕವಾಗಿ ಯಾವುದೇ ಸೌಲಭ್ಯಗಳನ್ನು ಸರ್ಕಾರ ಮಾಡಿಕೊಟ್ಟಿಲ್ಲ. ಕೇವಲ ಉಪಕುಲಪತಿಗಳನ್ನು ನೇಮಿಸಿ, ಕುಲ ಸಚಿವರೊಬ್ಬರನ್ನು ನೇಮಕ ಮಾಡಿ ಕೈತೊಳೆದುಕೊಂಡಿದ್ದು, ಇಲ್ಲಿಗೆ ನೇಮಕವಾಗಿರೊ ಉಪಕುಲಪತಿಗಳು ಹಾಗೂ ಕುಲ ಸಚಿವರು ದಿಕ್ಕೆಟ್ಟು ಹೋಗಿದ್ದಾರೆ. ವಿವಿ ಆಡಳಿತ ಕೇಂದ್ರವಿರುವ ಹಾಸನದಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ ಕನಿಷ್ಟ 300 ಸಿಬ್ಬಂದಿ ಬೇಕು. ಆದರೆ, ಹಾಸನ ವಿವಿ ಕೇಂದ್ರದಲ್ಲಿ ಕೇವಲ 10 ಸಿಬ್ಬಂದಿಗಳಿದ್ದಾರೆ. ಇವರೆಲ್ಲಾ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವರು. ಎರಡು ವರ್ಷಗಳಿಂದ ಕನಿಷ್ಟ ಸೌಲಭ್ಯಗಳಿಲ್ಲದೆ, ಪರೀಕ್ಷೆಗಳನ್ನು ನಡೆಸಲಾಗದೆ, ಕಾಲೇಜುಗಳ ಆಡಳಿತಾತ್ಮಕ ಹೊಣೆಗಾರಿಕೆ ನಿರ್ವಹಣೆ ಮಾಡಲಾಗದೆ ವಿವಿ ಕೇಂದ್ರ ನಲುಗುತ್ತಿದೆ.

ಆಡಳಿತಾತ್ಮಕ ವಿಭಾಗಕ್ಕೆ ಸೌಲಭ್ಯಗಳ ಕೊರತೆ

ಜಿಲ್ಲಾ ಕೇಂದ್ರ ಹಾಸನದ ಬೆಂಗಳೂರು ರಸ್ತೆಯಲ್ಲಿರುವ ಹೇಮ ಗಂಗೋತ್ರಿ ಸ್ನಾತಕೋತ್ತರ ಕೇಂದ್ರವನ್ನೇ ಕೇಂದ್ರವಾಗಿರಿಸಿ ಹಾಸನ ವಿವಿಯನ್ನು ಸರ್ಕಾರ ಘೋಷಣೆ ಮಾಡಿತ್ತು. ಆದರೆ, ಹೊಸದಾಗಿ ಸ್ಥಾಪನೆಯಾದ ವಿವಿ ಕೇಂದ್ರಕ್ಕೆ ಓರ್ವ ಉಪಕುಲಪತಿಗಳು, ಕುಲ ಸಚಿವರು, ಪರೀಕ್ಷಾಂಗದ ಕುಲ ಸಚಿವರು ಹೀಗೆ ಹಲವು ಹುದ್ದೆಗಳು ಸೃಷ್ಟಿಯಾದರೂ ಈವರೆಗೆ ಒಂದೇ ಒಂದು ಹೊಸ ಕಟ್ಟಡ ನಿರ್ಮಾಣವಾಗಿಲ್ಲ. ಬೋಧನಾ ಕೊಠಡಿಗಳೇ ಇಲ್ಲಿನ ಅಧಿಕಾರಿಗಳಿಗೆ ಕಛೇರಿಗಳಾಗಿವೆ. ಕನಿಷ್ಟ ಕೂರಲು ಒಂದು ಕಛೇರಿಗಳಿಲ್ಲ. ಕಂಪ್ಯೂಟರ್ ಗಳಿಲ್ಲದೆ ಅಧಿಕಾರಿಗಳು ತಮ್ಮ ಪರ್ಸನಲ್ ಲ್ಯಾಪ್‌ಟಾಪ್‌ಗಳನ್ನು ಬಳಸಿ ಕೆಲಸ ಮಾಡುತ್ತಿದ್ದಾರೆ. ಸಿಬ್ಬಂದಿಗಳಿಲ್ಲದೆ ತಾವೇ ಅಧಿಕಾರಿಗಳಾಗಿ, ಕ್ಲರ್ಕ್‌ಗಳಾಗಿ ದುಡಿಯಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಕೇವಲ ಯೂನಿವರ್ಸಿಟಿಯನ್ನು ಘೋಷಣೆ ಮಾಡಿದ ಸರ್ಕಾರ ಯಾವುದೇ ಸೌಲಭ್ಯ ನೀಡಿಲ್ಲ. ಈಗಾಗಲೆ ನಾಲ್ಕು ಸೆಮಿಸ್ಟರ್‌ಗಳನ್ನು ನಡೆಸಿರೊ ಈ ವಿವಿಗೆ ಪರೀಕ್ಷಾಂಗ ವಿಭಾಗಕ್ಕೆ ಈವರೆಗೆ ಓರ್ವ ಪರೀಕ್ಷಾಂಗ ವಿಭಾಗದ ಕುಲ ಸಚಿವರ ನೇಮಕವೇ ಆಗಿಲ್ಲ. ಎಲ್ಲವನ್ನು ಕುಲ ಸಚಿವರೇ ಮಾಡಿ ಆಡಳಿತ ನಡೆಸುತ್ತಿದ್ದಾರೆ.

ಪರೀಕ್ಷೆ ನಡೆಸಲು, ನಡೆದ ಪರೀಕ್ಷಾ ಪತ್ರಿಕೆ ಮೌಲ್ಯಮಾಪನಕ್ಕೆ ವ್ಯವಸ್ಥೆಯೂ ಇಲ್ಲ

ಒಂದು ವಿವಿ ಕೇಂದ್ರ ಎಂದರೆ ಆಡಳಿತಾತ್ಮಕವಾಗಿ ಬೇಕಾದ ಎಲ್ಲಾ ವ್ಯವಸ್ಥೆಗಳು ಇರಬೇಕು. ಯಾವುದೇ ಸಿದ್ದತೆ ಇಲ್ಲದೆ ವಿವಿಯನ್ನು ಘೋಷಣೆ ಮಾಡಲಾಗಿದೆ. ಆದರೆ, ವಿವಿ ಕಾರ್ಯಾರಂಭವಾದ ಬಳಿಕವಾದರೂ ಸರ್ಕಾರ ಅಗತ್ಯ ಸೌಲಭ್ಯಕ್ಕಾಗಿ ಅನುದಾನ ನೀಡಿಲ್ಲ. ಎರಡು ವರ್ಷಗಳಿಂದ ಇಲ್ಲಿನ ಜವಾಬ್ದಾರಿ ವಹಿಸಿಕೊಂಡ ಉನ್ನತಾಧಿಕಾರ ಹೊಂದಿದವರು ವಿವಿ ಆಡಳಿತ ನಡೆಸಲು ಹೆಣಗಾಡುತ್ತಿದ್ದಾರೆ. 20,000 ವಿದ್ಯಾರ್ಥಿಗಳು ಪ್ರತಿ ಸೆಮಿಸ್ಟರ್‌ಗೆ ಪರೀಕ್ಷೆ ಬರೆಯುತ್ತಾರೆ. ಪರೀಕ್ಷೆ ನಡೆಸಿದ ಪತ್ರಿಕೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಲು ಸ್ಟ್ರಾಂಗ್ ರೂಂ ವ್ಯವಸ್ಥೆ ಕೂಡ ವಿವಿಗೆ ಇಲ್ಲ. ಇಷ್ಟಲ್ಲದೆ ಇಷ್ಟೊಂದು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳ ಪರಿಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ಬೇಕಾದ ದೊಡ್ಡ ಕೊಠಡಿಯಾಗಲಿ ಅಥವಾ ಇನ್ಯಾವುದೇ ಪರ್ಯಾಯ ವ್ಯವಸ್ಥೆಯಾಗಲೀ ಇಲ್ಲ. ಆದರೂ ಇದೊಂದು ಪ್ರತ್ಯೇಕ ವಿವಿ ಆಗಿರುವ ಕಾರಣಕ್ಕೆ ಇವೆಲ್ಲವನ್ನು ಮಾಡಲೇ ಬೇಕಿದೆ.

ಇಷ್ಟೆಲ್ಲಾ ಸಮಸ್ಯೆಗಳು ಇದ್ದಾಗ್ಯೂ, ಪ್ರತಿಭಾರಿ ಸಭೆಗಳಲ್ಲಿ ಇದನ್ನು ಗಮನಕ್ಕೆ ತಂದಾಗ್ಯೂ ಕೂಡ ಈವರೆಗೆ ಯಾವುದೇ ವ್ಯವಸ್ಥೆಗಳಾಗಿಲ್ಲ ಎನ್ನೋದು ದುರಂತ. ಈಗ ಮತ್ತೆ ಪರೀಕ್ಷೆ ಸಮಯ ಬಂದಿದೆ. ಪರೀಕ್ಷೆ ನಡೆಸಲು ಉತ್ತರ ಪತ್ರಿಕೆಗಳ ಖರೀದಿಯೂ ಆಗಿದೆ. ಆದರೆ, ಉತ್ತರ ಬರೆದ ವಿದ್ಯಾರ್ಥಿಗಳ ಉತ್ತರ ಪತ್ರಿಕೆ ಇಡೋದು ಎಲ್ಲಿ, ಮೌಲ್ಯ ಮಾಪನ ಮಾಡೋದು ಎಲ್ಲಿ ಎನ್ನೋ ಟೆನ್ಷನ್ ಮತ್ತೆ ಶುರುವಾಗಿದೆ. 20 ಸಾವಿರ ವಿದ್ಯಾರ್ಥಿಗಳ ಉತ್ತರ ಪತ್ರಿಕೆ ಮೌಲ್ಯಮಾಪನ ದೊಡ್ಡ ಸವಾಲಾಗಿ ಪರಿಣಮಿಸಿದೆ.

ನೇಮಕವಾಗದ ಪೂರ್ಣ ಪ್ರಮಾಣದ ಸಿಂಡಿಕೇಟ್

ಉನ್ನತ ಶಿಕ್ಷಣ ಸಂಸ್ಥೆಗಳು ಅಂದ್ರೆ ಶೈಕ್ಷಣಿಕವಾಗಿ ಬಹುತೇಕ ಸ್ವಾಯತ್ತತೆ ಹೊಂದಿರೊ ಕೇಂದ್ರಗಳು. ಇದರ ಆಡಳಿತ ವ್ಯವಸ್ಥೆಯನ್ನು ಉಪ ಕುಲಪತಿಗಳು, ಕುಲ ಸಚಿವರು ನೋಡಿಕೊಂಡರೂ ಕೂಡ ವಿವಿಗಳ ಸಿಂಡಿಕೇಟ್ ಗಳು ಇದರ ಅತ್ಯುನ್ನತ ಆಡಳಿತ ಮಂಡಳಿ ಆಗಿರುತ್ತವೆ. ವಿವಿಯ ಎಲ್ಲಾ ವಿಚಾರಗಳು ಇಲ್ಲಿ ಚರ್ಚೆಯಾಗಿಯೇ ಅಂತಿಮವಾಗುತ್ತವೆ. ದುರಂತ ಎಂದರೆ ಹಾಸನದ ವಿವಿ ಸ್ಥಾಪನೆಯಾಗಿ ಎರಡು ವರ್ಷವಾದರೂ ಹಾಸನ ವಿವಿಗೆ ಪೂರ್ಣ ಪ್ರಮಾಣದ ಒಂದು ಸಿಂಡಿಕೇಟ್ ಕೂಡ ರಚನೆ ಆಗಿಲ್ಲ. ರಾಜ್ಯಪಾಲರಿಂದ ನೇಮಕವಾದ ಇಬ್ಬರು ಸಿಂಡಿಕೇಟ್ ಮೆಂಬರ್ ಬಿಟ್ಟರೆ, ನಾಲ್ವರು ಪ್ರಾಂಶುಪಾಲರು ಹಾಗು ಉಪಕುಲಪತಿ ಹಾಗು ಕುಲ ಸಚಿವರು ಮಾತ್ರ ಇದ್ದು, ಇನ್ನೂ ನಾಲ್ವರು ಸಿಂಡಿಕೇಟ್ ಮೆಂಬರ್‌ಗಳ ನೇಮಕವಾಗದೆ ಸಿಂಡಿಕೇಟ್ ಸಭೆಗಳು ಕೂಡ ಸರಿಯಾಗಿ ಆಗ್ತಿಲ್ಲ. ಹಾಗಾಗಿಯೇ ವಿವಿ ಕೂಡ ಅಭಿವೃದ್ಧಿ ಪಥದಲ್ಲಿ ಸಾಗುತ್ತಿಲ್ಲ ಎನ್ನೋ ಮಾತು ಕೇಳಿ ಬರ್ತಿದೆ.


ಹಾಸನದ ವಿವಿ ಬಗ್ಗೆ ತಲೆ ಕೆಡಿಸಿಕೊಳ್ಳದ ಜಿಲ್ಲೆಯ ಜನಪ್ರತಿನಿಧಿಗಳು ಹಾಸನಕ್ಕೆ ಒಂದು ವಿವಿ ಬರಬೇಕು, ಹಾಸನದಲ್ಲಿರೊ ದೊಡ್ಡ ಸಂಖ್ಯೆಯ ಕಾಲೇಜುಗಳ ಆಡಳಿತಾತ್ಮಕ ದೃಷ್ಟಿಯಿಂದ ಇದು ಅನುಕೂಲ ಎನ್ನುವ ಜೊತೆಗೆ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಇದು ನೆರವಾಗುತ್ತೆ ಎಂದೇ ಭಾವಿಸಿದ್ರು. ಆದ್ರೆ ವಿವಿ ಘೋಷಣೆಯಾಗಿ ಕಾರ್ಯಾರಂಭ ಮಾಡಿದ ಬಳಿಕ ಆಗ್ತಿರೋದೆ ಬೇರೆ. ವಿವಿಯ ಅಭಿವೃದ್ಧಿ ಆಗೋದಿರಲಿ, ಅರಳುವ ಮುನ್ನವೇ ವಿವಿ ಕೇಂದ್ರ ನಲುಗಿ ಹೋಗ್ತಿದೆ. ಅಭಿವೃದ್ಧಿ ಆಗೋ ಬದಲು ಮತ್ತೆ ಹಾಸನ ವಿವಿ ರದ್ದು ಮಾಡಿ ಹಾಸನ ಜಿಲ್ಲೆಯನ್ನು ಮೈಸೂರು ವಿವಿ ವ್ಯಾಪ್ತಿಗೆ ಸೇರಿಸಬೇಕೇ ಎಂಬ ಚರ್ಚೆ ಕೂಡ ಆರಂಭವಾಗಿದೆ ಎನ್ನೋ ಮಾತುಗಳು ಕೇಳಿ ಬರ್ತಿದೆ.

ಹಾಸನದ ವಿವಿಯಲ್ಲಿ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಜಿಲ್ಲೆಯ ಯಾವೊಬ್ಬ ಜನಪ್ರತಿನಿಧಿಯಾಗಲಿ, ಸಂಘ ಸಂಸ್ಥೆಗಳಾಗಲಿ, ಉನ್ನತ ಶಿಕ್ಷಣದ ಬಗ್ಗೆ ಆಸಕ್ತಿ ಇರುವವರಾಗಲಿ ಈ ಬಗ್ಗೆ ತಲೆ ಕೆಡಿಸಿಕೊಳ್ತಿಲ್ಲ. ಊರ ಹೊರಗಿರುವ ವಿವಿ ಕೇಂದ್ರ ಅನಾಥವಾಗಿ ದಿನದಿಂದ ದಿನಕ್ಕೆ ಯಾವುದೇ ಸೌಲಭ್ಯಗಳಿಲ್ಲದೆ, ಕನಿಷ್ಟ ಅಭಿವೃದ್ಧಿ ಇಲ್ಲದೆ ನರಳುತ್ತಿದ್ದು, ಇನ್ನಾದ್ರು ಸರ್ಕಾರ ಹಾಸನದ ವಿಶ್ವವಿದ್ಯಾಲಯ ಅಭಿವೃದ್ಧಿಗೆ ಆಧ್ಯತೆ ನಿಡುತ್ತಾ ಎಂಬುದನ್ನು ಕಾದು ನೋಡಬೇಕಿದೆ. ❍

ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವ ತೀರ್ಮಾನ ಕೈಬಿಡಿ: ಸಿಪಿಐ(ಎಂ) ಆಗ್ರಹ

ರಾಜ್ಯದಲ್ಲಿ ಕೊಪ್ಪಳ, ಹಾಸನ, ಹಾವೇರಿ ಮಂಡ್ಯ, ಚಾಮರಾಜನಗರ, ಕೊಡಗು ಮೊದಲಾದ ಜಿಲ್ಲೆಗಳಲ್ಲಿ ಹೊಸದಾಗಿ ಸ್ಥಾಪಿಸಲಾಗಿದ್ದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚಲು ಸರ್ಕಾರ ತೀರ್ಮಾನಿಸಿರುವ ಕ್ರಮವನ್ನು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ತೀವ್ರವಾಗಿ ವಿರೋಧಿಸಿದ್ದು. ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಬಿಡಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ

ಹಿಂದಿನ ಬಿಜೆಪಿ ಸರ್ಕಾರವು ಈ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಮುನ್ನ ಯಾವುದೇ ಪೂರ್ವ ತಯಾರಿ ನಡೆಸಿರಲಿಲ್ಲ. ಇದರಿಂದ ಸ್ವಂತ ಜಾಗ ಮತ್ತು ಖಾಯಂ ಬೋಧಕರು ಮತ್ತು ಮೂಲಭೂತ ಸೌಕರ್ಯಗಳಿಲ್ಲದೆ ಅವು ಬಳಲುತ್ತಿದ್ದವು.



ರಾಜ್ಯದ ಪ್ರಮುಖ ವಿಶ್ವವಿದ್ಯಾಲಯಗಳಿಂದ ಬೇರ್ಪಡಿಸಿ ಈ ಜಿಲ್ಲಾ ಮಟ್ಟದ ವಿ.ವಿ.ಗಳನ್ನು ಸ್ಥಾಪಿಸಿ ಕಾಲೇಜುಗಳನ್ನು ಸಂಯೋಜಿಸಲಾಗಿತ್ತು. ಇಂತಹ ಕಾಲೇಜುಗಳಲ್ಲಿ ಓದುತ್ತಿರುವ ಸಾವಿರಾರು ವಿದ್ಯಾರ್ಥಿಗಳನ್ನು ಅಲ್ಲಿಗೆ ವರ್ಗಾಯಿಸಲಾಗಿತ್ತು. ಹೀಗೆ ತರಾತುರಿಯಲ್ಲಿ ಈ ವಿಶ್ವವಿದ್ಯಾಲಯಗಳನ್ನು ಆರಂಬಿಸಿದ್ದ ಬಿಜೆಪಿ ಅದಕ್ಕೆ ಯಾವುದೇ ಹಣಕಾಸಿನ ನೆರವನ್ನು ನೀಡಿರಲಿಲ್ಲ.

ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಈಗಾಗಲೇ ಸ್ಥಾಪನೆಯಾಗಿ ತಳವೂರಿದ್ದ ವಿಶ್ವವಿದ್ಯಾಲಯಗಳನ್ನು ವಿಭಜಿಸಲಾಗಿತ್ತು. ಇದರಿಂದಾಗಿ ಅವುಗಳಿಗೆ ಅಧ್ಯಯನಕ್ಕೆಂದು ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯೂ ಇಳಿಮುಖವಾಯಿತು. ಇದರ ಪರಿಣಾಮವಾಗಿ ಆ ವಿಶ್ವವಿದ್ಯಾಲಯಗಳ ಆರ್ಥಿಕ ಸಂಪನ್ಮೂಲಕ್ಕೆ ಪೆಟ್ಟು ಬಿದ್ದು ವಿಶ್ವವಿದ್ಯಾಲಯಗಳ ➚

ಟ್ರಂಪ್ ದರ್ಬಾರಿನಲ್ಲಿ ಮೋದಿ

ತನ್ನ ಮಿತ್ರನಾದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರಿಗೆ ಮೋದಿ ಎಷ್ಟು ಹತ್ತಿರದವರು ಎನ್ನುವುದನ್ನು ತೋರಿಸುವುದು ಹಾಗೂ ಆಗ ತೆಗೆಸಿಕೊಂಡ ಫೋಟೋವನ್ನು ತೋರಿಸಿ ಬಡಾಯಿ ಕೊಚ್ಚಿಕೊಳ್ಳುವುದು ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿ 13ರಂದು ಶ್ವೇತ ಭವನಕ್ಕೆ ಭೇಟಿ ನೀಡಿದ್ದರ ಉದ್ದೇಶವಾಗಿತ್ತು. ಆದರೆ, ಮೋದಿಯವರ ಕಣ್ಣಾವಲಿನಲ್ಲಿ ಭಾರತವು ಶರಣಾಗತಿ ಪರಿಸ್ಥಿತಿಗೆ ಇಳಿದಿರುವುದನ್ನು ಮೋದಿಯ ವಾಷಿಂಗ್ಟನ್ ಭೇಟಿಯ ವೇಳೆ ಸಾಬೀತಾಯಿತು.

ಪ್ರಕಾಶ್ ಕಾರಟ್



ಅಧ್ಯಕ್ಷ ಟ್ರಂಪ್ ಜತೆ ಭಾರತದ ಪ್ರಧಾನಿ ತರಾತುರಿಯಲ್ಲಿ ಅಧಿಕೃತ ಭೇಟಿ ಮಾಡುವ ಅಗತ್ಯವೇನೂ ಇರಲಿಲ್ಲ. ಜನವರಿ 20ರಂದು ನಡೆದ ಟ್ರಂಪ್ ಪದಗ್ರಹಣ ಸಮಾರಂಭಕ್ಕೆ ಆಹ್ವಾನ ಪಡೆಯಲು ಪ್ರಧಾನಿ ವಿಫಲವಾದ ನಂತರ, ಶ್ವೇತಭವನದಲ್ಲಿ ಟ್ರಂಪ್ ಹೇಗೆ ನೆಲೆಯೂರುತ್ತಾರೆ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಅಲ್ಲೋಲ ಕಲ್ಲೋಲಕ್ಕೆ ಕಾರಣವಾಗಬಹುದಾದ ನಿರೀಕ್ಷೆಯೂ ಇರುವಂಥದ್ದರ ಸಹಿತ, ಅವರ ನೀತಿಗಳು ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಎಂಬುದನ್ನು ಸರಕಾರ ಕಾದು ನೋಡಬೇಕಿತ್ತು. ತಾವು ಅಮೆರಿಕಕ್ಕೆ ಎಷ್ಟು ಆಪ್ತರಾಗಿದ್ದೇವೆ ಹಾಗೂ ಆ ಮೂಲಕ ಭಾರತ ಜಾಗತಿಕ ಶಕ್ತಿಯಾಗುತ್ತಿದೆ ಎಂದು ಹೇಳಿಕೊಳ್ಳಲು ಹಾತೊರೆಯುವುದು ಮೋದಿ ಮತ್ತು ಬಿಜೆಪಿ ಆಡಳಿತಗಾರರ ಹುಟ್ಟು ಗುಣವಾಗಿದೆ. ಈ ರೀತಿಯಾಗಿ, ಟ್ರಂಪ್ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ಒಂದು ತಿಂಗಳೊಳಗೆ ಅವರನ್ನು ಭೇಟಿಯಾದ ನಾಲ್ಕನೇ ವಿದೇಶಿ ನಾಯಕರಾದರು ಮೋದಿ. ಅಮೆರಿಕದ ನಿಕಟ ಮಿತ್ರ ದೇಶಗಳಾದ ಇಸ್ರೇಲ್, ಜಪಾನ್ ಮತ್ತು ಜೋರ್ಡಾನ್ ಮುಖಂಡರು ಇತರ ಮೂವರಾಗಿದ್ದಾರೆ.

ತೆರಿಗೆ ಹೊರೆ ಹೇರಿಕೆ

ಭಾರತ ಸಹಿತ ಎಲ್ಲ ದೇಶಗಳ ಮೇಲೆ 'ಪಾರಸ್ಪರಿಕ ತೆರಿಗೆ' ಹೇರುವುದಾಗಿ ಟ್ರಂಪ್ ಘೋಷಿಸಿದ ಕೆಲವೇ ಗಂಟೆಗಳ ನಂತರ ಮೋದಿ ಶ್ವೇತಭವನದಲ್ಲಿ ಟ್ರಂಪ್‌ರನ್ನು ಭೇಟಿಯಾದರು. ಯಾವುದೇ ದೇಶವು ಅಮೆರಿಕದ ಸರಕುಗಳ ಮೇಲೆ ವಿಧಿಸುವ ಸುಂಕಕ್ಕೆ ಸಮಾನವಾದ ಸುಂಕವನ್ನು ತಾನೂ ವಿಧಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಅಲ್ಲದೆ, ಭಾರತ ಜಗತ್ತಿನಲ್ಲೇ ಅತಿ ಹೆಚ್ಚಿನ ಸುಂಕ ವಿಧಿಸುವ ದೇಶವಾಗಿದೆ ಎಂದು ಸಭೆಯ ನಂತರ ಮೋದಿ ಜತೆ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಟ್ರಂಪ್ ಒತ್ತಿ ಹೇಳಿದರು. ಅಮೆರಿಕ ಮತ್ತು ಭಾರತ ನಡುವಿನ ದ್ವಿಪಕ್ಷೀಯ ಬಾಂಧವ್ಯಗಳಲ್ಲಿ ತಮ್ಮ ಬೇಡಿಕೆಗಳು ಹಾಗೂ ವಿಚಾರಗಳನ್ನು ಮಂಡಿಸುವಲ್ಲಿ ಟ್ರಂಪ್ ಯಶಸ್ವಿಯಾಗಿರುವುದು ಉಭಯ ನಾಯಕರು ಹೊರಡಿಸಿದ ಜಂಟಿ ಹೇಳಿಕೆಯಿಂದ ಗೊತ್ತಾಗುತ್ತದೆ. ಉಭಯ ದೇಶಗಳ ನಡುವಿನ ಒಟ್ಟು 130 ಶತಕೋಟಿ ಡಾಲರ್ ಮೊತ್ತದ ವಹಿವಾಟಿನಲ್ಲಿ ಅಮೆರಿಕದ ಕಡೆ 45.7 ಶತಕೋಟಿ ಡಾಲರ್ ವಾಣಿಜ್ಯ ಕೊರತೆಯಿರುವುದರಿಂದ ಅಮೆರಿಕದಿಂದ ಹೆಚ್ಚಿನ ತೈಲ ಮತ್ತು ಅನಿಲವನ್ನು ಆಮದು ಮಾಡಿಕೊಳ್ಳಲು ಹಾಗೂ ಅಮೆರಿಕದ ರಕ್ಷಣಾ ಸಾಧನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಭಾರತ ಬದ್ಧವಾಗುವಂತೆ ಮಾಡುವಲ್ಲಿ ಟ್ರಂಪ್ ಯಶಸ್ಸು ಕಂಡಿದ್ದಾರೆ. ರಕ್ಷಣಾ ವಾಣಿಜ್ಯವನ್ನು ಸುಗಮಗೊಳಿಸುವುದು ಮತ್ತು ರಕ್ಷಣಾ ಸಲಕರಣೆಗಳು ಹಾಗೂ ಸೇವೆಗಳ ಖರೀದಿಯನ್ನು ಉತ್ತಮವಾಗಿ ಸುಸಂಗತಗೊಳಿಸುವ ಬಗ್ಗೆಯೂ ಜಂಟಿ ಹೇಳಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಟ್ರಂಪ್‌ರನ್ನು ಸಂತೃಪ್ತಿಪಡಿಸಲಿಕ್ಕಾಗಿ ಅಮೆರಿಕದ ಹೆಚ್ಚು ದುಬಾರಿ ಎಣ್ಣೆ ಮತ್ತು ಅನಿಲವನ್ನು ಭಾರತ ಖರೀದಿಸಬೇಕಾಗುತ್ತದೆ. ಇದರಿಂದ ತೈಲ ಆಮದಿನ ಬಿಲ್ ಹೊರೆ ಜಾಸ್ತಿಯಾಗುತ್ತದೆ. ಈಗ ಮಾಡುತ್ತಿರುವಂತೆ, ರಷ್ಯಾದಿಂದ ತೈಲ ಮತ್ತು ಅನಿಲವನ್ನು ಖರೀದಿಸುವುದು ತುಂಬಾ ಅಗ್ಗವಾಗುತ್ತದೆ. ಅಮೆರಿಕದ ಆದೇಶದ ಮೇರೆಗೆ, ಅಗ್ಗ ಹಾಗೂ ಉತ್ತಮ ಗುಣಮಟ್ಟದ ಇರಾನ್‌ನ ತೈಲ ಖರೀದಿಸುವುದನ್ನು ಭಾರತ ನಿಲ್ಲಿಸಿದೆ. ಈಗ 10 ವರ್ಷದ ರಕ್ಷಣಾ ಚೌಕಟ್ಟು ಒಪ್ಪಂದದ ಬಗ್ಗೆ ಮಾತುಕತೆ ನಡೆಸಲು ಭಾರತ ಬದ್ಧವಾಗುವಂತೆಯೂ ಟ್ರಂಪ್ ಮಾಡಿದ್ದಾರೆ. ಇದು ವ್ಯೂಹಾತ್ಮಕವಾಗಿಯೂ ಮಿಲಿಟರಿ ವಿಚಾರದಲ್ಲೂ ಭಾರತವನ್ನು ಅಮೆರಿಕಕ್ಕೆ ಹತ್ತಿರ ತರುವುದನ್ನು ಅನಿವಾರ್ಯಗೊಳಿಸುತ್ತದೆ.

ಭಾರತಕ್ಕೆ ಎಫ್–35 ಸಮರ ವಿಮಾನಗಳನ್ನು ಮಾರಲು ಅಮೆರಿಕ ಮಾಡಿರುವ ಆಫರ್ ತುಂಬಾ ಕಳವಳಕಾರಿಯಾಗಿದ್ದು ಮೋದಿ ಸರಕಾರಕ್ಕೆ ಚಿಂತೆ ಹುಟ್ಟಿಸಬೇಕಿದೆ. ತುಂಬಾ ದುಬಾರಿಯಾದ ಈ ಯುದ್ಧ ವಿಮಾನಗಳು ಮತ್ತು ಅವುಗಳ ನಿರ್ವಹಣೆಯ ಭಾರವನ್ನು ತಾಳಿಕೊಳ್ಳಲು ಭಾರತದ ಮಿಲಿಟರಿ ಬಜೆಟ್‌ಗೆ ಸಾಧ್ಯವಾಗದು. ಆದರೆ ಈ ಆಫರ್ ಅನ್ನು ತಳ್ಳಿ ಹಾಕಲು ಮೋದಿಗೆ ಕಷ್ಟವಾಗಲಿದೆ. ಭಾರತಕ್ಕೆ 'ಶತಕೋಟಿಗಟ್ಟಲೆ ಡಾಲರ್ ಮೌಲ್ಯದ ಮಾರಾಟವನ್ನು ಮಾಡಲಾಗುತ್ತದೆ' ಎಂದು ಜಂಟಿ ಮಾಧ್ಯಮಗೋಷ್ಠಿಯಲ್ಲಿ ಟ್ರಂಪ್ ಪ್ರಕಟಿಸಿದ್ದು ಇದಕ್ಕಾಗಿಯೇ.

ಕ್ವಾಡ್ ಮತ್ತು ಇಂಡೋ–ಪೆಸಿಫಿಕ್ ಕಾರ್ಯತಂತ್ರಕ್ಕೆ ಟ್ರಂಪ್ ಹೆಚ್ಚು ಆದ್ಯತೆ ನೀಡುವುದನ್ನು ಮುಂದುವರಿಸುವುದನ್ನು ಖಾತರಿಪಡಿಸುವುದಕ್ಕೆ ಮೋದಿ ಆಡಳಿತ ಗಮನ ಹರಿಸಬೇಕಿದೆ. ನವದೆಹಲಿಯಲ್ಲಿ ನಡೆಯುವ ಕ್ವಾಡ್ ನಾಯಕರ ಶೃಂಗಸಭೆಗೆ ಟ್ರಂಪ್‌ರನ್ನು ಆಹ್ವಾನಿಸಲು ಮೋದಿ ಸಹಜವಾಗಿಯೇ ಉತ್ಸುಕರಾಗಿದ್ದಾರೆ.

ವಾಣಿಜ್ಯ ಸಂಬಂಧಗಳನ್ನು ಪರಿಶೀಲಿಸಲು ಮತ್ತು ದ್ವಿಪಕ್ಷೀಯ ವಾಣಿಜ್ಯ ಒಡಂಬಡಿಕೆಯ ಮೊದಲ ಮಜಲನ್ನು ತಲುಪಲು ಭಾರತ ಹಾಗೂ ಅಮೆರಿಕ ಯೋಜಿಸಿವೆ. ಆದರೆ, ಇದು ಭಾರತಕ್ಕೆ ಎರಡಲಗಿನ ಕತ್ತಿಯಾಗಲಿದೆ. ಹೂಡಿಕೆ ಮತ್ತು ವಾಣಿಜ್ಯದ ಎಲ್ಲ ಅಂಶಗಳನ್ನು ಟ್ರಂಪ್ ಆಡಳಿತ ಗಮನಿಸಲಿದೆ. ಭಾರತದ ಡೇಟಾ ರಕ್ಷಣಾ ನಿಯಮಗಳು, ಸಬ್ಸಿಡಿಗಳು, ವಿದೇಶಿ ಕಂಪನಿಗಳಿಗಿಂತ ದೇಶೀಯ ವ್ಯವಹಾರಗಳಿಗೆ ಹೆಚ್ಚಿನ ಅನುಕೂಲ ಮಾಡುವ ತೆರಿಗೆ ಸ್ವರೂಪ ಮತ್ತು ನಿಯಂತ್ರಣ ಕ್ರಮಗಳು ಅದರಲ್ಲಿ ಒಳಗೊಂಡಿವೆ. ಅಮೆರಿಕದ ಆರ್ಥಿಕತೆ ಸುತ್ತ ರಕ್ಷಣಾತ್ಮಕ ಗೋಡೆಯನ್ನು ಹೇರುವಾಗಲೇ ಭಾರತದ ಆರ್ಥಿಕತೆಯನ್ನು ಅಮೆರಿಕನ್ ಸರಕುಗಳಿಗೆ ಮುಕ್ತವಾಗುವಂತೆ ಮಾಡುವುದು ಟ್ರಂಪ್ ಉದ್ದೇಶವಾಗಿದೆ.

ಅಮೆರಿಕದ ನ್ಯೂಕ್ಲಿಯರ್ ರಿಯಾಕ್ಟರ್‌ಗಳನ್ನು ಖರೀದಿಸುವಂತೆ ಅಮೆರಿಕದ ಒತ್ತಡವನ್ನು ನಿರೀಕ್ಷಿಸಿಯೇ ಮೋದಿ ಸರಕಾರ ಈಗಾಗಲೇ ನಾಗರಿಕ ಪರಮಾಣು ಹೊಣೆಗಾರಿಕೆ ಕಾನೂನಿಗೆ ತಿದ್ದುಪಡಿ ತರುವ ಉದ್ದೇಶವನ್ನು ಪ್ರಕಟಿಸಿದೆ. ಆರು ವೆಸ್ಟಿಂಗ್‌ಹೌಸ್ ನ್ಯೂಕ್ಲಿಯರ್ ರಿಯಾಕ್ಟರ್‌ಗಳನ್ನು ಭಾರತಕ್ಕೆ ಮಾರುವುದನ್ನು ತ್ವರಿತಗೊಳಿಸುವ ಬಗ್ಗೆಯೂ ಜಂಟಿ ಹೇಳಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಇಲ್ಲಿ ಕೂಡ ಮೋದಿ ಸರಕಾರವು ನ್ಯೂಕ್ಲಿಯರ್ ರಿಯಾಕ್ಟರ್‌ಗಳನ್ನು ಪೂರೈಸುವವರ ಹೊಣೆಗಾರಿಕೆಯನ್ನು ತಪ್ಪಿಸಲು ಮುಂದಾಗಿದೆ. ಈ ಮೂಲಕ, ಭಾರತೀಯರ ಜೀವ ಮತ್ತು ಸುರಕ್ಷತೆಗೆ ದ್ರೋಹ ಬಗೆಯುತ್ತಿದೆ.

ವಲಸಿಗರ ಸುರಕ್ಷತೆಗೆ ವಿಫಲ

ಅಕ್ರಮವಾಗಿ ದೇಶವನ್ನು ಪ್ರವೇಶಿಸಿದ್ದ ಭಾರತೀಯರನ್ನು ಅಮೆರಿಕದಿಂದ ವಾಪಸ್ ಕಳಿಸುವಾಗ ಅವರನ್ನು ನ್ಯಾಯಸಮ್ಮತವಾಗಿ ಹಾಗೂ ಮಾನವೀಯವಾಗಿ ನಡೆಸಿಕೊಳ್ಳುವುದನ್ನು ಖಾತರಿಪಡಿಸಲು ವಿಫಲವಾಗಿರುವುದು ಮೋದಿ ಭೇಟಿಯ ಇನ್ನೊಂದು ಎದ್ದು ಕಾಣುವ ಅಂಶವಾಗಿದೆ. ಭಾರತೀಯರ ಮೊದಲ ತಂಡವನ್ನು ಮಿಲಿಟರಿ ವಿಮಾನದಲ್ಲಿ ಕಳಿಸುವಾಗ ಅವರ ಕೈಗಳಿಗೆ ಕೋಳ ಹಾಗೂ ಕಾಲುಗಳಿಗೆ ಸಂಕೋಲೆಗಳನ್ನು ತೊಡಿಸಲಾಗಿತ್ತು. ಅದು ಅಮೆರಿಕದ ಸ್ಥಾಪಿತ ನಿಯಮಗಳಿಗೆ ಅನುಗುಣವಾಗಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸಂಸತ್ತಿನಲ್ಲಿ ನಾಚಿಕೆ ಬಿಟ್ಟು ಹೇಳಿದ್ದಾರೆ. ಮೋದಿ ಈ ವಿಷಯವನ್ನು ಟ್ರಂಪ್‌ರೊಂದಿಗೆ ಪ್ರಸ್ತಾಪಿಸುವ ನಿರೀಕ್ಷೆಯಿತ್ತು. ಅವರು ಒಂದು ವೇಳೆ ಹಾಗೆ ಮಾಡಿದ್ದರೆ, –ಅದು ಅನುಮಾನವೇ; ಅದು ಯಾವುದೇ ಪರಿಣಾಮ ಬೀರಿಲ್ಲ. ಮೋದಿ ಭೇಟಿಯ ನಂತರ ಇನ್ನೂ ಎರಡು ವಿಮಾನಗಳಲ್ಲಿ ಅಕ್ರಮ ವಲಸಿಗರು ಅಮೃತಸರಕ್ಕೆ ತಲುಪಿದ್ದಾರೆ. ಅವರಿಗೆ ಕೂಡ ಸಂಕೋಲೆ ಮತ್ತು ಕೋಳ ತೊಡಿಸಲಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ, ಕೊಲಂಬಿಯಾ ಮತ್ತು ಮೆಕ್ಸಿಕೋ ಅಧ್ಯಕ್ಷರು ಈ ವಿಚಾರದಲ್ಲಿ ಕೈಗೊಂಡ ದೃಢ ಹಾಗೂ ಸ್ವಾಭಿಮಾನದ ನಿಲುವು ಎದ್ದು ಕಾಣುವಂಥದ್ದಾಗಿದೆ.

ಅಂತಿಮವಾಗಿ, ತೀವ್ರ ಬಲಪಂಥೀಯ ನೀತಿಗಳು ಮತ್ತು ಆಕ್ರಮಣಕಾರಿ ಸಾಮ್ರಾಜ್ಯಶಾಹಿ ಧೋರಣೆ ಅನುಸರಿಸುತ್ತಿರುವ ಟ್ರಂಪ್‌ರ ನೀತಿಯಂತೆಯೇ ಮೋದಿ ಧೋರಣೆಗಳೂ ಇರುವುದನ್ನು ವಾಷಿಂಗ್ಟನ್ ಭೇಟಿಯು ಸಂಕೇತಿಸುತ್ತದೆ. ಗಾಜಾವನ್ನು ವಶಪಡಿಸಿಕೊಂಡು ಅಲ್ಲಿ ನೆಲೆಸಿರುವ ಪ್ಯಾಲೆಸ್ತೀನಿಯರನ್ನು ಬೇರೆಡೆ ಸ್ಥಳಾಂತರಿಸುವ ಟ್ರಂಪ್‌ರ ಆಘಾತಕಾರಿ ಘೋಷಣೆಗೆ ಭಾರತ ಸರಕಾರ ಯಾವುದೇ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ. ತಮ್ಮ ಜಂಟಿ ಮಾಧ್ಯಮಗೋಷ್ಠಿಯಲ್ಲಿ ಟ್ರಂಪ್ ಮಾಡಿದ ಈ ಘೋಷಣೆಯಿಂದ ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೇತನ್ಯಾಹುಗೆ ರೋಮಾಂಚನವಾಗಿದೆ. ಆದರೆ, ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಬಗ್ಗೆ ಮೋದಿ ತುಟಿ ಪಿಟಿಕ್ ಎಂದಿಲ್ಲ. ಏನಿದ್ದರೂ ಟ್ರಂಪ್, ನೇತನ್ಯಾಹು ಮತ್ತು ಮೋದಿ–ಇವರೆಲ್ಲರೂ ಒಂದೇ ಸಿದ್ಧಾಂತದ ಗರಿಯುಳ್ಳ ಹಕ್ಕಿಗಳಲ್ಲವೇ?

ಅನು: ವಿಶ್ವ

ಪ್ರಾಧ್ಯಾಪಕರ ವೇತನ ಪಾವತಿಸುವುದೇ ಕಷ್ಟ ಎಂಬ ಸ್ಥಿತಿಗೆ ಬಂದು ಮುಟ್ಟಿತು. ಈ ನಡುವೆ ವಿಶ್ವವಿದ್ಯಾಲಯಗಳಿಗೆ ಸರ್ಕಾರ ಅನುದಾನವನ್ನೇ ನೀಡದೆ ಸ್ವಂತ ಹಣಕಾಸು ಮೂಲವನ್ನು ಸೃಷ್ಟಿಸಿಕೊಳ್ಳಲು ವಿಶ್ವವಿದ್ಯಾಲಯಗಳ ಮೇಲೆ ಒತ್ತಡ ಹೇರಲಾಯಿತು. ಇದರಿಂದ ವಿವಿಧ ನೆಪವೊಡ್ಡಿ ವಿದ್ಯಾರ್ಥಿಗಳಿಂದ ಹಣ ಕಕ್ಕಿಸುವ ಕೆಲಸಕ್ಕೆ ವಿಶ್ವವಿದ್ಯಾಲಯಗಳು ಮುಂದಾದವು. ಉನ್ನತ ಶಿಕ್ಷಣವನ್ನು ಖಾಸಗೀಕರಿಸುವ ಭಾಗವಾಗಿಯೇ ಕೇಂದ್ರದ ಒತ್ತಡಕ್ಕೆ ಮಣಿದ ಅಂದಿನ ಬಿಜೆಪಿ ಈ ಕ್ರಮ ಕೈಗೊಂಡಿತ್ತು.

ಆದರೆ ಇದೀಗ ಅದಕ್ಕೆ ಅಗತ್ಯವಿರುವ ಹಣಕಾಸು ನೆರವು ನೀಡಿ ಅವುಗಳನ್ನು ಬಲಪಡಿಸಬೇಕಾದ ರಾಜ್ಯದ ಕಾಂಗ್ರೆಸ್ ಸರ್ಕಾರವು ಆರ್ಥಿಕ ನೆಪವನ್ನು ಮುಂದುಮಾಡಿ ಆ ವಿ.ವಿ.ಗಳನ್ನು ಮುಚ್ಚುವ ನಿರ್ಧಾರಮಾಡಲು ಮುಂದಾಗಿರುವುದು ಸರಿಯಾದ ಕ್ರಮವಲ್ಲ. ಒಟ್ಟಾರೆ ರಾಜ್ಯದ ಒಂಬತ್ತು ವಿವಿಗಳ ನೂರಾರು ಕಾಲೇಜುಗಳ ಸುಮಾರು ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ನೂರಾರು ಅಧ್ಯಾಪಕರು ಇತರೆ ಸಿಬ್ಬಂದಿಗಳು ಇದರಿಂದ ಅತಂತ್ರಗೊಳ್ಳುವ ಪರಿಸ್ಥಿತಿಗೆ ತಲುಪಿದ್ದಾರೆ.

ಕೇಂದ್ರದ ಬಿಜೆಪಿ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರಗಳು ತಮ್ಮ ಪ್ರತಿಷ್ಠೆಗಾಗಿ ಆಡುವ ಆಟಗಳು ಇಡೀ ಉನ್ನತ ಶಿಕ್ಷಣ ವ್ಯವಸ್ಥೆಯನ್ನೇ ಬುಡಮೇಲು ಮಾಡಿವೆ. ರಾಜಕೀಯ ಪಕ್ಷಗಳ ಸೈದ್ಧಾಂತಿಕ ವೈರತ್ವದ ಪೈಪೋಟಿಗೆ ಸಿಕ್ಕಿ ಒಟ್ಟು ಶಿಕ್ಷಣ ವ್ಯವಸ್ಥೆ ಅಧ್ವಾನವಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

9 ವಿವಿಗಳನ್ನು ಮುಚ್ಚುವ ಸರ್ಕಾರದ ಈ ಅವೈಜ್ಞಾನಿಕ ನಡೆಯಿಂದ ಹಿಂದೆ ಸರಿಯಬೇಕು. 9 ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು, ಬೋಧಕರು ಹಾಗೂ ಇತರೆ ಸಿಬ್ಬಂದಿಗಳ ಹೊಣೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮಾನವಾಗಿ ಹೊತ್ತುಕೊಳ್ಳಬೇಕು ಮತ್ತು ರಾಜ್ಯದ ಈ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಜಮೀನಿನ ವೆಚ್ಚ ಬಿಟ್ಟು (100ರಿಂದ 200 ಎಕರೆ ಅಗತ್ಯ) 342 ಕೋಟಿ ರೂ. ಮೊತ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ, ಮೂಲ ಸೌಕರ್ಯ, ಸಲಕರಣೆಗಳು, ವಾಹನಗಳು, ಪೀಠೋಪಕರಣ ಮತ್ತು ಇತರೆ ವಸ್ತುಗಳ ಖರೀದಿಸಲು ಅಗತ್ಯವಿರುವ ಹಣಕಾಸಿನ ನೆರವನ್ನು ಮಾರ್ಚ್ ತಿಂಗಳಲ್ಲಿ ಮಂಡಿಸಲಿರುವ ರಾಜ್ಯ ಬಜೆಟ್‌ನಲ್ಲಿ ಪ್ರಕಟಿಸಬೇಕು. ಆ ಮೂಲಕ 9 ವಿಶ್ವವಿದ್ಯಾಲಯಗಳನ್ನು ಮತ್ತು ಅಲ್ಲಿ ಓದುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಸಂರಕ್ಷಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.



ಮಂಗಳೂರಿನಲ್ಲಿ ಮರಳು ದಂಧೆ: ಹೊಣೆ ಯಾರು? ಉಸ್ತುವಾರಿ ಸಚಿವರು ತರಾಟೆಗೆ ತೆಗೆದುಕೊಂಡಿದ್ದು ಯಾರನ್ನು!!

ಮುನೀರ್ ಕಾಟಿಪಳ್ಳ

ಮಂಗಳೂರಿನಲ್ಲಿ ಅಕ್ರಮ ಮರಳುಗಾರಿಕೆ ದಂಧೆಕೋರರ ಅಟ್ಟಹಾಸದಿಂದಾಗಿ ಮಂಗಳೂರಿನ ನದಿಗಳು ತನ್ನ ಸತ್ವ ಹಾಗೂ ನೀರಿಂಗಿಸುವ ಶಕ್ತಿ ಕಳೆದುಕೊಂಡಿವೆ. ಸೇತುವೆಗಳು, ಚೆಕ್ ಡ್ಯಾಂಗಳು ದುರ್ಬಲಗೊಳ್ಳುತ್ತಾ ಅಪಾಯಕ್ಕೀಡಾಗುತ್ತಿವೆ. ಮೂಲರಪಟ್ಣ, ಮಲವೂರು, ಅಡ್ಡೂರು, ಪೊಲಳಿ ಸೇತುವೆಗಳು ಕುಸಿದದ್ದು, ಬಿರುಕು ಬಿಟ್ಟದ್ದು ಸೇತುವೆಯ ಸುತ್ತ ಅನಿಯಂತ್ರಿತ ಮರಳುಗಾರಿಕೆಯ ಪರಿಣಾಮದಿಂದ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಸಚಿವರೂ ಇದೇ ಮಾತನ್ನು ಆಡಿದ್ದಾರೆ. ಉಸ್ತುವಾರಿ ಸಚಿವರು ಈ ಮರಳು ದಂದೆಗೆ ಯಾರನ್ನು ಹೊಣೆಯಾಗಿಸಿ ತರಾಟೆಗೆ ತಗೆದುಕೊಳ್ಳಬೇಕಿತ್ತೋ ಅದನ್ನು ಮಾಡದೆ. "ಗಣಿ ಮತ್ತು ಭೂ ವಿಜ್ಞಾನ ಇಲಾಖೆ"ಯ ಮಹಿಳಾ ಅಧಿಕಾರಿಯನ್ನು ಹೊಣೆಯಾಗಿಸಿ ತರಾಟೆಗೆ ತೆಗೆದುಕೊಂಡರು. ಆದರೆ ನಿಜಕ್ಕೂ ಯಾರನ್ನು ಮಾಡಬೇಕಿತ್ತು?

ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿ ಪೂರ್ತಿಯಾಗಿ ದಂಧೆಕೋರರ ಸ್ವರ್ಗವಾಗಿ ಬಿಟ್ಟಿದೆ. ಅದರಲ್ಲೂ, ಮರಳು ಮಾಫಿಯಾದವರನ್ನು ಹೇಳುವವರು, ಕೇಳುವವರು ಯಾರೂ ಇಲ್ಲ ಎಂಬ ಸ್ಥಿತಿ ನಿರ್ಮಾಣಗೊಂಡಿದೆ. ಪೊಲೀಸ್ ಕಮೀಷನರೇಟ್ ಮರಳು ದಂಧೆಕೋರರ ಜೊತೆಗೆ ನೇರವಾಗಿ ಗುರುತಿಸಿಕೊಂಡರೆ, ಜಿಲ್ಲಾಧಿಕಾರಿ ಕಚೇರಿ ಮೌನ ಶಾಮೀಲಾತಿ ಹೊಂದಿದೆ. ದೂರು ನೀಡಿದವರ ಮಾಹಿತಿಯನ್ನು ಪೂರ್ಣ ವಿಳಾಸದೊಂದಿಗೆ ಮರಳು ದಂಧೆಕೋರರಿಗೆ ತಿಳಿಸಿ, ಅವರನ್ನು ಅಪಾಯಕ್ಕೊಡ್ಡುವ ಕಾರ್ಯವೂ ಮಂಗಳೂರಿನಲ್ಲಿದೆ. ಉಡುಪಿ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾಧಿಕಾರಿಗಳು ನಿರ್ಬಂಧಿತ ಪ್ರದೇಶಗಳಲ್ಲಿ ಒಂದು ಹಿಡಿ ಮರಳು ತೆಗೆಯಲೂ ಅವಕಾಶ ಒದಗಿಸದಿರುವುದು, ಮಂಗಳೂರಿನ ಮರಳು ದಂಧೆಕೋರರ ಪಾಲಿಗೆ ವರದಾನವಾಗಿದೆ. ಪ್ರತಿದಿನ ನೂರಾರು ಟಿಪ್ಪರ್‌ಗಳು ಮಂಗಳೂರಿನ ನದಿಗಳಿಂದ ಅಕ್ರಮ ಮರಳು ಸಂಗ್ರಹಿಸಿ ಉಡುಪಿಗೆ ಸಾಗಾಟ ಮಾಡುತ್ತಿವೆ. ಬಂಪರ್ ಲಾಭಗಳಿಸುತ್ತಿವೆ. ಈ ಅಕ್ರಮದ ಪಾಲು ಮಂಗಳೂರು ಪೊಲೀಸ್ ಇಲಾಖೆಗೆ, ಜಿಲ್ಲಾಡಳಿತಕ್ಕೆ, ಸಲ್ಲಬೇಕಾದವರಿಗೆ ದೊಡ್ಡ ಗಂಟಾಗಿ ಸಲ್ಲಲ್ಪಡುತ್ತಿದೆ.

ಹೊಸ ಸೇತುವೆಗಳು ನಿರ್ಮಾಣ ಆಗುತ್ತಿರುವ ಪಲ್ಗುಣಿ ನದಿಯ ಕೂಳೂರು, ಪೊಳಲಿ–ಅಡ್ಡೂರುಗಳಲ್ಲಿ, ಹೊಸ ಸೇತುವೆ ನಿರ್ಮಾಣಗೊಂಡಿರುವ ಮರವೂರು, ಗುರುಪುರಗಳಲ್ಲಿ ಸೇತುವೆಯ ಸುತ್ತ ನೂರಾರು ದೋಣಿಗಳು ಸಾಂಪ್ರದಾಯಿಕ ಮೀನುಗಾರಿಕೆಯಷ್ಟೆ ನಿರಾಳವಾಗಿ ಮರಳು ತೆಗೆಯುತ್ತಿದ್ದಾರೆ. ಇದರಿಂದ ಹೊಸ ಸೇತುವೆಗಳ ಬಾಳಿಕೆ, ಭವಿಷ್ಯದ ಕುರಿತು ಈಗಾಗಲೆ ಆತಂಕ ಶುರುವಾಗಿದೆ. ಈ ಸೇತುವೆಗಳಲ್ಲದೆ, ನೇತ್ರಾವತಿಯ ಹರೇಕಳ ಹೊಸ ಡ್ಯಾಂನ ಸಮೀಪವೂ ಮರಳುದಂಧೆ ಜೋರಾಗಿದೆ. ಸ್ಥಳೀಯ ಕೊಣಾಜೆ ಪೊಲೀಸರು ಶಾಸಕರಿಗೆ ಹೊಡೆದಷ್ಟೆ ಭಯ ಭಕ್ತಿ, ಗೌರವದಿಂದ ಈ ಮರಳು ಸಾಗಾಟದ ಖದೀಮರಿಗೆ ಸೆಲ್ಯೂಟ್ ಹೊಡೆಯುತ್ತಾರೆ.

ಹಾಗೆಯೆ, ಮೂಲ್ಕಿ ಕ್ಷೇತ್ರದ ಚೇಳಾಯೂರು ಚೆಕ್ ಡ್ಯಾಂನಲ್ಲಿ ಮರಳು ತೆಗೆಯುವ ರಭಸಕ್ಕೆ ಬಿರುಕುಗಳು ಕಾಣಿಸಿಕೊಂಡಿರುವುದು ವರದಿಯಾಗಿದೆ. ಮೂಲ್ಕಿ ತಾಲೂಕಿನ ಶಾಂಭವಿ, ನಂದಿನಿ ನದಿಗಳು ಅಕ್ರಮ ಮರಳು ದಂಧೆಯವರಿಗೆ ಪೂರ್ಣವಾಗಿ ಬಿಟ್ಟು ಕೊಡಲಾಗಿದೆ. ಮಂಗಳೂರು ಉತ್ತರದ ಕೂಳೂರು, ಅದ್ಯಪಾಡಿ, ಮಳಲಿಗಳಲ್ಲಿ ಮರಳು ದಂಧೆಕೋರರದ್ದೆ ಸಾಮ್ರಾಜ್ಯವಾಗಿದೆ. ಇಲ್ಲಿ ಫಲ್ಗುಣಿ ನದಿ ಭವಿಷ್ಯದಲ್ಲಿ ನಿರ್ಜೀವಗೊಂಡರೂ ಅಚ್ಚರಿ ಇಲ್ಲ.

ಫಲ್ಗುಣಿ ನದಿಯ ಅಡ್ಡೂರು –ಪೊಳಲಿ ಸೇತುವೆ ಮರಳು ದಂಧೆಯಿಂದ ಬಿರುಕು ಬಿಟ್ಟು ಸಂಚಾರ ನಿರ್ಬಂಧಿಸಲ್ಪಟ್ಟಿದೆ. ಈಗ ಹೊಸ ಸೇತುವೆ ನಿರ್ಮಾಣಗೊಳ್ಳುತ್ತಿದೆ. ಇದೇ ಸ್ಥಳಕ್ಕೆ ಇತ್ತಿಚೆಗಷ್ಟೆ ಉಸ್ತುವಾರಿ ಸಚಿವರು ಭೇಟಿ ನೀಡಿ, ಸೇತುವೆಯ 500 ಮೀಟರ್ ಸುತ್ತಲು ಮರಳುಗಾರಿಕೆ ನಡೆಸಿದರೆ ಪಿಲ್ಲರ್‌ಗಳು ದುರ್ಬಲ ಆಗುತ್ತದೆ, ಸೇತುವೆ ಸುತ್ತ ಅಕ್ರಮ ಮರಳುಗಾರಿಕೆ ತಡೆಯಿರಿ ಎಂದು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ತಾಕೀತು ಮಾಡಿದ್ದರು. ಅದರೆ, ಉಸ್ತುವಾರಿ ಸಚಿವರ ಮಾತಿಗೆ ಮಂಗಳೂರಿನಲ್ಲಿ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ. ಅವರು ಅತ್ತ ಹೋಗುತ್ತಲೆ, ಇತ್ತ ಅಡ್ಡೂರು ಸೇರಿದಂತೆ ಮಂಗಳೂರಿನ ಎಲ್ಲಾ ಸೇತುವೆಗಳ ಸುತ್ತಲೂ, ಸಂತೆಯಲ್ಲಿ ವ್ಯಾಪಾರಿಗಳು ನೆರೆದಂತೆ ದೋಣಿಗಳಲ್ಲಿ ದಂಧೆಕೋರರು ನೆರೆದಿದ್ದಾರೆ. ಹಗಲೂ ರಾತ್ರಿ ಅಕ್ರಮವಾಗಿ ಮರಳು ಎತ್ತುತ್ತಿದ್ದಾರೆ.

ಇದಕ್ಕೆ ಯಾರನ್ನು ಹೊಣೆ ಮಾಡಬೇಕು?

ಆದರೆ, ಈ ಮರಳು ದಂದೆಗೆ ಯಾರನ್ನು ಹೊಣೆಯಾಗಿಸಿ ತರಾಟೆಗೆ ತಗೆದುಕೊಳ್ಳಬೇಕಿತ್ತೋ ಅದನ್ನು ಸಚಿವರು ಮಾಡಲಿಲ್ಲ. ಮಂಗಳೂರಿನಲ್ಲಿ ಉತ್ತುಂಗ ತಲುಪಿರುವ ಸೇತುವೆ, ಡ್ಯಾಂಗಳನ್ನು ಅಪಾಯಕ್ಕೆ ಒಡ್ಡಿರುವ ಅಕ್ರಮ ಮರಳು ದಂಧೆಯ ಕುರಿತು ಜಿಲ್ಲಾ ಕೆಡಿಪಿ ಸಭೆಯಲ್ಲಿ ಸಚಿವರು "ಗಣಿ ಮತ್ತು ಭೂ ವಿಜ್ಞಾನ ಇಲಾಖೆ"ಯ ಮಹಿಳಾ ಅಧಿಕಾರಿಯನ್ನು ಹೊಣೆಯಾಗಿಸಿ ತರಾಟೆಗೆ ತೆಗೆದುಕೊಂಡರು. ಇದು ನಿಜಕ್ಕೂ ಅಚ್ಚರಿಯ ಸಂಗತಿ. ಸಚಿವರು ಗಣಿ ಇಲಾಖೆಯ ಮಹಿಳಾ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಳ್ಳುವಾಗ ಮಂಗಳೂರು ನಗರ ಪೊಲೀಸ್ ಕಮೀಷನರ್, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಸಚಿವರಿಗೆ ಸಾಥ್ ನೀಡಿ ತಾವೂ ಒಂದಿಷ್ಟು ಆರೋಪಗಳನ್ನು ಹೊರಿಸಿದರು. ಒಟ್ಟು ಅನಿಷ್ಟಕ್ಕೆಲ್ಲ ಶನೀಶ್ವರನೆ ಕಾರಣ ಎಂಬಂತೆ ಎಲ್ಲರೂ ಸೇರಿ, ಗಣಿ ಇಲಾಖೆಯ ಅಧಿಕಾರಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ತಮ್ಮ ಕರ್ತವ್ಯ ಲೋಪವನ್ನು ಮರೆಮಾಚಲು ಯತ್ನಿಸಿದರು.

ಉಸ್ತುವಾರಿ ಸಚಿವರು ನಿಜಕ್ಕೂ, ಅಕ್ರಮ ಮರಳುಗಾರಿಕೆ ದಂಧೆಕೋರರ ಅಟ್ಟಹಾಸದಿಂದ ಆಕ್ರೋಶಿತರಾಗಿದ್ದರೆ, ಸಭೆಯಲ್ಲಿ ತನ್ನ ಜೊತೆಗೆ ವೇದಿಕೆಯ ಮೇಲಿದ್ದ ಐಪಿಎಸ್, ಐಎಎಸ್ ಅಧಿಕಾರಿಗಳನ್ನು ಹೊಣೆಯಾಗಿಸಿ ಪ್ರಶ್ನಿಸಬೇಕಿತ್ತೆ ಹೊರತು, ಅವರೊಂದಿಗೆ ಸೇರಿ ವೇದಿಕೆಯ ಕೆಳಗಿದ್ದ ಗಣಿ ಇಲಾಖೆಯ ಮಹಿಳಾ ಅಧಿಕಾರಿಯನ್ನಲ್ಲ. ಮಹಿಳಾ ಅಧಿಕಾರಿ ನೀಡಿದ ಸಮಜಾಯಿಷಿಯು ಸರಿ ಇತ್ತು. "ಪೊಲೀಸ್ ಇಲಾಖೆಯ ಸಹಕಾರ ಸಿಗುತ್ತಿಲ್ಲ, ತಮ್ಮಲ್ಲಿ ಸಿಬ್ಬಂದಿ ಕೊರತೆ ಇದೆ, ನಾವು ಅಕ್ರಮ ಮರಳುಗಾರಿಕೆಯ ಸ್ಥಳಕ್ಕೆ ತೆರಳಿ ಗಂಟೆಗಳ ಕಾಲವಾದರೂ, ಪೊಲೀಸರು ಸ್ಥಳಕ್ಕೆ ಬರುವುದಿಲ್ಲ..." ಎಂಬ ಅವರ ಆರೋಪ ನೂರಕ್ಕೆ ನೂರು ಸರಿ ಇದೆ ಎಂಬುದು ಅಕ್ರಮ ಮರಳು ದಂಧೆಯ ವಿರುದ್ಧ ಧ್ವನಿ ಎತ್ತುತ್ತಿರುವ ಎಲ್ಲರ ಅನುಭವ. ಈ ಕುರಿತು ತಮ್ಮ ಪಕ್ಕದಲ್ಲಿ ಕೂತಿದ್ದ ಪೊಲೀಸ್ ಕಮೀಷನರ್ ಅವರನ್ನು ಸಚಿವರು ಯಾಕೆ ತರಾಟೆಗೆ ತೆಗೆದುಕೊಳ್ಳಲಿಲ್ಲ?

ಉಡುಪಿಯಲ್ಲಿ ಸಾಧ್ಯವಾದರೆ, ಮಂಗಳೂರಿನಲ್ಲೇಕೆ ಸಾಧ್ಯವಿಲ್ಲ?

ದುರಂತ ಅಂದರೆ, ಈ ಎಲ್ಲಾ ಮರಳುಗಾರಿಕೆಗಳೂ ನಿರ್ಬಂಧಿತ ಪ್ರದೇಶಗಳಲ್ಲೆ ನಡೆಯುತ್ತದೆ. ಮೊದಲೆಲ್ಲ ರಾತ್ರಿಯ ಕತ್ತಲಲ್ಲಿ ನಡೆಯುತ್ತಿದ್ದರೆ, ಈಗಿನ ಪೊಲೀಸ್ ಕಮೀಷನರ್, ಜಿಲ್ಲಾಧಿಕಾರಿಗಳ ಅವಧಿಯಲ್ಲಿ ಹಗಲು ಹೊತ್ತಿನಲ್ಲೆ ಅಕ್ರಮ ಮರಳುಗಾರಿಕೆಯ ದೋಣಿಗಳು ನೂರಾರು ಸಂಖ್ಯೆಯಲ್ಲಿ ನಿರ್ಭೀತಿಯಿಂದ ನದಿಗೆ ಇಳಿಯುತ್ತಿವೆ, ನಿರಾತಂಕವಾಗಿ ಮರಳು ಎತ್ತುತ್ತಿವೆ. ಉಡುಪಿ ಜಿಲ್ಲೆಯ ಎಸ್‌ಪಿ ಅಕ್ರಮ ಮರಳು ಸಾಗಾಟಕ್ಕೆ ಸಹಕರಿಸಿದ ಆರೋಪದಲ್ಲಿ ಹತ್ತಾರು ಸಂಖ್ಯೆಯ ಪೊಲೀಸರನ್ನು ಅಮಾನತು ಮಾಡಿ ಮನೆಗೆ ಕಳುಹಿಸಿದ್ದಾರೆ. ಮಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಮಾತ್ರ ಪೊಲೀಸರನ್ನು ಅಕ್ರಮ ಮರಳು ಸಾಗಾಟದ ಟಿಪ್ಪರ್‌ಗಳಿಗೆ ಬೆಂಗಾವಲು ಒದಗಿಸಲು ನಿಯೋಜಿಸಿದ ರೀತಿಯ ಪರಿಸ್ಥಿತಿ ನಿರ್ಮಾಣಗೊಂಡಿದೆ. ಈ ಕುರಿತು ಧ್ವನಿ ಎತ್ತುವವರು ದೂರು ನೀಡಿ, ನೀಡಿ ಸುಸ್ತಾಗಿದ್ದಾರೆ, ಜನಪರ ಪತ್ರಕರ್ತರು ವರದಿ ಮಾಡಿ ಮಾಡಿ ಸುಸ್ತಾಗಿದ್ದಾರೆ.

ಪೊಲೀಸ್ ಇಲಾಖೆ ತೀರ್ಮಾನಿಸಿದರೆ, ಅಕ್ರಮ ಮರಳುಗಾರಿಕೆಯ ಒಂದು ದೋಣಿಯಾದರೂ ಮಂಗಳೂರಿನ ನದಿಗೆ ಇಳಿಯುವ ಧೈರ್ಯ ತೋರಿಸಲು ಸಾಧ್ಯವೆ? ಅಕ್ರಮ ಮರಳು ಸಾಗಾಟದ ಒಂದೇ ಒಂದು ಟಿಪ್ಪರ್ ಆದರೂ ರಸ್ತೆಗೆ ಇಳಿಯಲು ಸಾಧ್ಯವೆ? ಉಡುಪಿ ಜಿಲ್ಲೆಯಲ್ಲಿ ಯಾಕೆ ಅಕ್ರಮ ಮರಳುಗಾರಿಕೆ ಪೂರ್ತಿ ಸ್ಥಗಿತಗೊಂಡಿದೆ, ಅಲ್ಲಿನ ನಿರ್ಬಂಧಿತ ಪ್ರದೇಶದಲ್ಲಿ ಒಂದು ಹಿಡಿ ಮರಳನ್ನು ತೆಗೆಯುವ ಧೈರ್ಯ ಮರಳು ಮಾಫಿಯಾಗೆ ಯಾಕೆ ಇಲ್ಲ? ಉಡುಪಿ ಪೊಲೀಸ್ ವರಿಷ್ಠಾಧಿಕಾರಿ "ಗಣಿ ಇಲಾಖೆ ನೋಡಿಕೊಳ್ಳಲಿ" ಎಂದು ತಮ್ಮ ಜವಾಬ್ದಾರಿ ಮರೆತು ಕೂತಿದ್ದಾರೆಯೆ? ಆಥವಾ ಇಡೀ ಪೊಲೀಸ್ ಇಲಾಖೆಯನ್ನು ಅಕ್ರಮ ಮರಳು ದಂಧೆಯ ವಿರುದ್ಧ ಸನ್ನದ್ದ ಸ್ಥಿತಿಯಲ್ಲಿ ಇರಿಸಿದ್ದಾರೆಯೆ? ಉಡುಪಿಯ ಪೊಲೀಸ್ ವರಿಷ್ಠಾಧಿಕಾರಿಗೆ ಸಾಧ್ಯವಾಗಿದ್ದು, ಮಂಗಳೂರಿನ ಪೊಲೀಸ್ ಕಮೀಷನರ್‌ಗೆ ಯಾಕೆ ಸಾಧ್ಯವಾಗುತ್ತಿಲ್ಲ? ಇದು ಮಿಲಿಯನ್ ಡಾಲರ್ ಪ್ರಶ್ನೆ ಏನಲ್ಲವಲ್ಲ!

ಲಂಚದ ಆರೋಪಗಳ ಕುರಿತು ತನಿಖೆ ನಡೆಸಲಿ

ಮಂಗಳೂರಿನ ನದಿಗಳು, ಅದರ ಮೇಲಿನ ಸೇತುವೆಗಳು, ಅಡ್ಡಲಾಗಿರುವ ಡ್ಯಾಂಗಳ ಕುರಿತು ಉಸ್ತುವಾರಿ ಸಚಿವರು ಕಾಳಜಿ ಹೊಂದಿದ್ದರೆ, ಅಕ್ರಮ ಮರಳುಗಾರಿಕೆಯ ಕುರಿತು ಆಕ್ರೋಶಿತರಾಗಿರುವುದು ನಿಜವೇ ಆಗಿದ್ದರೆ, ಅಕ್ರಮ ಮರಳುಗಾರಿಕೆಗೆ ನದಿಗೆ ಇಳಿಯುವ ಪ್ರತಿಯೊಂದು ದೋಣಿಗಳು, ಅಕ್ರಮ ಮರಳು ಸಾಗಾಟ ಮಾಡುವ ಪ್ರತಿಯೊಂದು ಟಿಪ್ಪರ್‌ಗಳು ಸಂಬಂಧಪಟ್ಟವರಿಗೆ (ಪ್ರಧಾನವಾಗಿ ಪೊಲೀಸ್ ಠಾಣೆಗಳಿಗೆ, ಟಿಪ್ಪರ್, ದೋಣಿ ಲೆಕ್ಕದಲ್ಲಿ) ಲಂಚ ನೀಡುತ್ತಿವೆ ಎಂಬ ಸಾರ್ವಜನಿಕ ವಲಯದ ಆರೋಪಗಳ ಕುರಿತು ತನಿಖೆ ನಡೆಸಲಿ. ಆಗ ಎಲ್ಲರ ಅಸಲಿಯತ್ತು ಬಹಿರಂಗಗೊಳ್ಳುತ್ತದೆ. ಅದಕ್ಕಿಂತಲೂ ಮೊದಲು, ಗ್ಯಾಂಬ್ಲಿಂಗು, ಅಕ್ರಮ ಮರಳುಗಾರಿಕೆ ಸೇರಿದಂತೆ ದಂಧೆಗಳ ಕುರಿತು ಮೃದುವಾಗಿದ್ದಾರೆ ಎಂಬ ವ್ಯಾಪಕ ಆರೋಪ ಹೊತ್ತಿರುವ ಮಂಗಳೂರು ನಗರ ಪೊಲೀಸ್ ಕಮೀಷನರ್ ಕುರಿತು ಒಂದು ನಿಲುವಿಗೆ ಬರಲಿ. ಅದು ಬಿಟ್ಟು ಎಲ್ಲದ್ದಕ್ಕೂ ಗಣಿ ಇಲಾಖೆಯ ಮಹಿಳಾ ಅಧಿಕಾರಿಯನ್ನು ಹೊಣೆಯಾಗಿಸಿ ಬಹಿರಂಗವಾಗಿ ತರಾಟೆಗೆ ತೆಗೆದುಕೊಂಡು ಬಿಟ್ಟರೆ ನದಿಗಳೂ ಉಳಿಯುವುದಿಲ್ಲ, ಸೇತುವೆಗಳೂ ಉಳಿಯುವುದಿಲ್ಲ. ವೇದಿಕೆಯಲ್ಲಿ ತಮ್ಮ ಎಡ ಬಲದಲ್ಲಿ ಕುಳಿತಿದ್ದ ಐಪಿಎಸ್, ಐಎಎಸ್ ಮೇಲೆ ಮೊದಲು ಕಣ್ಣಿಡಿ, ಅಥವಾ ಯೋಗ್ಯರನ್ನು ಎಡ ಬಲದಲ್ಲಿ ಇಟ್ಟುಕೊಳ್ಳಿ. ❍



ಮೆಟ್ರೋ ರೈಲು ಪ್ರಯಾಣ ದರ ನಿಗದಿಯೂ, ಮುಕ್ತ ಆರ್ಥಿಕ ನೀತಿಯೂ

ಅಗ್ಗದ ರೈಲು ಸಾಧ್ಯವೆಂದಾದರೆ, ಮೆಟ್ರೋ ರೈಲು ಯಾಕಿಷ್ಟು ದುಬಾರಿ?

ಸಿ.ಸಿದ್ದಯ್ಯ

ಫೆಬ್ರವರಿ 9ರಂದು ಬೆಂಗಳೂರು ಮೆಟ್ರೋ ಪ್ರಯಾಣ ದರದಲ್ಲಿ ಶೇ. 47ರಷ್ಟು ಹೆಚ್ಚಳ ಮಾಡಲಾಗಿದೆ. ಕೆಲವು ದರದಲ್ಲಿ ಶೇ. 71ಕ್ಕಿಂತ ಹೆಚ್ಚಾಗಿದೆ. ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್ (BMRCL) ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಜಂಟಿ ಉದ್ಯಮವಾಗಿದ್ದು, ಬೆಂಗಳೂರು ಮೆಟ್ರೋ ರೈಲು ಯೋಜನೆಯ ಅನುಷ್ಠಾನ ಮತ್ತು ಕಾರ್ಯಾಚರಣೆಯ ಜವಾಬ್ದಾರಿಯನ್ನು ಈ ನಿಗಮಕ್ಕೆ ವಹಿಸಲಾಗಿದೆ. ಅಂದರೆ, ಇಂದಿನ ಪ್ರಯಾಣ ದರ ಏರಿಕೆಗೆ ಕಾರಣ ಕೇಂದ್ರವೂ ಹೌದು, ರಾಜ್ಯವೂ ಹೌದು. ಇದು ನವ ಉದಾರೀಕರಣ ನೀತಿಗಳ ಭಾಗವೂ ಹೌದು. ಪ್ರಯಾಣ ದರ ಹೆಚ್ಚಳದ ವಿಷಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪರಸ್ಪರ ಕೆಸರೆರಚಾಟ ನಡೆಸುತ್ತ, ನವ ಉದಾರವಾದಿ ನೀತಿಗಳ ಪರಿಣಾಮಗಳನ್ನು ಜನರಿಂದ ಮರೆಮಾಡಲು ಪ್ರಯತ್ನಿಸುತ್ತಿವೆ.

ಬೆಂಗಳೂರು ಮೆಟ್ರೋ ರೈಲು ದರ ಹೆಚ್ಚಳಕ್ಕೂ, ಭಾರತ ಅನುಸರಿಸುತ್ತಿರುವ ಮುಕ್ತ ಆರ್ಥಿಕ ನೀತಿಗಳಿಗೂ ಎತ್ತಣದ ಸಂಬಂಧವಯ್ಯ ಎಂದು ಕೆಲವು ಓದುಗರು ಮೂಗು ತಿರುಗಿಸಬಹುದು. ಆದರೆ, ಇವೆರಡರ ನಡುವೆ ಗಾಢವಾದ ಸಂಬಂಧವಿದೆ. ಭಾರತ ಸರ್ಕಾರವೇ ನಡೆಸುವ ರೈಲುಗಳಲ್ಲಿ ಜನಸಾಮಾನ್ಯರು ಕಡಿಮೆ ದರದಲ್ಲಿ ಪ್ರಯಾಣ ಮಾಡಲು ಸಾಧ್ಯವಾಗುವುದಾದರೆ, ಇಂತಹ ಸಾಮಾನ್ಯ ರೈಲುಗಳಲ್ಲಿ ಕಿಲೋ ಮೀಟರ್ ಗೆ ಸರಿಸುಮಾರು 50 ಪೈಸೆ ಪ್ರಯಾಣ ದರ ಇದೆ ಎಂಬುದಾದರೆ, ನಗರಗಳಲ್ಲಿ ಕಾರ್ಯಾಚರಣೆ ಮಾಡುವ ಮೆಟ್ರೋ ರೈಲುಗಳಲ್ಲಿ ಇದರ ನಾಲ್ಕೈದು ಪಟ್ಟು ಹೆಚ್ಚು ದರ ಯಾಕೆ? ಈ ಪ್ರಶ್ನೆ ಹಾಕಿಕೊಂಡು, ಅದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದರೆ, ನಮ್ಮ ಆಳುವವರ ನೀತಿಗಳನ್ನು ಒಂದಷ್ಟು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಸಾಲದ ಮೇಲಿನ ಬಡ್ಡಿಯ ಹೊರೆಯೂ ಪ್ರಯಾಣಿಕರ ಮೇಲೆ

ಮೆಟ್ರೋ ರೈಲು ಯೋಜನೆಯ ಅನುಷ್ಠಾನ ಮತ್ತು ಕಾರ್ಯಾಚರಣೆಯ ಜವಾಬ್ದಾರಿಯನ್ನು ಬಿ.ಎಂ.ಆರ್.ಸಿ.ಎಲ್. ಗೆ ವಹಿಸಲಾಗಿದೆ. ಈ ನಿಗಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರಿಸುಮಾರು ತಲಾ ಶೇ.20ರಷ್ಟು ಅನುದಾನ ಕೊಡುತ್ತವೆ. ಉಳಿದ ಶೇ. 60ರಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆಯಲಾಗುತ್ತದೆ. ಮೆಟ್ರೋ ಕಾರ್ಯಾಚರಣೆಯ ದೈನಂದಿನ ವೆಚ್ಚ, ಸಿಬ್ಬಂದಿಗಳು ಮತ್ತು ಅಧಿಕಾರಿಗಳ ವೇತನಗಳ ವೆಚ್ಚಗಳ ಜೊತೆಗೆ, ಈ ಸಾಲದ ಮೇಲಿನ ಬಡ್ಡಿ, ಸಾಲದ ಕಂತು ಎಲ್ಲವನ್ನು ಪ್ರಯಾಣಿಕರ ಟಿಕೆಟ್ ದರದ ಮೇಲೆ ಹಾಕಲಾಗುತ್ತದೆ. ಈ ಕಾರಣದಿಂದ ಪ್ರಯಾಣ ದರ ದುಬಾರಿಯಾಗುತ್ತದೆ. ಯೋಜನೆಗೆ ಮಾಡಿದ ಸಾಲ ತೀರಿದ ನಂತರ ಮೆಟ್ರೋ ಪ್ರಯಾಣ ದರ ಕಡಿಮೆಯಾಗುತ್ತದೆಯೇ ಎಂದರೆ, ಖಂಡಿತಾ ಹಾಗೆ ಮಾಡುವುದಿಲ್ಲ. ಟೋಲ್ ರಸ್ತೆಗಳಲ್ಲಿ ಇದನ್ನು ಈಗಾಗಲೇ ಕಂಡಿದ್ದೇವೆ. Build, operate, transfer (BOT) ಆಧಾರದ ಮೇಲೆ ನಿರ್ಮಾಣಗೊಂಡು, ನಿಗದಿತ ಅವಧಿ ಮುಗಿದು ವರ್ಷಗಳೇ ಕಳೆದರೂ ಟೋಲ್ ಸಂಗ್ರಹ ಯಾವ ಹೆದ್ದಾರಿಯಲ್ಲೂ ನಿಂತಿಲ್ಲ.

ರೈಲ್ವೆ ಸಾರ್ವಜನಿಕ ಒಡೆತನದಲ್ಲಿದ್ದರೆ

ರೈಲ್ವೇ ವಲಯವನ್ನು ಸರ್ಕಾರವೇ ನಡೆಸಿದರೆ, ಅದಕ್ಕೆ ಸರ್ಕಾರವೇ ಅಗತ್ಯವಾದಷ್ಟು ಅನುದಾನ ಕೊಟ್ಟರೆ, ಅಂದರೆ, ರೈಲ್ವೇ ಸಾರ್ವಜನಿಕ ಒಡೆತನದ ಕ್ಷೇತ್ರವಾಗಿದ್ದರೆ, ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ ಸೇವೆ ಸಲ್ಲಿಸಲು ಸಾಧ್ಯ. ಈ ಹಿಂದೆ ಕೇಂದ್ರ ಸರ್ಕಾರ ರೈಲ್ವೇ ಬಜೆಟ್ ಅನ್ನು ಪ್ರತ್ಯೇಕವಾಗಿ ಮಂಡಿಸುವ ಮೂಲಕ, ರೈಲ್ವೇ ವಲಯವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಯೋಜನೆಗಳನ್ನು ರೂಪಿಸಲಾಗುತ್ತಿತ್ತು. ಸಂಸತ್ ಸದಸ್ಯರು ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಸಿ, ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ನರೇಂದ್ರ ಮೋದಿ ಸರ್ಕಾರ 2016ರಲ್ಲಿ ರೈಲ್ವೇ ಬಜೆಟ್ ಅನ್ನು ಸಾಮಾನ್ಯ ಬಜೆಟ್ ಜೊತೆಗೆ ಸೇರಿಸಿಬಿಟ್ಟರು.

ಮುಕ್ತ ಆರ್ಥಿಕ ನೀತಿಗಳ ಕಾರಣದಿಂದ ಮೂಲಭೂತ ಸೌಲಭ್ಯಗಳಲ್ಲಿ ಒಂದಾದ, ತನ್ನ ಪ್ರಜೆಗಳಿಗೆ ಅಗತ್ಯವಾದ ಮತ್ತು ಸುರಕ್ಷಿತವಾದ ಸಾರಿಗೆ ಸೌಲಭ್ಯ ಒದಗಿಸುವ ತನ್ನ ಜವಾಬ್ದಾರಿಯಿಂದ ಸರ್ಕಾರ ನಿಧಾನವಾಗಿ ಹೊರಹೋಗುತ್ತಿದೆ. ರಸ್ತೆ ಸಾರಿಗೆ, ರೈಲು, ವಿಮಾನ ಹೀಗೆ ಎಲ್ಲವನ್ನು ಖಾಸಗಿ ಬಂಡವಾಳಗಾರರಿಗೆ ಒಪ್ಪಿಸುವಲ್ಲಿ ಸರ್ಕಾರಗಳು ದಾಪುಗಾಲು ಹಾಕುತ್ತಿವೆ. ಬೆಂಗಳೂರು ಮೆಟ್ರೋ ರೈಲು ಯೋಜನೆಯ ಅನುಷ್ಠಾನ ಮತ್ತು ಕಾರ್ಯಾಚರಣೆಯ ಜವಾಬ್ದಾರಿಯನ್ನು ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್‌ಗೆ ವಹಿಸುವ ಮೂಲಕ ಸರ್ಕಾರಗಳು ಸಾರಿಗೆ ಸೌಲಭ್ಯ ಒದಗಿಸಬೇಕಾದ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿವೆ.





ಎಲ್ಲವನ್ನೂ ಖಾಸಗಿ ಬಂಡವಾಳದಾರರಿಗೆ

ಸರ್ಕಾರ ಸಾರಿಗೆ ಸೌಲಭ್ಯಗಳನ್ನು ಒದಗಿಸಬೇಕಾದ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹಲವು ಮಾರ್ಗಗಳನ್ನು ಕಂಡುಕೊಂಡಿದೆ. ಒಂದು ಮಾರ್ಗವೆಂದರೆ, ಈಗಿರುವ ಸಾರ್ವಜನಿಕ ಸಾರಿಗೆ ವಲಯಗಳನ್ನು ಖಾಸಗೀಕರಣ ಮಾಡುವುದು ಮತ್ತು ಈ ವಲಯದಲ್ಲಿ ಬಂಡವಾಳ ಹೂಡಿಕೆಗೆ ಖಾಸಗಿಯವರಿಗೆ ಮುಕ್ತ ಅವಕಾಶ ಕೊಡುವುದು. ಈ ರೀತಿಯಾಗಿ ಸಂಪೂರ್ಣ ಖಾಸಗೀಕರಣ ಒಂದು ಮಾರ್ಗವಾದರೆ, ಮತ್ತೊಂದು ಮಾರ್ಗ 'ಖಾಸಗಿ–ಸಾರ್ವಜನಿಕ–ಸಹಭಾಗಿತ್ವ' (ಪಿಪಿಪಿ), ಬಿಒಟಿ ಎಂಬಿತ್ಯಾದಿ ಹೆಸರಿನಲ್ಲಿ ಖಾಸಗಿಯವರ ತೆಕ್ಕೆಗೆ ಸಾರಿಗೆ ವ್ಯವಸ್ಥೆಯನ್ನು ನೀಡಲಾಗುತ್ತಿದೆ. ರಸ್ತೆ ವಿಸ್ತರಣೆ/ಅಭಿವೃದ್ಧಿ ಹೆಸರಿನಲ್ಲಿ ಟೋಲ್ ರಸ್ತೆ ನಿರ್ಮಾಣ ಮಾಡಿ ಟೋಲ್ ಸಂಗ್ರಹಿಸಲು ಖಾಸಗಿಯವರಿಗೆ ಅವಕಾಶ, ರೈಲು ನಿಲ್ದಾಣಗಳನ್ನು ಆಧುನಿಕರಣ ಮಾಡುವ ಹೆಸರಿನಲ್ಲಿ ರೈಲು ನಿಲ್ದಾಣಗಳನ್ನು ಖಾಸಗಿಯವರಿಗೆ ಕೊಡುವುದು, ರೈಲು ಮಾರ್ಗಗಳನ್ನೇ ಖಾಸಗಿಯವರಿಗೆ ಕೊಡುವುದು, ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ಖಾಸಗಿ ಬಂಡವಾಳಗಾರರಿಗೆ ಒಪ್ಪಿಸುವುದು ಇದಕ್ಕೆ ಕೆಲವು ಉದಾಹರಣೆಗಳಾಗಿವೆ. ಬಿಎಂಟಿಸಿ ಮತ್ತು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹೆಸರಿನಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಎಲೆಕ್ಟ್ರಿಕ್ ಬಸ್ಸುಗಳೂ ಖಾಸಗಿಯವರದೇ ಆಗಿವೆ. FAME (Fast Adoption and Manufacturing of Electric Vehicles in India) ಎಂಬ ಯೋಜನೆಯ ಮೂಲಕ, ಕೇಂದ್ರ ಸರ್ಕಾರ ವಿದ್ಯುತ್ ಬಸ್ಸುಗಳನ್ನು ಕಾರ್ಯಾಚರಣೆ ಮಾಡುವ ಖಾಸಗಿ ಕಂಪನಿಗಳಿಗೆ, ಪ್ರತಿ ಬಸ್ಸಿಗೆ 50 ಲಕ್ಷ ರೂ.ಗಳನ್ನು ಸಬ್ಸಿಡಿ ನೀಡುತ್ತದೆ. ಅಂದರೆ, ಅಗತ್ಯ ಮೂಲಭೂತ ಸೌಕರ್ಯ ಯೋಜನೆಗಳನ್ನು ಸಂಪೂರ್ಣವಾಗಿ ಖಾಸಗಿ ಬಂಡವಾಳಗಾರರಿಗೆ ಒಪ್ಪಿಸುವ ಕ್ರಿಯೆ ಬರದಿಂದ ಸಾಗಿದೆ.

ನಿಗಮಗಳ ರಚನೆ ಮೂಲಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು

ಮತ್ತೊಂದು ಮಾರ್ಗವೆಂದರೆ, ನಿಗಮಗಳನ್ನು ರಚಿಸುವುದು, ಯೋಜನೆಗಳಿಗೆ ಅವಶ್ಯಕವಾದ ಬಂಡವಾಳಕ್ಕೆ ಸರ್ಕಾರಗಳೇ ಒಂದಷ್ಟು ಹಣಕಾಸಿನ ನೆರವು ನೀಡಿ, ಇನ್ನೂ ಅವಶ್ಯಕವಾದ ಬಂಡವಾಳವನ್ನು ಸ್ವದೇಶಿ ಮತ್ತು ವಿದೇಶಿ ಬ್ಯಾಂಕುಗಳ ಮೂಲಕ ಸಾಲದ ರೂಪದಲ್ಲಿ ಹಣ ಪಡೆದು ಮೂಲಭೂತ ಸೌಕರ್ಯಗಳ ನಿರ್ಮಾಣ ಮಾಡುವಂತೆ ನೋಡಿಕೊಳ್ಳುವುದು. ಇದರ ಜವಾಬ್ದಾರಿಯನ್ನು ನಿಗಮಗಳಿಗೆ ವಹಿಸಿ, ಅದು ನಿಗದಿಪಡಿಸುವ ಪ್ರಯಾಣ ದರ ಹೆಚ್ಚಳ ಮತ್ತು ಅದರ ವೈಫಲ್ಯಗಳಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ ಎಂದು ನುಣುಚಿಕೊಳ್ಳುವುದು.

ಮೆಟ್ರೋ ಸೇವೆಗಳು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ (MoHUA) ವ್ಯಾಪ್ತಿಗೆ ಬರುತ್ತವೆ. ಭಾರತದ 18 ನಗರಗಳಲ್ಲಿ ಮೆಟ್ರೋ ರೈಲುಗಳು ಒಟ್ಟು 996 ಕಿಮೀ ಕಾರ್ಯಾಚರಣೆ ನಡೆಸುತ್ತಿವೆ (2025ರ ಫೆಬ್ರವರಿ). ದೇಶದ ಆಯಾ ನಗರಗಳ ಮೆಟ್ರೋ ನಿಗಮಗಳಿಗೆ ಬೇರೆ ಬೇರೆ ಹೆಸರಿಟ್ಟುಕೊಂಡಿವೆ. ಕೊಲ್ಕತ್ತ ಮೆಟ್ರೋವನ್ನು ಭಾರತೀಯ ರೈಲ್ವೇ ಕಾರ್ಯಾಚರಣೆ ನಡೆಸುತ್ತಿದ್ದರೆ, ಬೆಂಗಳೂರು ಮೆಟ್ರೋವನ್ನು ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್, ದೆಹಲಿ ಮೆಟ್ರೋವನ್ನು ದೆಹಲಿ ಮೆಟ್ರೋ ರೈಲ್ ಕಾರ್ಪೊರೇಷನ್, 19.5 ಕಿಮೀ ಉದ್ದದ ಮುಂಬಯಿ ಮೊನೋ ರೈಲನ್ನು ಮಹಾ ಮುಂಬಯಿ ಮೆಟ್ರೋ ಅಪರೇಷನ್ ಮತ್ತು 59.19 ಕಿಮೀ ಉದ್ದದ ಮುಂಬಯಿ ಮೆಟ್ರೋ ರೈಲನ್ನು ಮುಂಬಯಿ ಮೆಟ್ರೋ ಒನ್ / ಮಹಾ ಮುಂಬಯಿ ಮೆಟ್ರೋ... ಹೀಗೆ ಆಯಾ ನಗರಗಳ ಹೆಸರಿನಲ್ಲಿ ನಿಗಮಗಳನ್ನು ಸ್ಥಾಪಿಸಲಾಗಿದೆ.

ಬೆಂಗಳೂರು ಮೆಟ್ರೋ 2011ರಿಂದ ಕಾರ್ಯಾಚರಣೆ ನಡೆಸುತ್ತಿದೆ. ಇದು ಪ್ರಸ್ತುತ (ಫೆಬ್ರವರಿ, 2025) 76.95 ಕಿಮೀ ಕಾರ್ಯಾಚರಣೆ ನಡೆಸುತ್ತಿದೆ.

ಸರ್ಕಾರವೇ ಸಂಪೂರ್ಣ ಹೂಡಿಕೆ ಮಾಡಬೇಕಿತ್ತು

ಬೆಂಗಳೂರು ಸೇರಿದಂತೆ ದೊಡ್ಡ ನಗರಗಳ ಸಾರಿಗೆ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೆಚ್ಚುತ್ತಿರುವ ವಾಹನಗಳ ಸಂಖ್ಯೆಗೆ ಅನುಗುಣವಾಗಿ ರಸ್ತೆಗಳು ವಿಸ್ತಾರಗೊಳ್ಳುತ್ತಿಲ್ಲ. ರಸ್ತೆಗಳು ವಾಹನಗಳಿಂದ ಕಿಕ್ಕಿರಿದು ತುಂಬಿರುತ್ತವೆ. ವಿಪರೀತ ಸಂಚಾರ ದಟ್ಟಣೆಯಿಂದ ನಗರದ ನಿವಾಸಿಗಳು ಹೈರಾಣಾಗಿದ್ದಾರೆ. ತಮ್ಮ ಮನೆಯಿಂದ ಕೆಲಸದ ನಿಗದಿತ ಸ್ಥಳಕೆ ಹೋಗಿ ಬರಲು ದಿನದ ಬಹಳಷ್ಟು ಸಮಯ ರಸ್ತೆ ಸಂಚಾರದಲ್ಲೇ ಕಳೆಯಬೇಕಾದ ಅನಿವಾರ್ಯತೆ ಉಂಟಾಗಿದೆ. ಇದು ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹೊಸದಾಗಿ ಮೇಲ್ಸೇತುವೆಗಳ ನಿರ್ಮಾಣ, ಈಗಿರುವ ರಸ್ತೆಗಳನ್ನು ಒಂದಷ್ಟು ವಿಸ್ತರಿಸುವ ಪ್ರಯತ್ನದಿಂದ ಸಂಚಾರ ದಟ್ಟಣೆ ನಿವಾರಣೆ ಆಗುತ್ತಿಲ್ಲ.

ಇದಕ್ಕೆ ಪರ್ಯಾಯ ಸಾರಿಗೆ ವ್ಯವಸ್ಥೆಯಾಗಿ ಬಂದದ್ದೇ ಮೆಟ್ರೋ ರೈಲು. ಇದು ಬೆಂಗಳೂರಿಗರಿಗೆ ಕೈಗೆಟಕುವ ವೆಚ್ಚದಲ್ಲಿ ಅನುಕೂಲಕರ ಪ್ರಯಾಣ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿದೆ. ಇದರಿಂದ ಲಕ್ಷಾಂತರ ಜನರ ಪ್ರಯಾಣಕ್ಕೆ ಅನುಕೂಲಕರವಾಗಿದೆ. ದಿನವೊಂದಕ್ಕೆ ಸರಾಸರಿ 7.5 ಲಕ್ಷ ಪ್ರಯಾಣಿಕರು ಮೆಟ್ರೋದಲ್ಲಿ ಸಂಚರಿಸುತ್ತಿದ್ದಾರೆ. 2024ರ ವರದಿಯಂತೆ ಆ ವರ್ಷದ ಅವಧಿಯಲ್ಲಿ, ಕಂಪನಿಗೆ ಟೀಕೆಟ್‌ನಿಂದ 573.91 ಕೋಟಿ ರೂಪಾಯಿಗಳಷ್ಟು ಆದಾಯ ಬಂದಿದೆ.

ಈ ರೈಲು ವ್ಯವಸ್ಥೆಯನ್ನು ಸರ್ಕಾರವೇ ತನ್ನ ಸಂಪೂರ್ಣ ಬಂಡವಾಳದೊಂದಿಗೆ ನಿರ್ಮಾಣ ಮಾಡಬೇಕಿತ್ತು. ಸರ್ಕಾರಗಳು ತಮ್ಮ ಬಜೆಟ್‌ನಲ್ಲಿ ಇದಕ್ಕಾಗಿ ಹಣ ಮೀಸಲಿಡಬೇಕಿತ್ತು. ಸಾಮಾನ್ಯ ರೈಲುಗಳಲ್ಲಿ ಕಡಮೆ ದರದಲ್ಲಿ ಪ್ರಯಾಣ ಸೌಲಭ್ಯ ನೀಡಬಹುದಾದರೆ, ನಗರದ ಮೆಟ್ರೋ ರೈಲುಗಳಲ್ಲಿ ಏಕೆ ಸಾಧ್ಯವಿಲ್ಲ? ಸಾರ್ವಜನಿಕರಿಗೆ ಸುಲಭ ದರದಲ್ಲಿ, ಸುರಕ್ಷಿತವಾದ ಮತ್ತು ಸುಖಕರ ಪ್ರಯಾಣಕ್ಕೆ ಪೂರಕವಾಗಿ ಸಾರಿಗೆ ಸೌಲಭ್ಯ ಒದಗಿಸುವುದು ಸರ್ಕಾರದ ಜವಾಬ್ದಾರಿ ಅಲ್ಲವೇ? ಇಂತಹ ಪ್ರಶ್ನೆಗಳನ್ನು ಪ್ರಜೆಗಳಾದ ನಾವು ಆಳುವವರಿಗೆ ಕೇಳಬೇಕಿದೆ.

ಬೆಂಗಳೂರು ಮೆಟ್ರೋ ರೈಲು ಯೋಜನೆಯ ಮೊದಲ ಹಂತದ ವೆಚ್ಚ 11,609 ಕೋಟಿ ರೂ.ಗಳು. ಹಂತ 2ರ ಅಂದಾಜು ವೆಚ್ಚವನ್ನು 30,695 ಕೋಟಿ ರೂ. ಎಂದು ನಿಗದಿಪಡಿಸಲಾಗಿತ್ತು, ನಂತರ ಅದನ್ನು 40,614 ಕೋಟಿ ರೂ.ಗಳಿಗೆ ಪರಿಷ್ಕರಿಸಲಾಯಿತು. 3ನೇ ಹಂತದ 44.65 ಕಿ.ಮೀ. ಉದ್ದದ ಯೋಜನೆಯ ಪೂರ್ಣಗೊಳಿಸುವ ಒಟ್ಟು ವೆಚ್ಚ ರೂ. 15,611 ಕೋಟಿ ಎಂದು ಅಂದಾಜಿಸಲಾಗಿದೆ. ಇಷ್ಟೂ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ ತಮ್ಮ ಬಜೆಟ್ ಮೂಲಕ ಒದಗಿಸಬೇಕಿತ್ತು. ಇದನ್ನು ಮಾಡಿದ್ದರೆ,

ಪುಟ 12 ಕ್ಕೆ

ಬಿಜೆಪಿಯ ದಾಳವಾಗಿ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ



ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದೆ. ಅತ್ತ ಮಣಿಪುರದಲ್ಲಿ ಪ್ರಕ್ಷುಬ್ಧತೆಯ ನಡುವೆ ಅಲ್ಲಿನ ಮುಖ್ಯಮಂತ್ರಿ ಬಿರೇನ್ ಸಿಂಗ್ ರಾಜೀನಾಮೆ ನೀಡಿ ನಿರ್ಗಮಿಸಬೇಕಾಗಿ ಬಂತು. ಇನ್ನೂ ಹೇಳಬೇಕೆಂದರೆ, ಅವರನ್ನು ಅನಿವಾರ್ಯವಾಗಿ ವಜಾ ಗೊಳಿಸಲಾಯಿತು. ಮೇ 2023 ರಲ್ಲಿ, ಮಣಿಪುರದಲ್ಲಿ ಜನಾಂಗೀಯ ಕಲಹ ಪ್ರಾರಂಭವಾಗಿ,ದೇಶಾದ್ಯಂತ ಕೋಲಾಹಲವೆದ್ದರೂ, ಕೇಂದ್ರದ ಮೋದಿ ಸರ್ಕಾರವು ಮಣಿಯಲಿಲ್ಲ ಮತ್ತು ಅಲ್ಲಿ ಹಠಾತ್ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿತು. ನಾವು ಏನಾದರೂ ಮಾಡಿದ್ದೇವೆ ಎಂದು ಭಾವಿಸಿದರೂ ಅದು ತಾತ್ಕಾಲಿಕ ಮಾತ್ರ, ಉತ್ತಮ ಪರಿಸ್ಥಿತಿ ನೆಲೆಸಿದಾಗ ಹಿಂಪಡೆಯಲಾಗುವುದು ಎಂದು ಅವರು ಹೇಳುತ್ತಿದ್ದಾರೆ.

ಮಣಿಪುರದ ಬೆಂಕಿಯ ತಿರುವುಗಳಲ್ಲಿ ಎರಡು ವಿಷಯಗಳು ಸ್ಪಷ್ಟವಾಗುತ್ತಿವೆ. ಮೊದಲನೆಯದಾಗಿ, ಎಷ್ಟೇ ಚುನಾವಣೆಗಳಲ್ಲಿ ಗೆದ್ದರೂ, ದೇಶದ ಹಲವು ರಾಜ್ಯಗಳಲ್ಲಿ ಬಿಜೆಪಿ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ, ದೇಶದಲ್ಲಿ ಅನೇಕ ಬಿಕ್ಕಟ್ಟುಗಳಿಗೆ ಕಾರಣವಾಗುತ್ತಿದೆ. ಎರಡನೆಯದು ತನ್ನ ಅಲ್ಪ ರಾಜಕೀಯ ಉಳಿವಿಗಾಗಿ ದೀರ್ಘಾವಧಿಯ ಹಿತಾಸಕ್ತಿಗಳನ್ನು ಬಲಿಕೊಡಲು, ದ್ವೇಷ ರಾಜಕಾರಣವನ್ನು ಅನುಸರಿಸಲು ಅಂತಿಮವಾಗಿ ಸಾಂವಿಧಾನಿಕ ತತ್ವಗಳನ್ನು ಕೂಡಾ ಬೆಂಕಿಗೆ ಹಾಕಲು ಬಿಜೆಪಿ ಹಿಂಜರಿಯುದಿಲ್ಲ. ತಾಂತ್ರಿಕ ಸಲಹೆಗಳೊಂದಿಗೆ ಸಂವಿಧಾನಕ್ಕೆ ಇಷ್ಟಾನುಸಾರ ವ್ಯಾಖ್ಯಾನಗಳನ್ನು ಹೇಳುತ್ತ ಸ್ವಾರ್ಥದಿಂದ ತುಂಬಿದ ಪ್ರವೃತ್ತಿಗಳಿಗೆ ಇಳಿಯುತ್ತದೆ ಎಂಬುದಕ್ಕೆ ಮಣಿಪುರಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ. ಹಿಂದೆಂದೂ ಕಾಣದ ರೀತಿಯಲ್ಲಿ ಈಶಾನ್ಯ ಭಾರತವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದ್ದೇನೆ ಎಂದು ಹೆಮ್ಮೆಪಡುವ ಬಿಜೆಪಿ ನಾಯಕತ್ವ, ಮಣಿಪುರ ಬಿಕ್ಕಟ್ಟು ಆ ಪ್ರದೇಶದ ಮೇಲೆ ಬೀರುವ ವಿನಾಶಕಾರಿ ಪರಿಣಾಮವನ್ನು ನಿರ್ಲಕ್ಷಿಸಿ ಅವಕಾಶವಾದಿ ರಾಜಕೀಯವನ್ನು ಅನುಸರಿಸಿದೆ. ಒಂದೆಡೆ ಬುಡಕಟ್ಟು ಜನಾಂಗದವರ ವಿರುದ್ಧ, ಮತ್ತೊಂದೆಡೆ, ಧರ್ಮದ ಆಧಾರದ ಮೇಲೆ ತನ್ನ ರಾಜಕೀಯ ಅಜೆಂಡಾಕ್ಕಾಗಿ ಅದನ್ನು ಬಲಿಪೀಠವಾಗಿ ಪರಿವರ್ತಿಸಿದೆ.

ಉದ್ದೇಶಿತ ಮೀಸಲಾತಿ ವಿಷಯದಲ್ಲಿ

ಹೈಕೋರ್ಟ್ ಮಾಡಿದ ನಿಷ್ಪ್ರಯೋಜಕ ವ್ಯಾಖ್ಯಾನಗಳ ಆಧಾರದ ಮೇಲೆ ಬಿರೇನ್ ಸಿಂಗ್ ಅವರ ಸರ್ಕಾರವು ದುರುದ್ದೇಶಪೂರ್ವಕವಾಗಿ ಆಂತರಿಕ ಕಲಹದ ಜ್ವಾಲೆಗೆ ಉತ್ತೇಜನ ನೀಡಿತು. ಬುಡಕಟ್ಟು ಜನಾಂಗದವರಿಗೆ ಉದ್ದೇಶಿತ ಮೀಸಲಾತಿಯು ಮುಖ್ಯವಾಗಿ ಬಯಲು ಪ್ರದೇಶಗಳಲ್ಲಿ ನೆಲೆಸಿದ ಮೈತೇಯಿ ಜನರಿಗೆ ಅದನ್ನು ಏಕೆ ನೀಡಬಾರದು ಎಂಬುದರ ಕುರಿತು ಹೈಕೋರ್ಟ್ ನೀಡಿದ ಅಪ್ರಸ್ತುತ ಹೇಳಿಕೆ ಒಂದು ವಿಷಯವಾದರೆ, ಅವರ ಸರ್ಕಾರವು ಅದಕ್ಕೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ಹೇಳಿದ್ದರಲ್ಲಿಯೂ ಅದೇ ದುರುದ್ದೇಶ ಇದೆ. ಕುಕಿ, ಜೋ ಮತ್ತು ಮೈತೇಯಿ ಬುಡಕಟ್ಟು ಜನಾಂಗಗಳ ನಡುವೆ ಪ್ರಾರಂಭವಾದ ಈ ಸಂಘರ್ಷದಲ್ಲಿ, ಅವರು ಬಹಿರಂಗವಾಗಿ ಎರಡನೇ ಪಕ್ಷ ವಹಿಸಿದರು. ಕುಕೀಗಳಲ್ಲಿ ಕ್ರಿಶ್ಚಿಯನ್ ಧರ್ಮದ ಬಲವಾದ ಪ್ರಭಾವ ಹೆಚ್ಚಿರುವುದು, ಈ ಬುಡಕಟ್ಟು ಸಂಘರ್ಷಗಳ ಹಿಂದೆ ಧಾರ್ಮಿಕ ರಾಜಕೀಯವೂ ಅಡಗಿರುವುದರಿಂದ ಪರಿಸ್ಥಿತಿಯನ್ನು ಮತ್ತಷ್ಟು ಜಟಿಲವಾಗಿಸಿತು. ಇದರಲ್ಲಿ ಕೆಲವು ತೀವ್ರವಾದಿ ಶಕ್ತಿಗಳ ಪ್ರಭಾವದ ನೆಪದಲ್ಲಿ ಈ ಸಮಸ್ಯೆಗೆ ಸಶಸ್ತ್ರ ಪಡೆಗಳಿಂದ ಮಾತ್ರ ಪರಿಹಾರ ಸಿಗುತ್ತದೆ ಎಂದು ಹೇಳಿ ಕೇಂದ್ರ ಗೃಹ ಸಚಿವಾಲಯ ಕ್ರಮ ಕೈಗೊಂಡಿತು.

ಅವ್ಯವಸ್ಥೆ...

ಮೇ 2023 ರಿಂದ ತೀವ್ರಗೊಂಡಿರುವ ಮಣಿಪುರದಲ್ಲಿನ ಜನಾಂಗೀಯ ಘರ್ಷಣೆಯಲ್ಲಿ 250 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ನೂರಾರು ಜನರು ಗಾಯಗೊಂಡಿದ್ದಾರೆ. 60,000 ಜನರು ಮನೆ ಕಳೆದುಕೊಂಡು ನಿರಾಶ್ರಿತರಾದರು. ಕುಕಿಗಳ ಪ್ರಾಬಲ್ಯವಿರುವ ಗುಡ್ಡಗಾಡು ಪ್ರದೇಶಗಳಿಗೆ ಮತ್ತು ಮೈತೇಯಿಗಳ ಪ್ರಾಬಲ್ಯವಿರುವ ಕಣಿವೆ ಪ್ರದೇಶಗಳ ನಡುವೆ ಒಂದು ಬಫರ್ ವಲಯವನ್ನು ಸ್ಥಾಪಿಸಲು 60,000 ಮಂದಿ ಕೇಂದ್ರ ಪೊಲೀಸ್ ಪಡೆಗಳನ್ನು ನಿಯೋಜಿಸಬೇಕಾದ ಪರಿಸ್ಥಿತಿ ಉದ್ಭವಿಸಿತು. ವಾಸ್ತವವೆಂದರೆ ಒಬ್ಬರಿಗೆ ಸಂಬಂಧಿಸಿದ ಪ್ರದೇಶಕ್ಕೆ ಮತ್ತೊಬ್ಬರು ಕಾಲಿಡುವ ಪರಿಸ್ಥಿತಿ ಇಲ್ಲದಂತಾಗಿದೆ.

ಹಿಂಸಾಚಾರದ ಉಲ್ಬಣವು ಇಂಫಾಲ್ ಮತ್ತು ಇತರ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ತೀವ್ರವಾದ ಪ್ರತಿಭಟನೆಗೆ ಕಾರಣವಾಯಿತು. ಪೊಲೀಸರೊಂದಿಗಿನ ಘರ್ಷಣೆಗಳು ಇಂಫಾಲದ ಪೂರ್ವ–ಪಶ್ಚಿಮ ಜಿಲ್ಲೆಗಳಲ್ಲಿ ಕರ್ಫ್ಯೂ ಹೇರಲು ಕಾರಣವಾಯಿತು. ಇಂಟರ್ನೆಟ್ ಮತ್ತು ಮೊಬೈಲ್ ಡೇಟಾವನ್ನು ಸಹ ಸ್ಥಗಿತಗೊಳಿಸಲಾಗಿದೆ. ಎರಡೂ ಪಕ್ಷಗಳೊಂದಿಗೆ ಸಮಾಲೋಚನೆಗಳು, ಮಾತುಕತೆಗಳ ಮೂಲಕ ರಾಜಕೀಯ ಸಮಸ್ಯೆಯನ್ನು ಪರಿಹರಿಸುವಲ್ಲಿ ವಿಫಲತೆ ಒಂದೆಡೆಯಾದರೆ, ಸ್ವಾರ್ಥಕ್ಕಾಗಿ ಬಳಸುವ ಪಿತೂರಿಗಳು ಮತ್ತಷ್ಟು ಜ್ವಾಲೆಗಳು ಹರಡಲು ಕಾರಣವಾದವು.

ಕೇಂದ್ರ ಪೊಲೀಸ್ ಪಡೆಗಳು, ವಿಶೇಷವಾಗಿ ಅಸ್ಸಾಂ ರೈಫಲ್ಸ್ ಪ್ರಮುಖ ಸ್ಥಾನಕ್ಕೆ ಬಂದಿವೆ. ಮೈತೇಯಿ ರಾಜಕೀಯ ಪಕ್ಷಗಳು ಅಸ್ಸಾಂ ರೈಫಲ್ಸ್ ಅನ್ನು, ಇತರ ಕೇಂದ್ರ ಪಡೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದರೆ, ಕುಕಿಗಳೊಂದಿಗಿನ ಒಪ್ಪಂದಗಳನ್ನು ರದ್ದುಗೊಳಿಸಬೇಕು ಎಂಬ ವಾದವು ಇನ್ನೊಂದು ಕಡೆಯಿಂದ ಬಂದಿದೆ. ಕುಕಿ ತೀವ್ರವಾದಿಗಳು ಡ್ರೋನ್ ಗಳು, ರಾಕೆಟ್‌ಗಳ ಪ್ರಯೋಗ ಸೇರಿದಂತೆ ಹೊರಗಿನ ಶಕ್ತಿಗಳ ಒಳನುಗ್ಗುವಿಕೆಯ ಕುರಿತಾದ ಕಳವಳಗಳು ರಾಷ್ಟ್ರೀಯ ಭದ್ರತೆಯ ಬಗ್ಗೆ ಅನುಮಾನಗಳಿಗೆ ಕಾರಣವಾಗಿವೆ. ಮುಖ್ಯಮಂತ್ರಿಯವರ ನಿವಾಸದ ಮೇಲೂ ದಾಳಿಗಳು ಮತ್ತು ಪ್ರತಿಭಟನೆಗಳು ನಡೆದವು.

ಬಿರೇನ್ ಸಿಂಗ್ ಅವರ ಪಕ್ಷಪಾತದ ವರ್ತನೆ

ಕುಕಿ ಉಗ್ರಗಾಮಿ ಗುಂಪುಗಳೊಂದಿಗಿನ ಕಾರ್ಯಾಚರಣೆ ನಿಲುಗಡೆ ಒಪ್ಪಂದವನ್ನು ರದ್ದುಗೊಳಿಸುವ ಆಗ್ರಹವು ಮಾಜಿ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರಿಂದಲೂ ಬಂದ ನಂತರ ಗುಡ್ಡಗಾಡು ಪ್ರದೇಶಗಳಲ್ಲಿ ಮತ್ತೊಮ್ಮೆ ದಂಗೆಗಳು ಹೆಚ್ಚಿವೆ. ಕೆಲವು ಮೈತೇಯಿಗಳು ಭಯೋತ್ಪಾದಕ ಸಂಘಟನೆಗಳ ಕಡೆಗೆ ಸಕಾರಾತ್ಮಕ ಬೆಂಬಲ ನೀಡುವ ಪಾತ್ರವನ್ನು ವಹಿಸಿದ್ದಾರೆ. ಇತ್ತೀಚೆಗೆ ಸೋರಿಕೆಯಾದ ಆಡಿಯೋ ಫೈಲ್ ಅನ್ನು ಗಲಭೆಯ ತನಿಖೆ ನಡೆಸುವ ತನಿಖಾ ಆಯೋಗಕ್ಕೆ ಸಲ್ಲಿಸಲಾಯಿತು. ಮುಖ್ಯಮಂತ್ರಿ ತಮ್ಮ ಅಧಿಕೃತ ನಿವಾಸದಿಂದಲೇ ಭಯೋತ್ಪಾದಕ ಸಂಘಟನೆಗಳೊಂದಿಗೆ ಮಾತನಾಡುತ್ತಿರುವ ಮತ್ತು ಪೊಲೀಸ್ ಶಸ್ತ್ರಾಗಾರದಿಂದ ಸಾವಿರಾರು ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡಿದವರ ಬಗ್ಗೆ ತಮ್ಮ ಒಲವು ತೋರಿಸುತ್ತಿರುವುದನ್ನು ತೋರಿಸುವ ಆಡಿಯೋ ಟೇಪ್ ಗಳು ನ್ಯಾಯಾಂಗ ತನಿಖೆಗೆ ಸಿಕ್ಕಿವೆ.

ಮುಖ್ಯಮಂತ್ರಿಯವರ ಭಾಗಶಃ ಪಾತ್ರದ ಬಗ್ಗೆ ಸಂಪೂರ್ಣವಾಗಿ ತಿಳಿದಿದ್ದರೂ ಸಹ ಮೋದಿ ಸರ್ಕಾರ ಮತ್ತು ಬಿಜೆಪಿ ಕೇಂದ್ರ ನಾಯಕತ್ವವು ಅವರನ್ನು ಅಧಿಕಾರದಲ್ಲಿ ಮುಂದುವರಿಸಲು ರಾಜಕೀಯ ತಂತ್ರಗಳು ಮತ್ತು ಆಂತರಿಕ ಸಂಘರ್ಷಗಳೇ ಕಾರಣವಾಗಿತ್ತು. ಬಿಜೆಪಿ ಮತ್ತು ಆರ್‌ಎಸ್‌ಎಸ್ ಗಳು ಮೈತೇಯಿ ತೀವ್ರವಾದ ಜನಾಂಗೀಯ ದುರಭಿಮಾನವನ್ನು ಮತ್ತಷ್ಟು ಹೆಚ್ಚಿಸಲಿಕ್ಕಾಗಿಯೇ ಈ ತೀವ್ರವಾದಿ ಸಂಘಟನೆಯ ಸ್ಥಾಪಕ ಟೆಂಗೋಲ್ ಎಲ್ ಸನಜೋಬಾ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿದ್ದಾರೆ. ಈ ದೀರ್ಘಕಾಲದ ಬಿಕ್ಕಟ್ಟು ಎಲ್ಲಾ ವರ್ಗಗಳಲ್ಲಿ ತೀವ್ರವಾದಿಗಳನ್ನು ಮತ್ತಷ್ಟು ಬಲಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಮಾತ್ರ ಈ ಇಡೀ ಅವಧಿಯಲ್ಲಿ ಒಮ್ಮೆಯೂ ಮಣಿಪುರಕ್ಕೆ ಭೇಟಿ ನೀಡಲು ನಿರಾಕರಿಸಿರುವುದು ಅವರ ಆಶೀರ್ವಾದಗಳು ಏನಿವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಅವಿಶ್ವಾಸದ ಭಯದಿಂದ . . .

ಸಮಾಜದಲ್ಲಿನ ಆಂತರಿಕ ಕಲಹಗಳಿಗೆ ಸ್ಪಂದಿಸದ ಬಿಜೆಪಿ ನಾಯಕತ್ವವು, ತನ್ನದೇ ಪಕ್ಷದೊಳಗೆ ಆಂತರಿಕ ಕಲಹ ಉಂಟಾದಾಗ ಕಣ್ಣು ತೆರೆದಿರುವಂತೆ ನಟಿಸುತ್ತಿದೆ. ಮಾಜಿ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರನ್ನು ರಾಜ್ಯಪಾಲರನ್ನಾಗಿ ನೇಮಿಸಿದಾಗಲೇ ಅಮಿತ್ ಶಾ ಅವರ ಆಲೋಚನೆ ಏನೆಂಬುದು ತಿಳಿಯಿತು. 60 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ 32 ಸ್ಥಾನಗಳನ್ನು ಹೊಂದಿದೆ. ಏಳು ಸ್ಥಾನಗಳನ್ನು ಹೊಂದಿರುವ ನಾಗಾ ಪೀಪಲ್ಸ್ ಪಾರ್ಟಿ ಮತ್ತು ಆರು ಸ್ಥಾನಗಳನ್ನು ಹೊಂದಿರುವ ಜೆಡಿಯು ಕೂಡ ಬೆಂಬಲ ವ್ಯಕ್ತಪಡಿಸಿದವು. ಆದರೆ ಈ ಪ್ರಕ್ಷುಬ್ಧತೆಯ ನಂತರ ಎನ್.ಪಿ.ಪಿ. ತಾನು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಳ್ಳುತ್ತಿರುವುದಾಗಿ ಘೋಷಿಸಿತು. ಮತ್ತೊಂದು ಹಂತದಲ್ಲಿ, ಜೆಡಿಯು ರಾಜ್ಯ ನಾಯಕತ್ವ ಕೂಡ ಇದೇ ರೀತಿಯ ಹೇಳಿಕೆ ನೀಡಿತು. ಆದರೆ, ನಿತೀಶ್ ಕುಮಾರ್ ಮೇಲೆ ಒತ್ತಡ ತಂದು ಆ ಹೇಳಿಕೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಿದರು. ಆದರೆ ಅಷ್ಟರಲ್ಲಿ, ಬಿಜೆಪಿಯೊಳಗೇ ಭಿನ್ನಮತ ಹುಟ್ಟಿದ ವರದಿಗಳು ಬಂದವು. ಬಿರೇನ್ ಸಿಂಗ್ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಅವಿಶ್ವಾಸ ಗೊತ್ತುವಳಿ ಮಂಡನೆಗೆ ನೋಟಿಸ್ ನೀಡಿದವು. ಈ ಹಂತದಲ್ಲಿ ಅವರು ಶಾಸಕಾಂಗ ಸಭೆ ಕರೆದರು, ಆದರೆ ಶಾಸಕಾಂಗ ಸಭೆಯ ಅರ್ಧದಷ್ಟು ಸದಸ್ಯರು ಸಭೆಗೆ ಹಾಜರಾಗದೇ ಇರುವುದು ತನಗೆ ಬೆಂಬಲವಿಲ್ಲ ಎಂಬುದು ಬಿರೇನ್ ಸಿಂಗ್ ಅವರಿಗೆ ಸ್ಪಷ್ಟವಾಯಿತು. ರಾಜೀನಾಮೆ ನೀಡಲು ಹೋದಾಗಲೂ, ಅವರ ಜೊತೆ ಕೇವಲ ಹದಿನಾಲ್ಕು ಶಾಸಕರು ಮಾತ್ರ ಇದ್ದರು ಎಂದರೆ ಅದೇ ಸಂಕೇತವಾಗಿದೆ.

ರಾಜೀನಾಮೆ ನೀಡಿದ ನಂತರವೂ ಅವರ ತಂಡವನ್ನು ದೆಹಲಿಗೆ ಕರೆಸಿ ಕೇಂದ್ರ ನಾಯಕರು ಮಾತುಕತೆ ನಡೆಸಿದರೂ, ಮತ್ತೊಬ್ಬ ನಾಯಕನನ್ನು ಆಯ್ಕೆ ಮಾಡಿ ಸರ್ಕಾರವನ್ನು ಮುನ್ನಡೆಸಲು ಅವಕಾಶವಿರಲಿಲ್ಲ. ದೀರ್ಘಕಾಲದ ತೊಂದರೆಗೆ ಒಳಗಾಗಿರುವ ರಾಜ್ಯದ ಪರಿಸ್ಥಿತಿಯನ್ನು ಅವಲಂಬಿಸಿ ಶಾಸಕಾಂಗವನ್ನು ವಿಸರ್ಜಿಸಬಹುದು ಎಂದು ಹಲವರು ತಪ್ಪಾಗಿ ನಂಬುತ್ತಾರೆ. ಯಾವುದೇ ರೀತಿಯಲ್ಲಾದರೂ ಎಷ್ಟೇ ಚಿಕ್ಕ ರಾಜ್ಯವಾಗಿದ್ದರೂ ಅದನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದು ಬಿಜೆಪಿಯ ಸ್ವಭಾವಕ್ಕೆ ಇಂತಹ ನಂಬಿಕೆಯು ವಿರುದ್ಧವಾಗಿದೆ. ವಿಧಾನಸಭೆ ಕಲಾಪ ನಡೆದರೆ, ಅವಿಶ್ವಾಸ ನಿರ್ಣಯದಲ್ಲಿ ಸೋಲು ಖಚಿತ. ಅದರೊಂದಿಗೆ, ರಾಜೀನಾಮೆಯನ್ನು ನೆಪವಾಗಿಟ್ಟುಕೊಂಡು ರಾಜ್ಯಪಾಲರು ಅಧಿವೇಶನವನ್ನು ರದ್ದುಗೊಳಿಸುತ್ತಿರುವುದಾಗಿ ಘೋಷಿಸಿದರು. ಒಂದೊಮ್ಮೆ ಅಧಿವೇಶನ ನಡೆದರೆ ರಾಜ್ಯಪಾಲರ ಪಾತ್ರವೇನೂ ಇರುವುದಿಲ್ಲ. ಅವರು ಮತ್ತೊಂದು ಪರ್ಯಾಯ ಸರ್ಕಾರ ರಚಿಸಲು ಪ್ರಯತ್ನಿಸಬೇಕು. ಅಥವಾ ಅವಿಶ್ವಾಸ ಗೊತ್ತುವಳಿಯ ನಂತರ ಅವರು ಮಧ್ಯಪ್ರವೇಶಿಸಬೇಕು. ಸರ್ಕಾರವಿಲ್ಲದೆ ವಿಧಾನಸಭೆಯ ಅಧಿವೇಶನ ಬೇಡವೆಂದಾದರೆ, ಪರ್ಯಾಯ ವ್ಯವಸ್ಥೆ ಮಾಡುವವರೆಗೆ ಮುಂದುವರಿಸುವಂತೆ ಮನವಿ ಮಾಡಬೇಕು. ಅಂತಹ ಯಾವುದೇ ಕ್ರಮ ಕೈಗೊಳ್ಳದೆ ಕರೆಯಲಾಗಿದ್ದ ವಿಧಾನಸಭಾ ಅಧಿವೇಶನಗಳನ್ನು ರದ್ದುಗೊಳಿಸಿದ್ದು ರಾಜಕೀಯ ಮುಜುಗರವನ್ನು ತಪ್ಪಿಸುವ ಸಲುವಾಗಿ ಮಾತ್ರ.

ಎರಡು ಅಧಿವೇಶನಗಳ ನಡುವೆ ಆರು ತಿಂಗಳಿಗಿಂತ ಹೆಚ್ಚಿನ ಅವಧಿ ಇರಬಾರದು ಎಂಬ ಸಾಂವಿಧಾನಿಕ ನಿಬಂಧನೆಯ ಪ್ರಕಾರ ಅಧಿವೇಶನಗಳನ್ನು ಮುಂದೂಡುವುದು ಸಾಧ್ಯವಿಲ್ಲ. ಆದ್ದರಿಂದಲೇ ರಾಜ್ಯಪಾಲರು ರಾಷ್ಟ್ರಪತಿ ಆಳ್ವಿಕೆಗೆ ತಡೆ ಒಡ್ಡಿದ್ದರು. ಅಷ್ಟರಲ್ಲಿ ಹೇಗಾದರೂ ರಾಜಕೀಯ ಎಳೆಗಳೊಂದಿಗೆ ಕಥೆಯನ್ನು

ಪುಟ 12 ಕ್ಕೆ





ಪರ್ಯಾಯ ರಾಜಕೀಯ ಶಕ್ತಿಯಾಗಿ ಕಮ್ಯೂನಿಸ್ಟ್ ಪಕ್ಷ–ಇಎಂಎಸ್ ನಂಬೂದರಿ ಪಾಡ್

ಭಾರತವು ಏಕೀಕೃತ ರಾಷ್ಟ್ರವೇ ಅಥವಾ ಹಿಂದೂ–ಮುಸ್ಲಿಂ ಎಂಬ ಎರಡು ರಾಷ್ಟ್ರಗಳನ್ನು ಒಳಗೊಂಡಿದೆಯೇ ಎಂಬುದು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಿನ ವಿವಾದವಾಗಿತ್ತು. ಕಮ್ಯುನಿಸ್ಟ್ ಪಕ್ಷ ಎರಡನ್ನೂ ತಿರಸ್ಕರಿಸಿತು. ಭಾರತ ಬಹು ಜನಾಂಗೀಯದ ಒಂದು ವ್ಯವಸ್ಥೆಯಾಗಿದೆ. ಆದರೆ, ಅದರ ಬಹು–ಜನಾಂಗೀಯತೆಯು ಧರ್ಮದ ಮೇಲೆ ಆಧಾರಿತವಾಗಿಲ್ಲ. ಭಾರತವು ಭಾಷೆ ಮತ್ತು ಸಾಂಸ್ಕೃತಿಕ ಜೀವನದ ಆಧಾರದ ಮೇಲೆ ಒಂದು ಡಜನ್ ಗಿಂತಲೂ ಹೆಚ್ಚು ರಾಷ್ಟ್ರೀಯತೆಗಳನ್ನು ಹೊಂದಿರುವ ದೇಶವಾಗಿದೆ. ಈ ವಾಸ್ತವವನ್ನು ಗುರುತಿಸಿ, ಸ್ವಾಯತ್ತ ಹಕ್ಕುಗಳನ್ನು ಹೊಂದಿರುವ ರಾಷ್ಟ್ರೀಯತೆಗಳ ಹೊಸ ಪ್ರಜಾಪ್ರಭುತ್ವ (ಫೆಡರಲ್) ರಾಜ್ಯವನ್ನು ನಿರ್ಮಿಸಬೇಕು ಎಂಬುದು ಕಮ್ಯುನಿಸ್ಟ್ ಪಕ್ಷದ ಬೇಡಿಕೆಯಾಗಿತ್ತು. ಈ ಬಗ್ಗೆ ಐತಿಹಾಸಿಕ ಹಿನ್ನೋಟ ಇಲ್ಲಿ.

ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಅಖಿಲ ಭಾರತ ಸಮ್ಮೇಳನ ನಡೆದಾಗ ಪಕ್ಷದ ಸ್ವರೂಪದಲ್ಲಿ ಒಂದು ಬದಲಾವಣೆಯಾಯಿತು. ಕಾಂಗ್ರೆಸ್ಸಿನೊಳಗೆ ಒಂದು ಪ್ರಮುಖ ಶಕ್ತಿಯಾಗಿದ್ದ ಕಮ್ಯುನಿಸ್ಟ್ ಪಕ್ಷವು ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಬೆಳೆಯಲು ಪ್ರಾರಂಭಿಸಿತು. 1942ರಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಪ್ರಾರಂಭವಾದ "ಕ್ವಿಟ್ ಇಂಡಿಯಾ" ಚಳುವಳಿಯನ್ನು ಬಹಿರಂಗವಾಗಿ ವಿರೋಧಿಸಿದ ಕಮ್ಯುನಿಸ್ಟರು, ಆ ಮೊದಲ ಸಮ್ಮೇಳನದಲ್ಲಿ ಎಡಪಂಥೀಯ ಪಕ್ಷವಾಗಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದರು.

ಆ ಸಮಯದಲ್ಲಿ ಇನ್ನೂ ಎರಡು ಎಡಪಂಥೀಯ ಪಕ್ಷಗಳು ರಚನೆಯಾಗಿದ್ದವು. ಒಂದು ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿ, ಇನ್ನೊಂದು ಫಾರ್ವರ್ಡ್ ಬ್ಲಾಕ್. ಫ್ಯಾಸಿಸ್ಟ್ ಶಕ್ತಿಗಳ ಸಹಾಯದಿಂದ ದೇಶವನ್ನು ಸ್ವತಂತ್ರಗೊಳಿಸುವ ಗುರಿಯೊಂದಿಗೆ ಫಾರ್ವರ್ಡ್ ಬ್ಲಾಕ್ ಪಕ್ಷವು ಕೆಲಸ ಮಾಡುತ್ತಿತ್ತು. ಅದರ ನಾಯಕ ಸುಭಾಷ್ ಚಂದ್ರ ಬೋಸ್ ಮೊದಲು ಜರ್ಮನಿಗೆ ಮತ್ತು ನಂತರ ಜಪಾನ್‌ಗೆ ಹೋದರು. ಜಪಾನಿನ ಬೆಂಬಲದೊಂದಿಗೆ ಭಾರತವನ್ನು ಒಗ್ಗೂಡಿಸುವ ಮತ್ತು ಬ್ರಿಟಿಷರನ್ನು ತೊಲಗಿಸುವ ಉದ್ದೇಶದಿಂದ ಒಂದು 'ಇಂಡಿಯನ್ ನ್ಯಾಷನಲ್ ಆರ್ಮಿ'ಯನ್ನು ರಚಿಸಿದರು. ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿಯು ಕಾಂಗ್ರೆಸ್ ಘೋಷಿಸಿದ "ಕ್ವಿಟ್ ಇಂಡಿಯಾ" ಚಳವಳಿಯನ್ನು ಯಶಸ್ವಿಗೊಳಿಸಲು ರಹಸ್ಯ ಕಾರ್ಯಾಚರಣೆಗಳಲ್ಲಿ ತೊಡಗಿತ್ತು.

ಮೊದಲ ಸಮ್ಮೇಳನ

ಚರ್ಚೆಯ ವಿಷಯವಾಗಿದ್ದ ಕಮ್ಯುನಿಸ್ಟ್ ಪಕ್ಷವು ಆ ಎರಡೂ ಎಡಪಂಥೀಯ ಪಕ್ಷಗಳನ್ನು ಬಹಿರಂಗವಾಗಿ ವಿರೋಧಿಸುತ್ತಿತು. ಆದ್ದರಿಂದ, ಮೊದಲ ಅಖಿಲ ಭಾರತ ಸಮ್ಮೇಳನದ ಮುಖ್ಯ ಕಾರ್ಯಸೂಚಿಯು ಈ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವುದು ಮತ್ತು ಭವಿಷ್ಯದ ಕಾರ್ಯಯೋಜನೆಯನ್ನು ರೂಪಿಸುವುದಾಗಿತ್ತು. ಅಂದರೆ, ಬಹುಪಾಲು ಸಾಮ್ರಾಜ್ಯಶಾಹಿ ವಿರೋಧಿಗಳಿಂದ ಪ್ರತ್ಯೇಕಿಸಲ್ಪಟ್ಟ ಸಂಘಟನೆಯ ಮೊದಲ ಅಖಿಲ ಭಾರತ ಸಮ್ಮೇಳನವು ಬಾಂಬೆಯಲ್ಲಿ ನಡೆಯಿತು. ಕಾಂಗ್ರೆಸ್ಸಿನೊಳಗಿನ ಮತ್ತು ಇತರ ಎಡಪಂಥೀಯ ಪಕ್ಷಗಳೊಳಗಿನ ಕಮ್ಯುನಿಸ್ಟ್ ವಿರೋಧಿಗಳು, ಭಾರತದ ಬ್ರಿಟಿಷ್ ಆಡಳಿತಗಾರರು ಸಮ್ಮೇಳನ ನಡೆಸಲು ಅನುಮತಿ ನೀಡಿದ್ದು ಮಾತ್ರವಲ್ಲ; ಪಕ್ಷದ ದೈನಂದಿನ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರು "ಪ್ರವಾಹದ ವಿರುದ್ಧ ಈಜುತ್ತಿದ್ದಾರೆ" ಎಂದು ಆರೋಪಿಸಿದರು, ಕಮ್ಯುನಿಸ್ಟ್ ಪಕ್ಷದ ವಿಷಯದಲ್ಲಿ ಅದು ವಾಸ್ತವವಾಗಿತ್ತು.

ಆದರೆ, ಕಮ್ಯುನಿಸ್ಟ್ ಪಕ್ಷದ ಧೋರಣೆ, ಎಂ.ಎನ್. ರಾಯ್ ನೇತೃತ್ವದ ಸಣ್ಣ ಗುಂಪಿನಂತೆ ಅವರು ಬ್ರಿಟಿಷ್ ಸರ್ಕಾರವನ್ನು ಬೆಂಬಲಿಸಕ್ಕಾಗಿ ಇರಲಿಲ್ಲ. ಇದಕ್ಕೆ ವಿರುದ್ಧವಾಗಿ, ಫ್ಯಾಸಿಸ್ಟ್ ವಿರೋಧಿ ಯುದ್ಧವನ್ನು ಬೆಂಬಲಿಸಲು ಭಾರತದ ಜನರನ್ನು ಸಜ್ಜುಗೊಳಿಸಲು ಬಯಸಿದರೆ, ಬ್ರಿಟಿಷ್ ಸರ್ಕಾರವು ದೇಶಕ್ಕೆ ಸ್ವಾತಂತ್ರ್ಯ ನೀಡಲು ಒಪ್ಪಿದರೆ ಮಾತ್ರ ಅದು ಸಾಧ್ಯ ಎಂದು ಕಮ್ಯುನಿಸ್ಟ್ ಪಕ್ಷ ಸ್ಪಷ್ಟಪಡಿಸಿತು. ಅದಕ್ಕಾಗಿ, ರಾಷ್ಟ್ರೀಯ ಚಳವಳಿಯ ಮಾನ್ಯತೆ ಪಡೆದ ನಾಯಕರೊಂದಿಗೆ ಬ್ರಿಟಿಷ್ ಸರ್ಕಾರ ಮಾತುಕತೆ ಆರಂಭಿಸಬೇಕು ಎಂದು ಕಮ್ಯುನಿಸ್ಟ್ ಪಕ್ಷವೂ ಹೇಳಿತು.

ಜನತಾ ಯುದ್ಧ (People's War)

ಹಾಗೆ ಮಾಡುವುದಕ್ಕೆ ಬದಲಾಗಿ, ಬ್ರಿಟಿಷ್ ಸರ್ಕಾರ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಂಗ್ರೆಸ್ ನಾಯಕರನ್ನು ಬಂಧಿಸಿತು. ಸರ್ಕಾರದ ಈ ಧೋರಣೆಯನ್ನು ಕಮ್ಯುನಿಸ್ಟ್ ಪಕ್ಷ ಸಂಪೂರ್ಣವಾಗಿ ವಿರೋಧಿಸಿತು. ಜನತಾಯುದ್ಧ ನಡೆಸಬೇಕು ಎಂದು ಪಕ್ಷವು ಒತ್ತಾಯಿಸಿತು. ಆ ಯುದ್ದದ ಮೂಲಕ ರಾಷ್ಟ್ರೀಯ ನಾಯಕರನ್ನು ಜೈಲುಗಳಿಂದ ಮುಕ್ತಗೊಳಿಸಬೇಕು, ರಾಷ್ಟ್ರೀಯ ನಾಯಕರ ಸಹಾಯ ಮತ್ತು ಸಹಕಾರದೊಂದಿಗೆ ಕೋಟ್ಯಂತರ ಭಾರತೀಯರ ಬೆಂಬಲವನ್ನು ಖಚಿತಪಡಿಸಿಕೊಳ್ಳಬೇಕು ಎಂದು ಪಕ್ಷವು ಹೇಳಿತು.

"ಕ್ವಿಟ್ ಇಂಡಿಯಾ ಚಳುವಳಿ"ಯನ್ನು ನಡೆಸಿದ ವಿಧಾನವು, ಬ್ರಿಟಿಷ್ ಸರ್ಕಾರಕ್ಕೆ ನಿರ್ಬಂಧಗಳನ್ನು ಹೇರುವ ಎಲ್ಲಾ ಪ್ರಯತ್ನಗಳಿಗೆ ಒಂದು ಅಡಚಣೆಯಾಗಿದೆ ಎಂದು ಕಮ್ಯುನಿಸ್ಟ್ ಪಕ್ಷದ (ಮೊದಲ) ಅಖಿಲ ಭಾರತ ಸಮ್ಮೇಳನವು ಗಮನ ಸೆಳೆದಿದೆ. ಕಮ್ಯುನಿಸ್ಟ್ ಪಕ್ಷದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಧೋರಣೆಗೂ ಕಾಂಗ್ರೆಸ್ ನಾಯಕತ್ವದ ಬೂರ್ಜ್ವಾ ಧೋರಣೆಗೂ ಮೂಲಭೂತ ವ್ಯತ್ಯಾಸವಿತ್ತು. "ಕ್ವಿಟ್ ಇಂಡಿಯಾ ಚಳುವಳಿ" ಮೂಲಕ ರಾಷ್ಟ್ರೀಯ ನಾಯಕರೊಂದಿಗೆ ಬ್ರಿಟಿಷ್ ಸರ್ಕಾರ ಮಾತುಕತೆ ನಡೆಸಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವುದು ಕಾಂಗ್ರೆಸ್ ನಾಯಕತ್ವದ ಮಾರ್ಗವಾಗಿತ್ತು.

ಸೈದ್ಧಾಂತಿಕ ಆಧಾರ

ಕಮ್ಯುನಿಸ್ಟ್ ಪಕ್ಷದ ಧೋರಣೆಯ ಸೈದ್ಧಾಂತಿಕ ಆಧಾರವೆಂದರೆ, ಫ್ಯಾಸಿಸ್ಟ್ ವಿರೋಧಿ ಯುದ್ಧದಿಂದ ಉಂಟಾದ ವಿಶ್ವ ಪರಿಸ್ಥಿತಿಯ ಲಾಭವನ್ನು ಪಡೆದುಕೊಂಡು, ಭಾರತದ ಸ್ವಾತಂತ್ರ್ಯವನ್ನು ಸಾಧಿಸಲು ಕ್ರಾಂತಿಕಾರಿ ರೀತಿಯಲ್ಲಿ ಭಾರತದ ಜನರನ್ನು ಸಜ್ಜುಗೊಳಿಸುವುದು. "ಕ್ವಿಟ್ ಇಂಡಿಯಾ" ಚಳುವಳಿಯನ್ನು ಪ್ರಾರಂಭಿಸಿದ ಕಾಂಗ್ರೆಸ್ ನಾಯಕತ್ವದ ಉದ್ದೇಶವು, ಮಾತುಕತೆಗಳ ಮೂಲಕ ಬ್ರಿಟಿಷ್ ಆಡಳಿತಗಾರರ ಮೇಲೆ ಒತ್ತಡ ಹೇರುವುದಾಗಿತ್ತು.

ಕಮ್ಯುನಿಸ್ಟ್ ಪಕ್ಷದ ಮೌಲ್ಯಮಾಪನ ಸರಿಯಾಗಿದೆ ಎಂದು ನಂತರದ ಘಟನೆಗಳು ಸಾಬೀತುಪಡಿಸಿದವು. ಯುದ್ಧ ಮುಗಿದ ನಂತರ, ಬ್ರಿಟಿಷ್ ಆಡಳಿತಗಾರರು ಮತ್ತು ಕಾಂಗ್ರೆಸ್ ನಾಯಕರ ನಡುವೆ; ಅದೇ ರೀತಿ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಾಯಕರ ನಡುವೆ ಮಾತುಕತೆ ಪ್ರಾರಂಭವಾಯಿತು.

ಈ ಪ್ರಕ್ರಿಯೆಗಳ ಒಟ್ಟಾರೆ ಫಲಿತಾಂಶವೆಂದರೆ ಭಾರತವನ್ನು ಇಸ್ಲಾಮಿಕ್ ಪಾಕಿಸ್ತಾನ ಮತ್ತು ಹಿಂದೂ ಭಾರತೀಯ ಒಕ್ಕೂಟವಾಗಿ ವಿಭಜಿಸುವ ಒಪ್ಪಂದ. ಈ ಬೆಳವಣಿಗೆಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ನಾವು (ಎರಡನೇ ವಿಶ್ವ) ಯುದ್ಧ ಪ್ರಾರಂಭವಾದ ನಂತರ ಕಾಂಗ್ರೆಸ್ ನಾಯಕರು ಅಳವಡಿಸಿಕೊಂಡ ನೀತಿ–ವಿಧಾನಗಳನ್ನು ಹಿಂತಿರುಗಿ ನೋಡಬೇಕು.

ಕಾಂಗ್ರೆಸ್ ಧೋರಣೆಗಳು

1. ಯುದ್ಧದ ಮೊದಲ ಹಂತದಲ್ಲಿ, ವಿಶ್ವ ಸಾಮ್ರಾಜ್ಯಶಾಹಿ ಶಕ್ತಿಗಳು ಎರಡು ವಿರುದ್ಧ ಶಿಬಿರಗಳಲ್ಲಿ ನಿಂತವು. ಆ ಎರಡರಲ್ಲಿ, ಬ್ರಿಟನ್ ಸೇರಿದಂತೆ ಒಂದು ಶಿಬಿರ ಸೋಲನ್ನು ಎದುರಿಸುತ್ತಿದ್ದರೆ, ಇನ್ನೊಂದು ಶಿಬಿರ ಗೆಲುವಿನತ್ತ ಮುಖ ಮಾಡಿತ್ತು. ಶೀಘ್ರದಲ್ಲೇ ಬ್ರಿಟಿಷ್ ಸಾಮ್ರಾಜ್ಯ ಮಾತ್ರವಲ್ಲ, ಬ್ರಿಟನ್ ದೇಶವೇ ಕುಸಿಯುವಂತಹ ಪರಿಸ್ಥಿತಿ ಉದ್ಭವಿಸಿತು. ಆ ಸಮಯದಲ್ಲಿ, ಕಾಂಗ್ರೆಸ್ ನಾಯಕರು ಬ್ರಿಟಿಷ್ ಆಡಳಿತಗಾರರೊಂದಿಗೆ ಮಾತುಕತೆ ನಡೆಸಿ, ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಬ್ರಿಟನ್ ಒಪ್ಪಿದರೆ ಸರ್ಕಾರಕ್ಕೆ ತಮ್ಮ ಬೆಂಬಲ ಮತ್ತು ಸಹಾಯವನ್ನು ನೀಡುವುದಾಗಿ ಹೇಳಿದರು. ಇತರ ಎಡಪಂಥೀಯ ಪಕ್ಷಗಳಂತೆ ಕಮ್ಯುನಿಸ್ಟರು ಕಾಂಗ್ರೆಸ್ ನಾಯಕರ ಈ ಧೋರಣೆಯನ್ನು ವಿರೋಧಿಸಿದರು.

2. 1941 ರ ಹೊತ್ತಿಗೆ, ಯುದ್ಧವು ಹೊಸ ಹಂತವನ್ನು ತಲುಪಿತ್ತು. ನಾಜಿ ಜರ್ಮನಿ ಸೋವಿಯತ್ ಒಕ್ಕೂಟವನ್ನು ಪ್ರವೇಶಿಸಿತು. ಬ್ರಿಟನ್ ಸೇರಿದಂತೆ ಫ್ಯಾಸಿಸ್ಟ್ ವಿರೋಧಿ ಶಕ್ತಿಗಳು ಸೋವಿಯತ್ ಒಕ್ಕೂಟದೊಂದಿಗೆ ಸೇರಿಕೊಂಡವು. ಇದರ ನಂತರ ಆ ಯುದ್ಧವು ಎರಡು ಸಾಮ್ರಾಜ್ಯಶಾಹಿ ಶಿಬಿರಗಳ ನಡುವಿನ ಯುದ್ಧ ಎಂಬ ಪರಿಸ್ಥಿತಿಗೆ ಬದಲಾಯಿತು. ಸೋವಿಯತ್ ಒಕ್ಕೂಟ ಮತ್ತು ಚೀನಾ ಪಾತ್ರ ವಹಿಸಿದ ತಂಡ – ಅದರಲ್ಲಿ ಕೆಲವು ಸಾಮ್ರಾಜ್ಯಶಾಹಿ ರಾಷ್ಟಗಳು ಇದ್ದವು ಎಂಬ ವಾಸ್ತವದ ಹೊರತಾಗಿಯೂ, ಅವರು ಯುದ್ಧದಲ್ಲಿ ಯಶಸ್ವಿಯಾದರೆ ಮಾತ್ರ ವಿಶ್ವ ಸಮಾಜವಾದಿ ಶಕ್ತಿಗಳು ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಭದ್ರತೆಯನ್ನು ಖಚಿತಪಡಿಸಿಕೊಳ್ಳಬಹುದಾದ ಪರಿಸ್ಥಿತಿ ಉದ್ಭವಿಸಿತು. ಅದಕ್ಕಾಗಿಯೇ, ಈ ಎರಡನೇ ಹಂತದಲ್ಲಿ, ಫ್ಯಾಸಿಸ್ಟ್ ವಿರೋಧಿ ಯುದ್ಧವು ಜನತಾ ಯುದ್ಧದ ಸ್ವರೂಪವನ್ನು ಪಡೆದುಕೊಂಡಿದೆ, ಫ್ಯಾಸಿಸ್ಟ್ ವಿರೋಧಿ ಶಿಬಿರದ ವಿಜಯವನ್ನು ಖಚಿತಪಡಿಸಿಕೊಳ್ಳುವ ಮೂಲಕ ಮಾತ್ರ ಭಾರತವು ಸ್ವಾತಂತ್ರ್ಯವನ್ನು ಸಾಧಿಸಬಹುದು ಎಂದು ಕಮ್ಯುನಿಸ್ಟರು ನಂಬಿದ್ದರು. ಯುದ್ಧದ ಮೊದಲ ಮತ್ತು ಎರಡನೇ ಹಂತಗಳಲ್ಲಿ ಕಾಂಗ್ರೆಸ್ ನಾಯಕರು ಬ್ರಿಟಿಷ್ ಆಡಳಿತಗಾರರೊಂದಿಗೆ ಮಾತುಕತೆ ನಡೆಸಲು ಯುದ್ಧವನ್ನು ಒಂದು ಅವಕಾಶವಾಗಿ ಬಳಸಿಕೊಂಡರು. "ಕ್ವಿಟ್ ಇಂಡಿಯಾ" ಚಳುವಳಿಯನ್ನು "ರಾಜಿಯಾಗದ ಹೋರಾಟ"ವಾಗಿ ನಡೆಸಿದರೆ, ಅದು ಬ್ರಿಟಿಷ್ ಸರ್ಕಾರವನ್ನು ಮಾತುಕತೆಗೆ ಒತ್ತಾಯಿಸುತ್ತದೆ ಎಂದು ಅವರು ಲೆಕ್ಕ ಹಾಕಿದರು. ದುರದೃಷ್ಟವಶಾತ್, ಅವರು ಯೋಜಿಸಿದಂತೆ ನಡೆಯಲಿಲ್ಲ. ಬ್ರಿಟಿಷ್ ಆಡಳಿತಗಾರರು ಸಂಪೂರ್ಣ ಬಲಪ್ರಯೋಗ ಮಾಡಿ ಪ್ರತಿಭಟನೆಯನ್ನು ಹತ್ತಿಕ್ಕಲು ನಿರ್ಧರಿಸಿ, ಅದರಲ್ಲಿ ಯಶಸ್ವಿಯೂ ಆದರು.

3. ಯುದ್ಧ ಮುಗಿದ ನಂತರ, ಬ್ರಿಟಿಷ್ ಆಡಳಿತಗಾರರು ಮತ್ತು ಕಾಂಗ್ರೆಸ್ ನಾಯಕರ ನಡುವೆ ಎರಡನೇ ಸುತ್ತಿನ ಮಾತುಕತೆಗಳು ಪ್ರಾರಂಭವಾದವು. "ಕ್ವಿಟ್ ಇಂಡಿಯಾ" ಚಳುವಳಿಯನ್ನು ಹತ್ತಿಕ್ಕಿದ ನಂತರ, ಕಾಂಗ್ರೆಸ್ ನಾಯಕತ್ವವು ಶೀಘ್ರದಲ್ಲೇ ಮಾತುಕತೆಯ ಮಾರ್ಗವನ್ನು ಒಪ್ಪಿಕೊಳ್ಳುವುದನ್ನು ಬಿಟ್ಟು ಬೇರೆ ಮಾರ್ಗವಿಲ್ಲ ಎಂದು ತೀರ್ಮಾನಿಸಿತು. ಅದರ ಭಾಗವಾಗಿ, ಭಾರತವನ್ನು ಎರಡು ಭಾಗಗಳಾಗಿ ವಿಭಜಿಸುವ ಮುಸ್ಲಿಂ ಲೀಗ್ ನ ಬೇಡಿಕೆಯನ್ನು ಅಂಗೀಕರಿಸಿತು. ಬ್ರಿಟಿಷರ ವಿಷಯದಲ್ಲಿ, "ಕ್ವಿಟ್ ಇಂಡಿಯಾ" ಚಳವಳಿಯನ್ನು ಹತ್ತಿಕ್ಕಿದರೂ, ಯುದ್ಧದ ಕೊನೆಯಲ್ಲಿ ಉದ್ಭವಿಸಿದ ಹೊಸ ರಾಜಕೀಯ ಪರಿಸ್ಥಿತಿಯಲ್ಲಿ, ಭಾರತದ ಸ್ವಾತಂತ್ರ್ಯದ ಕುರಿತು ಮಾತುಕತೆ ನಡೆಸಬೇಕೆಂಬ ಕಾಂಗ್ರೆಸ್ ನಾಯಕರ ಬೇಡಿಕೆಯನ್ನು ಒಪ್ಪಿಕೊಳ್ಳುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂದು ಅವರು ತೀರ್ಮಾನಿಸಿದರು. ಆದ್ದರಿಂದ ಮಾತುಕತೆಗಳು ಪ್ರಾರಂಭವಾದವು.

ಕಮ್ಯುನಿಸ್ಟರ ಕ್ರಾಂತಿಕಾರಿ ನಿಲುವು

4. ಈ ಮೂರು ಹಂತಗಳಲ್ಲಿ ಕಮ್ಯುನಿಸ್ಟರು ಕಾಂಗ್ರೆಸ್ ನಾಯಕರಿಗಿಂತ ಭಿನ್ನವಾದ ಕ್ರಾಂತಿಕಾರಿ ನಿಲುವನ್ನು ಅಳವಡಿಸಿಕೊಂಡರು. ಮೊದಲ ಹಂತದಲ್ಲಿ, ಬ್ರಿಟಿಷ್ ಆಡಳಿತಗಾರರ ವಿರುದ್ಧ ಜನ ಚಳುವಳಿಯನ್ನು ಮುನ್ನಡೆಸಲು ಯುದ್ಧದ ಪರಿಸ್ಥಿತಿಯ ಲಾಭವನ್ನು ನಾವು ಪಡೆದುಕೊಳ್ಳಬೇಕು ಎಂದು ಕಮ್ಯುನಿಸ್ಟರು ವಾದಿಸಿದರು. ಎರಡನೇ ಹಂತದಲ್ಲಿಯೂ ಅದೇ ಸ್ಥಾನವನ್ನು ಕಾಯ್ದುಕೊಂಡರು. ಆದರೆ ನಾವು ಜನರ ಕ್ರಾಂತಿಕಾರಿ ಸಾಮರ್ಥ್ಯವನ್ನು ಜಾಗೃತಗೊಳಿಸಲು ಬಯಸಿದರೆ, ಸೋವಿಯತ್ ಒಕ್ಕೂಟ ಮತ್ತು ಚೀನಾ ಭಾಗವಾಗಿದ್ದ ಫ್ಯಾಸಿಸ್ಟ್ ವಿರೋಧಿ ಬಣದ ವಿಜಯಕ್ಕಾಗಿ ಜನರನ್ನು ಸಜ್ಜುಗೊಳಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ಮೂರನೇ ಹಂತದಲ್ಲಿ, ಬ್ರಿಟಿಷ್ ಆಡಳಿತಗಾರರೊಂದಿಗೆ ಚೌಕಾಶಿ ಮಾಡುವ ಬದಲು, ಜನರನ್ನು ಸಜ್ಜುಗೊಳಿಸುವ ಕ್ರಾಂತಿಕಾರಿ ಹೋರಾಟದ ಯೋಜನೆಯು ಕಮ್ಯೂನಿಸ್ಟ್ ಪಕ್ಷದಿಂದ ರಚಿಸಲ್ಪಟ್ಟಿತು.

ಈ ದೂರದೃಷ್ಟಿಯ ಚಳುವಳಿಗಳ

ಪುಟ 14 ಕ್ಕೆ

ಇಪ್ಪತ್ತು ವರ್ಷದಲ್ಲಿ ಮೊದಲ ಬಾರಿಗೆ ಹೋರಾಟದ ಮೂಲಕ ಉದ್ಯೋಗಖಾತ್ರಿ ಕೆಲಸ ಪಡೆದ ಬೆನಕನಳ್ಳಿ ರೈತ ಕಾರ್ಮಿಕರು



ಮಹತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಕಾಯ್ದೆ 2005ರಲ್ಲಿಯೇ ಜಾರಿಯಾದರು ಕೂಡ ಇಂದಿಗೂ ಅನೇಕ ಜಿಲ್ಲೆಗಳ ಹಳ್ಳಿಗಳಿಗೆ ಈ ಯೋಜನೆ ತಲುದಿರುವು ಅತ್ಯಂತ ಶೋಚಣಿಯ ಸಂಗತಿಯಾಗಿದೆ. ಶಹಪುರು ತಾಲೂಕಿನ ಬೆನಕಹಳ್ಳಿ ಜೆತಾಲೂಕಿನಲ್ಲಿ ಕಳೆದ 20 ವರ್ಷಗಳಿಂದ ಉದ್ಯೋಗ ಖಾತ್ರಿ ಯೋಚನೆ ಏನೆಂಬುದೆ ಇಲ್ಲಿನ ಜನರಿಗೆ ಗೊತ್ತಿಲ್ಲ, ಗ್ರಾಮ ಪಂಚಾಯತಿ ಅಧಿಕಾರಿಗಳು ಕೂಡ ಈ ಯೋಚನೆಯು ಬೆನಕನಳ್ಳಿ ಜನರಿಗೆ ತಲುಪಿಸಿಲ್ಲ.

ಕನ್ನೆಕೊಳ್ಳೂರ ಗ್ರಾಮ ಪಂಚಾಯಿತಿಯ ಬೇಜವಾಬ್ದಾರಿತನದಿಂದಾಗಿ ಇಡೀ ಬೆನಕಹಳ್ಳಿಯ ಜನರು ಉದ್ಯೋಗ ಖಾತ್ರಿ ಕೆಲಸದಿಂದ ವಂಚಿತರಾಗಿದ್ದಾರೆ. ಇವರಿಗೆ ಈ ವರ್ಷ ಮೊಟ್ಟ ಮೊದಲ ಬಾರಿಗೆ ಕೆಲಸ ಕೊಡಿಸಿದ್ದು ಒಂದು ರೋಚಕ ಕತೆಯಾಗಿದೆ.

ಕಳೆದ ತಿಂಗಳು ಪ್ರಾಂತ ರೈತ ಸಂಘದ ತಾಲ್ಲೂಕು ಕಾರ್ಯದರ್ಶಿ ಕಾ.ಭೀಮರಾಯ ದಾರಿಯಲ್ಲಿ ಬರುವಾಗ ಆಟೋಗಳಲ್ಲಿ ಗಾರೆ ಕೆಲಸಕ್ಕೆ ಹೋಗುತ್ತಿರುವ ಗ್ರಾಮೀಣ ಹೆಣ್ಣುಮಕ್ಕಳು ಸಿಕ್ಕರು. ಕಾ.ಭೀಮರಾಯ ಅವರೊಂದಿಗೆ ಮಾತಿಗೆ ಇಳಿದರು. ಅವರ ಊರಾದ ಬೆನಕನಳ್ಳಿ ಜೆದಲ್ಲಿ ಉದ್ಯೋಗ ಖಾತ್ರಿ ಕೆಲಸ ಇಲ್ಲದ್ದು ಹೇಳಿದರು. ಭೀಮರಾಯ ಅವರಿಗೆ ಉದ್ಯೋಗ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಅವರ ಊರಲ್ಲಿ ಸಭೆ ನಡೆಸಿದರು. ಸಮಗ್ರ ಮಾಹಿತಿಕೊಟ್ಟರು.ಮತ್ತು ಜಾಬ್‌ಕಾರ್ಡ್ ಪಡೆಯಲು ಬೇಕಾದ ಎಲ್ಲ ವ್ಯವಸ್ಥೆ ಮಾಡಿದರು. ಗ್ರಾಮ ಪಂಚಾಯತಿಗೆ ಅರ್ಜಿ ಕೊಡಿಸಿದರು. ಪ್ರಾಂತ ರೈತ ಸಂಘವು ಕರೆಕೊಟ್ಟ ಜಿಲ್ಲಾ ಮಟ್ಟದ ಹೋರಾಟದಲ್ಲಿ ಬೆನಕನಳ್ಳಿಯ ರೈತರು ಕೃಷಿ ಕೂಲಿ ಕಾರ್ಮಿಕರು ಬಂದು ಬಾಗವಹಿಸಿದರು. ನಂತರ ಗ್ರಾಮದಲ್ಲಿ ಎಲ್ಲರ ಸಭೆ ನಡೆಸಲಾಯಿತು. ಇವರಿಗೆ ಕೆಲಸ ದೊರಕದಂತೆ ಮಾಡಿದ ಪಟ್ಟಭದ್ರರು ತೊಂದರೆ ಕೊಡಬಹುದೆಂಬ ಹೆದರಿಕೆ ಕೃಷಿಕರಿಗೆ ಕೂಲಿ ಕಾರ್ಮಿಕರಿಗೆ ಇತ್ತು. ಆದರೆ ಸಂಘಟನೆಯಿಂದ ನಿರಂತರ ಸಭೆಗಳನ್ನು ನಡೆಸಲಾಯಿತು. ಗ್ರಾಮ ಪಂಚಾಯತ್ ಕಚೇರಿಯವರೆಗೆ ಪಾದಯಾತ್ರೆ ಮಾಡಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಚುನಾಯಿತ ಸದಸ್ಯರು ಮತ್ತು ಗ್ರಾಮ ಪಂಚಾಯತ್ ಅಧಿಕಾರಿಗಳ ವಿರುದ್ಧ ಘೋಷಣೆ ಮೊಳಗಿಸಿದರು. ಅಲ್ಲಿವರೆಗೂ ತಮ್ಮನ್ನು ಕೆಲಸದಿಂದ ವಂಚಿತರನ್ನಾಗಿಸಿದವರು ಒಡ್ಡಿದ ಭಯದಲ್ಲಿ ಜನತೆಯು ಮುದುಡಿ ಕುಳಿತಿದ್ದರು. ಆದರೆ ಸಂಘಟನೆ ಕಟ್ಟಿದ ಮೇಲೆ ಅವರಿಗೆ ಧೈರ್ಯ ಬಂದು ತಮಗೆ ಮೋಸ ಮಾಡಿದವರನ್ನು ಗುರುತಿಸಿದರು ಮತ್ತು ನಿರ್ಭಯದಿಂದ ಹೋರಾಟಕ್ಕಿಳಿದರು.ಇದರಿಂದ ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ಫಾರಂ–6 ತುಂಬಿಸಿಕೊಂಡು ಅವರಿಗೆ ಕೆಲಸ ಕೊಡವುದು ಅನಿವಾರ್ಯವಾಯಿತು. ಕಾ.ಭೀಮರಾಯ, ಕಾ.ಚನ್ನಪ್ಪ, ಕಾ.ದಾವುಲಸಾಬ ಮುಂತಾದ ಸಂಗಾತಿಗಳು ಬೆನಕನಳ್ಳಿ ಗ್ರಾಮದಲ್ಲಿ ಸಭೆಗಳನ್ನು ನಡೆಸಿ ಗ್ರಾಮ ಪಂಚಾಯತ್ ಮುಂದೆ ಮತ್ತು ಜಿಲ್ಲಾ ಪಂಚಾಯತ್ ಮುಂದೆ ಹೋರಾಟ ನಡೆಸಿದ್ದಕ್ಕೆ ಜನರು ಸಂಘಟನೆ ಮತ್ತು ಹೋರಾಟದ ಮಹತ್ವವನ್ನು ಅರಿತರು. ಹಾಗೂ ಕೆಲಸ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಮೊದಲ ಹಂತದಲ್ಲಿ 57 ಜನರು ಕೆಲಸದಲ್ಲಿ ತೊಡಗಿದ್ದಾರೆ. ಇನ್ನುಳಿದ ಜನರಿಗೆ ಎನ್‌ಎಮ್‌ಆರ್ ಜನರೇಟ್ ಮಾಡಿ ಅವರಿಗೂ ಕೆಲಸ ಕೊಡುತ್ತಿದ್ದಾರೆ.



ಮೆಟ್ರೋ ರೈಲು ಪ್ರಯಾಣ ದರ ನಿಗದಿಯೂ, ಮುಕ್ತ ಆರ್ಥಿಕ ನೀತಿಯೂ..... ಪುಟ 9 ರಿಂದ

ಬಡವರೂ ಕೈಗೆಟಕುವ ದರದಲ್ಲಿ ಮೆಟ್ರೋ ಪ್ರಯಾಣ ಮಾಡಬಹುದಿತ್ತು.

ಸರ್ಕಾರದ ಬಳಿ ಇಷ್ಟೆಲ್ಲಾ ಹಣ ಎಲ್ಲಿದೆ?

ಸರ್ಕಾರವೇ ಸಂಪೂರ್ಣ ಹೂಡಿಕೆಯೊಂದಿಗೆ ಜನರಿಗೆ ಅವಶ್ಯಕವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದು ಹೇಳಿದರೆ, ಸರ್ಕಾರದ ಬಳಿ ಇಷ್ಟೆಲ್ಲಾ ಹಣ ಎಲ್ಲಿದೆ? ಈ ಪ್ರಶ್ನೆ ತೂರಿಬರುತ್ತದೆ. ಭಾರತದ ಪ್ರತಿಯೊಬ್ಬ ಪ್ರಜೆ ಕೂಡಾ ನೇರ ತೆರಿಗೆ, ಪರೋಕ್ಷ ತೆರಿಗೆ ರೂಪದಲ್ಲಿ ತೆರಿಗೆ ಕಟ್ಟುತ್ತಾರೆ. ಒಬ್ಬ ಬಿಕ್ಷುಕನೂ ಪರೋಕ್ಷ ತೆರಿಗೆ ಕಟ್ಟುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ಆತ ತಾನು ಬಿಕ್ಷೆ ಬೇಡಿ ಪಡೆದ ಹಣದಿಂದ ತನ್ನ ಅಗತ್ಯಕ್ಕೆ ಬೇಕಾದ ಸರಕುಗಳನ್ನು ಕೊಳ್ಳುತ್ತಾನೆ. ಆತ ಕೊಳ್ಳುವ ಪ್ರತಿ ಸರಕಿನ ಮೇಲೂ ತೆರಿಗೆ ಇದ್ದೇ ಇದೆ.

ಇದಲ್ಲದೆ, ಸಾರ್ವಜನಿಕ ಉದ್ಯಮಗಳಿಂದ ಬರುವ ಆದಾಯ, ಪ್ರಕೃತಿ ಸಂಪತ್ತುಗಳಿಂದ, ಅರಣ್ಯ ಸಂಪತ್ತುಗಳಿಂದ, ಮತ್ತಿತರ ಮೂಲಗಳಿಂದ ಸರ್ಕಾರಕ್ಕೆ ಬರುವ ಆದಾಯಗಳೆಲ್ಲವೂ ಸಾರ್ವಜನಿಕರ ಸಂಪತ್ತು. ಈ ಹಣದಿಂದ ಸಾರ್ವಜನಿಕರಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದದ್ದು ಪ್ರಭುತ್ವದ ಜವಾಬ್ದಾರಿ. ಕುಡಿಯುವ ಮತ್ತು ಇತರೆ ಬಳಕೆಗೆ ಬೇಕಾದ ನೀರು, ರಸ್ತೆ, ರೈಲು, ಸಾರಿಗೆ ವ್ಯವಸ್ಥೆ, ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆ, ಕೃಷಿಗೆ ನೀರಾವರಿ ಸೌಲಭ್ಯ ಒದಗಿಸಲು ಕೆರೆ, ಕಟ್ಟೆ, ಹಣೆಕಟ್ಟುಗಳ ನಿರ್ಮಾಣ, ಇವೆಲ್ಲವೂ ಪ್ರಭುತ್ವದ ಕರ್ತವ್ಯ. ಆದರೆ, ಪ್ರಭುತ್ವ ತನ್ನ ಈ ಎಲ್ಲ ಕರ್ತವ್ಯಗಳಿಂದ ದೂರ ಸರಿಯುತ್ತಿದೆ. 1991ರ ಉದಾರೀಕರಣ ನೀತಿಗಳ ನಂತರ ಇದು ಮತ್ತಷ್ಟು ವೇಗ ಪಡೆದಿದೆ. ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಕಳೆದ 11 ವರ್ಷಗಳಿಂದ ಇದರ ವೇಗ ಮತ್ತಷ್ಟು ಹೆಚ್ಚಾಗಿದೆ.

ಬಂಡವಾಳಗಾರರಿಗೆ ಹತ್ತಾರು ಲಕ್ಷ ಕೋಟಿ ರೂ.ಗಳ ಕೊಡುಗೆ

ಕೇಂದ್ರ ಸರ್ಕಾರ ಬಂಡವಾಳಗಾರರಿಗೆ 2015ರಿಂದ 10 ವರ್ಷಗಳಲ್ಲಿ ಒಟ್ಟು 12.67 ಲಕ್ಷ ಕೋಟಿ ರೂ.ಗಳ ಬ್ಯಾಂಕ್ ಸಾಲ ಮನ್ನಾ/ರೈಟ್ ಆಫ್ ಮಾಡಿದೆ. 2024ರಲ್ಲಿ ಸಾರ್ವಜನಿಕ ಬ್ಯಾಂಕುಗಳ ಒಟ್ಟು ಮನ್ನಾ ಮಾಡಿದ ಸಾಲಗಳು 1.18 ಲಕ್ಷ ಕೋಟಿ ರೂ.ಗಳು. ಸೆಪ್ಟೆಂಬರ್ 2019ರಲ್ಲಿ, ಮೋದಿ ಸರ್ಕಾರವು ಆಗಿನ ಅಸ್ತಿತ್ವದಲ್ಲಿರುವ ಕಂಪನಿಗಳಿಗೆ ಮೂಲ ಕಾರ್ಪೊರೇಟ್ ತೆರಿಗೆಯನ್ನು ಶೇ. 30ರಿಂದ 22ಕ್ಕೆ ಮತ್ತು ಅಕ್ಟೋಬರ್ 1, 2019ರ ನಂತರ ಸಂಘಟಿತವಾದ ಹೊಸ ಉತ್ಪಾದನಾ ಸಂಸ್ಥೆಗಳಿಗೆ ಶೇ. 25ರಿಂದ 15ಕ್ಕೆ ಕಡಿತಗೊಳಿಸಿತು. ಈ ತೆರಿಗೆ ಕಡಿತದಿಂದಾಗಿ ಸರ್ಕಾರಕ್ಕೆ ಬರುವ ಆದಾಯದಲ್ಲಿ ಪ್ರತಿ ವರ್ಷವೂ ಒಂದು ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಕಡಿತವಾಗುತ್ತಿದೆ. ನವೋದ್ಯಮ ಹೆಸರಿನಲ್ಲಿ, ಉದ್ಯಮಗಳಿಗೆ ಪ್ರೋತ್ಸಾಹದ ಹೆಸರಿನಲ್ಲಿ ಪ್ರತಿ ವರ್ಷವೂ ಲಕ್ಷಾಂತರ ಕೋಟಿ ಅನುದಾನ ನೀಡಲಾಗುತ್ತಿದೆ. ಮತ್ತೊಂದಡೆ ಸರ್ಕಾರ ತನ್ನ ಆದಾಯದ ಕೊರತೆ ತುಂಬಿಸಿಕೊಳ್ಳಲು ಜನಸಾಮಾನ್ಯರ ಮೇಲೆ ಪರೋಕ್ಷ ತೆರಿಗೆ ಹೆಚ್ಚಳ ಮಾಡುತ್ತಿದೆ.

ಈ ರೀತಿ ಉದ್ಯಮಿಗಳಿಗೆ ಲಕ್ಷಾಂತರ ಕೋಟಿ ಕೊಡುಗೆ ನೀಡುವ ಹಣವನ್ನೇ ಮೂಲಭೂತ ಸೌಲಭ್ಯಗಳ ನಿರ್ಮಾಣಕ್ಕೆ, ದೇಶದ ಅಭಿವೃದ್ಧಿಗೆ ಬಳಸಿಕೊಳ್ಳಬಹುದು. ಆದರೆ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಎಂಬ ಎಲ್.ಪಿ.ಜಿ. ನೀತಿಗಳನ್ನು ಒಪ್ಪಿಕೊಂಡಿರುವ ಆಳುವ ಪಕ್ಷಗಳಿಗೆ ಇದೆಲ್ಲವೂ ಬೇಡವಾಗಿದೆ. ಕೇಂದ್ರ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಅನುಸರಿಸುತ್ತಿರುವ ಮುಕ್ತ ಆರ್ಥಿಕ ನೀತಿಗಳೇ ಇದಕ್ಕೆ ಕಾರಣ. ದೇಶದ ಪ್ರಜೆಗಳಿಗೆ ಉಚಿತವಾಗಿ ಅಥವಾ ಜನಸಾಮಾನ್ಯರ ಕೈಗೆಟುವಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಪ್ರಭುತ್ವದ ಕರ್ತವ್ಯ. ಇಂತಹ ಜವಾಬ್ಧಾರಿಯಿಂದ ಪ್ರಭುತ್ವ ನುಣಿಚಿಕೊಳ್ಳಲು ಹೊರಟಿದೆ. ನವ ಉದಾರವಾದಿ ನೀತಿಗಳ ವಿರುದ್ದ ದ್ವನಿ ಎತ್ತದೆ ಇಂತಹ ಸಮಸ್ಯೆಗಳಿಗೆ ಪರಿಹಾರ ಸಿಗಲಾರದು.

ಬಿಜೆಪಿಯ ದಾಳವಾಗಿ ಮಣಿಪುರ...... ಪುಟ 10 ರಿಂದ

ನಡೆಸಬೇಕೆಂದು ಬಯಸಿದರೆ, ಸದಸ್ಯರ ಮೇಲೆ ಒತ್ತಡ ಹೇರಬೇಕು. ಅದಕ್ಕಾಗಿ ಬಲೆಗಳನ್ನು ಹೊಂದಿಸಬೇಕು. ರಾಜ್ಯದಲ್ಲಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಹೆಣಗಾಡುತ್ತಿದ್ದೇನೆ ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದ್ದರೂ, ಇದೇ ನಿಜವಾದ ತಂತ್ರ. ಯಾರನ್ನೇ ನಾಯಕರನ್ನಾಗಿ ಮಾಡಿದರೂ, ವಿಧಾನಸಭೆಯಲ್ಲಾಗಲಿ ಅಥವಾ ಆಡಳಿತದಲ್ಲಾಗಲಿ ಗೆಲ್ಲಲು ಸಾಧ್ಯವಿಲ್ಲ.

ಈಗ ಮಣಿಪುರದಲ್ಲಿ ಏನಾಗಬೇಕಿದೆ?

ಬಿಜೆಪಿಯ ನಡೆ ಏನಿದ್ದರೂ ಮಣಿಪುರಕ್ಕೆ ಬೇಕಾಗಿರುವುದು ಶಾಂತಿ ಮತ್ತು ಸೌಹಾರ್ದತೆ. ದೇಶವು ಜನಾಂಗೀಯ ಕಲಹವನ್ನು ಹತ್ತಿಕ್ಕಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಪುನರುಜ್ಜೀವನಗೊಳಿಸಬೇಕಾಗಿದೆ. ಸಶಸ್ತ್ರ ಪಡೆಗಳ ನೆರಳಿನಲ್ಲಿ ಕೇಂದ್ರವು ತನ್ನ ಪರೋಕ್ಷ ಆಡಳಿತವನ್ನು ದೀರ್ಘಕಾಲ ಮುಂದುವರಿಸುವುದು ಆರೋಗ್ಯಕರವಲ್ಲ. ಏಕೆಂದರೆ ಇಂದಿಗೂ ಅಲ್ಲಿನ ಪರಿಸ್ಥಿತಿ ಅಸ್ತವ್ಯಸ್ತವಾಗಿಯೇ ಇದೆ. ಅನೇಕ ಜನರು ಭಯದಲ್ಲಿ ಬದುಕುತ್ತಿದ್ದಾರೆ. ಸಮಾಜದ ವಿವಿಧ ವರ್ಗಗಳಲ್ಲಿ ಸಶಸ್ತ್ರ ಗುಂಪುಗಳ ಪ್ರಾಬಲ್ಯ ಹೆಚ್ಚಾಗಿದೆ. ಕೇಂದ್ರದ ಬೆಂಬಲದೊಂದಿಗೆ ಮಾಜಿ ಮುಖ್ಯಮಂತ್ರಿ ಅನುಸರಿಸಿದ ಪಕ್ಷಪಾತದ ನಿಲುವಿನ ಭಾಗವಾಗಿ, ಎರಡೂ ಕಡೆಯವರ ನಡುವೆ ಸಮನ್ವಯಕ್ಕಾಗಿ ಸ್ವಯಂಸೇವಕರು ಎನ್ನುವವರು ಹುಟ್ಟಿಕೊಂಡು, ಆಯುಧಗಳೊಂದಿಗೆ ಸುತ್ತಾಡುತ್ತಾ ಹೊಸ ಬೆದರಿಕೆಯಾಗಿ ಪರಿಣಮಿಸಿದ್ದಾರೆ. ಈ ದೇಶದಲ್ಲಿ ಸಶಸ್ತ್ರ ಕೃತ್ಯಗಳನ್ನು ಮಾಡುವವರೇ ಅಲ್ಲದೆ, ಮ್ಯಾನ್ಮಾರ್ ನಲ್ಲಿ ಸಶಸ್ತ್ರ ಹೋರಾಟದಲ್ಲಿ ತೊಡಗಿರುವವರು ಸಹ ಈ ಪಡೆಗಳನ್ನು ಸೇರಿಕೊಂಡಿದ್ದಾರೆ ಎಂದು ಗುಪ್ತಚರ ಮೂಲಗಳು ತಿಳಿಸಿವೆ. ಕುಕೀಗಳನ್ನು ಮಾತ್ರ ನಿಶ್ಯಸ್ತ್ರಗೊಳಿಸಲು ಮಾಡಿದ ಬಿರೆನ್ ಅವರ ಹಿಂದಿನ ಪ್ರಯತ್ನಗಳು ವಿಫಲವಾಗಿವೆ. ಈಗ ನೇರವಾಗಿ ಕೇಂದ್ರವೇ ವ್ಯವಹಾರಗಳನ್ನು ಕೈಗೆ ತೆಗೆದುಕೊಂಡಿರುವುದರಿಂದ ಶಾಂತಿ ಸ್ಥಾಪಿಸುವ ಪ್ರಕ್ರಿಯೆಯು ವೇಗಗೊಳ್ಳಬೇಕಿದೆ. ಮೈತೇಯಿ, ಕುಕೀ ಮತ್ತು ಜೋ ಸಮುದಾಯಗಳು ಸೇರಿದಂತೆ ಎಲ್ಲರೂ ಇದರಲ್ಲಿ ಭಾಗಿಯಾಗುವಂತೆ ಮಾಡಬೇಕು.

ಅದೇ ರೀತಿ, ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಶಾಂತಿ ಮತ್ತು ಸೌಹಾರ್ದತೆಯನ್ನು ಪುನಃಸ್ಥಾಪಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ನಾಗರಿಕರ ಹಕ್ಕುಗಳನ್ನು ಕಸಿದುಕೊಳ್ಳುವ ನಿರ್ಧಾರಗಳು ಮತ್ತು ನಿರ್ದೇಶನಗಳನ್ನು ಹಿಂಪಡೆಯಬೇಕು. ಸಾಮಾನ್ಯವಾಗಿ ಇಂತಹ ಸಮಯದಲ್ಲಿ, ನೇರವಾಗಿ ಚುನಾವಣೆಗೆ ಹೋಗಿ ಜನರ ತೀರ್ಪು ಕೇಳುವುದು ಸರಿಯಾದ ಪರಿಹಾರವಾಗಿರುತ್ತಿತ್ತು. ಆ ವಾತಾವರಣ ಇಲ್ಲದಿರುವುದರಿಂದ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿದ್ದು, ನಿರ್ದಿಷ್ಟ ಅವಧಿಯೊಳಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕು.

–ಸಿಟಿ (ಕೃಪೆ: ಪ್ರಜಾಶಕ್ತಿ)

ವಲಸಿಗರನ್ನು ಪಂಜರದ ಪಶುಗಳಂತೆ ಕಾಣುವ ಅಮಾನವೀಯತೆ: ಬಂಡವಾಳಶಾಹಿಯ ಸೃಷ್ಟಿ



ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಜನಾಂಗಭೇದ ಎಂಬುದು ಒಂದು ಪೂರ್ವಾಗ್ರಹವಾಗಿ ಬಹು ಕಾಲದಿಂದಲೂ ಸುಪ್ತವಾಗಿ ಉಳಿದಿದೆ. ಬಿಕ್ಕಟ್ಟಿನ ಅವಧಿಗಳಲ್ಲಿ, ಅದು ಒಂದು ಹೊಸ ಪ್ರಚೋದನೆಯನ್ನು ಪಡೆಯುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಹಿಂದಿನ ಸಮಾಜವಾದಿ ದೇಶಗಳಲ್ಲಿ, ಟ್ರಂಪ್‌ಶಾಹಿಯಂತಹ ಒಂದು ಪ್ರವೃತ್ತಿಯ ಉತ್ಥಾನಕಂತೂ ಯಾವುದೇ ಆಸ್ಪದವಿರಲಿಲ್ಲ. ನಾವು ಬಂಡವಾಳಶಾಹಿ ವ್ಯವಸ್ಥೆಯನ್ನು ಅನುಸರಿಸುವವರೆಗೂ, ಅದು ಕೋಟ್ಯಾಧಿಪತಿಗಳನ್ನು ಸೃಷ್ಟಿಸುತ್ತಿರಬಹುದಾದರೂ, ವಸಾಹತುಶಾಹಿ ಯುಗದಲ್ಲಿ ಅಂಟಿಕೊಂಡ "ಕೆಳವರ್ಗದ" ಭಾರತೀಯರು ಎಂಬ ಕಳಂಕವು ಎಂದಿಗೂ ಬಿಡುವುದಿಲ್ಲ. ದುಡಿಯುವ ಸಾಮಾನ್ಯ ಜನರನ್ನು ದನಗಳಂತೆ ನಡೆಸಿಕೊಳ್ಳುವುದು ಮುಂದುವರಿಯುತ್ತದೆ; ಒಂದು ಸಮಾಜವಾದಿ ಸಮಾಜ ಮಾತ್ರವೇ ನಿರುದ್ಯೋಗದ ಪಿಡುಗನ್ನು ಮತ್ತು ನಮ್ಮ ಜನರನ್ನು ಪಂಜರದ ಪಶುಗಳಂತೆ ನಡೆಸಿಕೊಳ್ಳುವ ದುರದೃಷ್ಟವನ್ನು ನಿವಾರಿಸಬಹುದು.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಪ್ರಖ್ಯಾತ ಮಾರ್ಕ್ಸ್‌ವಾದಿ ತತ್ವಶಾಸ್ತ್ರಜ್ಞ ಜಾರ್ಜ್ ಲುಕಾಕ್ಸ್, "ಅತ್ಯಂತ ಕೆಟ್ಟದ್ದಾದ ಸಮಾಜವಾದವೂ ಸಹ ಅತ್ಯುತ್ತಮವಾದ ಬಂಡವಾಳಶಾಹಿಗಿಂತ ಮೇಲು" ಎಂದು ಒಮ್ಮೆ ಹೇಳಿದ್ದರು. ಅವರ ಈ ಹೇಳಿಕೆಯು ಸೋವಿಯತ್ ಒಕ್ಕೂಟದಲ್ಲಿ ಮತ್ತು ಪೂರ್ವ ಯುರೋಪಿನಲ್ಲಿ ವಾಸ್ತವಿಕವಾಗಿ ಅಸ್ತಿತ್ವದಲ್ಲಿದ್ದ ಸಮಾಜವಾದದ ಬಗ್ಗೆ ಅವರು ಹೊಂದಿದ್ದ ಗ್ರಹಿಕೆಯನ್ನು ಆಧರಿಸಿತ್ತು. ಲುಕಾಕ್ಸ್ ವ್ಯಕ್ತಪಡಿಸಿದ ಈ ಅಭಿಪ್ರಾಯವನ್ನು ಅಂದಿನ ಪಾಶ್ಚಾತ್ಯ ಎಡ ವಲಯಗಳೇ ಒಪ್ಪಿಕೊಂಡಿರಲಿಲ್ಲ. ಇತ್ತೀಚೆಗೆ ಮಹಿಳೆಯರು ಮತ್ತು ಮಕ್ಕಳೂ ಸೇರಿದಂತೆ, ಅಮೆರಿಕದಿಂದ ಗಡೀಪಾರು ಮಾಡಲಾದವರ ಕೈಗಳಿಗೆ ಕೋಳ ತೊಡಿಸಿ ಕಾಲುಗಳನ್ನು ಸರಪಳಿಯಿಂದ ಬಿಗಿದು, ಮಿಲಿಟರಿ ವಿಮಾನಗಳಲ್ಲಿ ಭಾರತ ಮತ್ತು ಇತರ ಮೂರನೇ ಜಗತ್ತಿನ ದೇಶಗಳಿಗೆ ರವಾನಿಸಿದ ಇಡೀ ಪ್ರಸಂಗವು ಲುಕಾಕ್ಸ್ ಅವರ ಹೇಳಿಕೆಯನ್ನು ಜ್ಞಾಪಿಸುತ್ತದೆ. ಸೋವಿಯತ್ ಒಕ್ಕೂಟದಲ್ಲಿ ಮತ್ತು ಪೂರ್ವ ಯುರೋಪಿನಲ್ಲಿ ವಾಸ್ತವಿಕವಾಗಿ ಅಸ್ತಿತ್ವದಲ್ಲಿದ್ದ ಸಮಾಜವಾದದ ಕನಿಷ್ಠ ಎರಡು ಇಷ್ಟವಾಗುವ ಲಕ್ಷಣಗಳು ಅದನ್ನು ಯಾವುದೇ ಬಂಡವಾಳಶಾಹಿ ದೇಶದಿಂದ ಭಿನ್ನವಾಗಿಸುತ್ತವೆ.

ಮೊದಲನೆಯದು, ವಿಶ್ವದ ಪ್ರಮುಖ ಬಂಡವಾಳಶಾಹಿ ದೇಶವು ವಲಸಿಗರನ್ನು ಗಡೀಪಾರು ಮಾಡಿದ ಕ್ರಮದ ಹಿಂದಿರುವ ತಾತ್ಸಾರ, ನಿಜ ಹೇಳಬೇಕೆಂದರೆ ಜನಾಂಗದ್ವೇಷದಿಂದ ತುಂಬಿದ ತಾತ್ಸಾರ. ಸಮಾಜವಾದಿ ದೇಶಗಳು ಅಧಿಕೃತವಾಗಿ ಜನಾಂಗದ್ವೇಷದಿಂದ ಪೂರ್ಣವಾಗಿ ಮುಕ್ತವಾಗಿದ್ದವು. ಸಮಾಜವಾದಿ ಸರ್ಕಾರಗಳು ಅಧಿಕೃತವಾಗಿ ಹೊಂದಿದ್ದ ನಿಲುವುಗಳ ಹೊರತಾಗಿಯೂ, ಆ ದೇಶಗಳಲ್ಲಿಯೂ ಸಹ ಆ ಸಮಯದಲ್ಲಿ ಜನಾಂಗೀಯ ಪೂರ್ವಾಗ್ರಹಗಳು ಜನರ ಮನಸ್ಸಿನಲ್ಲಿ ಸುಪ್ತವಾಗಿದ್ದಿರಬಹುದು ಮತ್ತು ಆ ದೇಶಗಳಲ್ಲಿ ಸಮಾಜವಾದವು ಪತನವಾದ ನಂತರ ಈ ಪೂರ್ವಾಗ್ರಹಗಳು ಮುನ್ನೆಲೆಗೆ ಬಂದವು ಎಂಬುದನ್ನು ಬಲ್ಲೆವು. ಇತ್ತೀಚಿನ ದಿನಗಳಲ್ಲಿ ಮುಂದುವರಿದ ಬಂಡವಾಳಶಾಹಿ ದೇಶಗಳ ಪ್ರಗತಿಪರ ಶಕ್ತಿಗಳು ಅಲ್ಲಿ ಜನಾಂಗೀಯ ಸಹನೆಯ ಸಮಾಜವನ್ನು, ಜನಾಂಗೀಯವಾಗಿಯೂ ಸಹನಾಶೀಲವಾಗಿರುವ ಒಂದು ಸಮಾಜವನ್ನು ನಿರ್ಮಿಸುವಲ್ಲಿ ಅಪಾರ ಪ್ರಯತ್ನಗಳನ್ನು ಮಾಡುತ್ತಿವೆ ಎಂಬುದನ್ನೂ ಬಲ್ಲೆವು. ಇತ್ತೀಚಿಗೆ ಅಮೆರಿಕಾದಲ್ಲಿ ಗಡೀಪಾರು ಪ್ರಕರಣಗಳಲ್ಲಿ ತೋರಿದ ಅಮಾನವೀಯತೆ ವಸ್ತುತಃ ಬಂಡವಾಳಶಾಹಿಯದ್ದಲ್ಲ, ಬದಲಿಗೆ ಟ್ರಂಪ್‌ಶಾಹಿಯದ್ದು. ಅಂದರೆ, ಪ್ರಸ್ತುತ ಯುಎಸ್‌ನಲ್ಲಿ ಅಧಿಕಾರದ ಲಗಾಮು ಹೊಂದಿರುವ ನವ-ಫ್ಯಾಸಿಸ್ಟ್ ಕೂಟದ ಕಡು ಅಮಾನವೀಯತೆಯೇ ಅದಕ್ಕೆ ಕಾರಣ ಎಂದು ಅನೇಕರು ಹೇಳುತ್ತಾರೆ.

ಬಂಡವಾಳಶಾಹಿ, ಜನಾಂಗದ್ವೇಷ ಮತ್ತು ಟ್ರಂಪ್‌ಶಾಹಿ

ಟ್ರಂಪ್‌ಶಾಹಿ ಮತ್ತು ಬಂಡವಾಳಶಾಹಿ, ಇವೆರಡೂ ಒಂದೇ ಅಲ್ಲ ಎಂಬುದು ಹೌದಾದರೂ, ಟ್ರಂಪ್‌ಶಾಹಿ ಎಂಬುದೊಂದು ಪೂರ್ತಿಯಾಗಿ ಭಿನ್ನವಾದ ಅನ್ಯಲೋಕದ ವಿದ್ಯಮಾನವೆಂದು ನೋಡುವುದು ತಪ್ಪಾಗುತ್ತದೆ. ಆಧುನಿಕ ಯುಗದಲ್ಲಿ ಜನಾಂಗಭೇದ ನೀತಿಯು ಸಾಮ್ರಾಜ್ಯಶಾಹಿಯ ಒಂದು ಉತ್ಪನ್ನ ಮತ್ತು ಈ ಸಾಮ್ರಾಜ್ಯಶಾಹಿ



ಎಂಬುದಿಲ್ಲದೆ ಒಂದು ಉತ್ಪಾದನಾ ವಿಧಾನವಾಗಿ ಬಂಡವಾಳಶಾಹಿಯನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಬಂಡವಾಳಶಾಹಿಯ ಅಡಿಯ ಪ್ರಗತಿಶೀಲ ಪ್ರವೃತ್ತಿಗಳೂ ಸಹ ಸಾಮ್ರಾಜ್ಯಶಾಹಿಯನ್ನು ಭೂತಕಾಲದ ಶೋಷಣೆಯ ಒಂದು ಅಸಹ್ಯಕರ ವಿದ್ಯಮಾನವೆಂದು ಧಿಕ್ಕರಿಸುವುದಿಲ್ಲ. ಬದಲಿಗೆ, ಅದನ್ನು ದೂರದ ಸಮಾಜಗಳಿಗೆ ಪ್ರಗತಿಯನ್ನು ಮತ್ತು "ಆಧುನಿಕತೆ"ಯನ್ನು ತಂದ ಒಂದು ವಿದ್ಯಮಾನವೆಂದು ಅವು ನೋಡುತ್ತವೆ. ಅಂತಹ ಸಮಾಜಗಳು ತಾವಾಗಿಯೇ ಪ್ರಗತಿಯನ್ನು ಮತ್ತು "ಆಧುನಿಕತೆಯನ್ನು" ಸಾಧಿಸಲು ಅಸಮರ್ಥವಾಗಿವೆ, ಅವುಗಳಿಗೆ ಸಾಮ್ರಾಜ್ಯಶಾಹಿ ಹಿತಕಾರಿ ಎಂಬ ಈ ಕಣ್ಣೋಟದಲ್ಲಿ ಇಂತಹ ಸಾಮ್ರಾಜ್ಯಶಾಹಿ ಯೋಜನೆಯಲ್ಲಿ ತೊಡಗಿರುವಂತದ್ದು ಒಂದು ಶ್ರೇಷ್ಠ ಜನಾಂಗ ಎಂಬ ನಂಬಿಕೆ ಅಡಕವಾಗಿದೆ. ಸಮಕಾಲೀನ ಮುಂದುವರೆದ ದೇಶಗಳಲ್ಲಿನ ಪ್ರಗತಿಶೀಲ ಪ್ರವೃತ್ತಿಯ ಆಶಯಗಳು ಎಷ್ಟೇ ಮಹೋನ್ನತವಾಗಿದ್ದರೂ, ಸಾಮ್ರಾಜ್ಯಶಾಹಿಯನ್ನು ಅದು ಧಿಕ್ಕರಿಸುವವರೆಗೂ ಅದು ಜನಾಂಗಭೇದ ನೀತಿಯ ಕಳಂಕದಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳುವುದು ಸಾಧ್ಯವಿಲ್ಲ. ಮತ್ತು ಅದು ಸಾಮ್ರಾಜ್ಯಶಾಹಿಯನ್ನು ಧಿಕ್ಕರಿಸುವುದಿಲ್ಲ ಎಂಬುದು ಈ ಎಲ್ಲ ಮುಂದುವರೆದ ದೇಶಗಳು ಬೆಂಬಲಿಸುವ ಎರಡು ಇತ್ತೀಚಿನ ಯುದ್ಧಗಳಿಗೆ –ಒಂದು ಇಡೀ ಜನತೆಯ ವಿರುದ್ಧ ನಡೆಸಿರುವ ನರಮೇಧ ಮತ್ತು ಇನ್ನೊಂದು ಪಾಶ್ಚಾತ್ಯ ಸಾಮ್ರಾಜ್ಯಶಾಹಿ ವಿಸ್ತರಣೆಯ ಫಲ– ಎಲ್ಲ ಪ್ರಗತಿಪರ ಶಕ್ತಿಗಳ ಒಟ್ಟಾರೆ ಬೆಂಬಲದ ಮೂಲಕ ಸ್ಪಷ್ಟವಾಗುತ್ತದೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಮುಂದುವರೆದ ದೇಶಗಳಲ್ಲಿ ಜನಾಂಗಭೇದ ಎಂಬುದು ಒಂದು ಪೂರ್ವಾಗ್ರಹವಾಗಿ ಬಹು ಕಾಲದಿಂದಲೂ ಸುಪ್ತವಾಗಿ ಉಳಿದಿದೆ. ಆಳುವ ವಲಯಗಳೊಳಗಿನ ಉದಾರವಾದಿಗಳೂ ಸೇರಿದಂತೆ, ಆಡಳಿತ ವಲಯಗಳಲ್ಲಿಯೂ ಸಹ ಅದು ಸುಪ್ತವಾಗಿಯೇ ಉಳಿದಿದೆ. ಬಿಕ್ಕಟ್ಟಿನ ಅವಧಿಗಳಲ್ಲಿ, ಏಕಸ್ವಾಮ್ಯ ಬಂಡವಾಳವು ತನ್ನ ಪ್ರಾಬಲ್ಯಕ್ಕೆ ಎದುರಾದ ಬೆದರಿಕೆಗಳ ವಿರುದ್ಧ ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳಲು ಮತ್ತು ಕಾರ್ಮಿಕ ವರ್ಗವನ್ನು ವಿಭಜಿಸಲು ಕೆಲವು ಅದೃಷ್ಟಹೀನ ವಲಸಿಗ ಗುಂಪುಗಳನ್ನು "ಅನ್ಯ"ರನ್ನಾಗಿ ಬಿಂಬಿಸಲು ಬಳಸುವಾಗ ಈ ಜನಾಂಗಭೇದವು ಒಂದು ಹೊಸ ಪ್ರಚೋದನೆಯನ್ನು ಪಡೆಯುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಹಿಂದಿನ ಸಮಾಜವಾದಿ ದೇಶಗಳಲ್ಲಿ, ಆಳುವ ರಾಜಕೀಯ ವ್ಯವಸ್ಥೆಯು ಜನಾಂಗಭೇದವನ್ನು ಸಂಪೂರ್ಣವಾಗಿ ವಿರೋಧಿಸಿತ್ತು ಮತ್ತು ಸಮಾಜದಲ್ಲಿ ಅದರ ಯಾವುದೇ ಅಭಿವ್ಯಕ್ತಿಯನ್ನು ನಿಗ್ರಹಿಸಿತ್ತು. ಇದನ್ನು ಒಂದು ಹೇರಿಕೆಯ ಕ್ರಮ ಎಂದು ಅನೇಕರು ವಾದಿಸುತ್ತಾರೆ. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಅದು ಒಂದು ಹೇರಿಕೆಯೋ. ಅಲ್ಲವೋ, ಟ್ರಂಪ್‌ಶಾಹಿಯಂತಹ ಒಂದು ಪ್ರವೃತ್ತಿಯ ಉತ್ಥಾನಕ್ಕೆ ಯಾವುದೇ ಅವಕಾಶಕ್ಕೆ ಅಲ್ಲಿ ಆಸ್ಪದವಿರಲಿಲ್ಲ.

ನಿರುದ್ಯೋಗದ ಪಿಡುಗಿನ ಅನಿವಾರ್ಯ ಫಲಿತ

ಹಿಂದಿನ ಸಮಾಜವಾದಿ ದೇಶಗಳ ಶ್ರೇಷ್ಠತೆಯನ್ನು ತೋರಿಸಿಕೊಟ್ಟ ಎರಡನೇ ಅಂಶವನ್ನು ನೋಡೋಣ. ಅದೆಂದರೆ, ಪೂರ್ಣ ಉದ್ಯೋಗದ ಸಾಧನೆ. ಪ್ರಾಸಂಗಿಕವಾಗಿ ಹೇಳುವುದಾದರೆ, ನಿರುದ್ಯೋಗ ಎಂಬುದನ್ನು ಅದು ತೊಡೆದು ಹಾಕಿತು. ಒಂದು ಪ್ರಮುಖವಾದ ಮತ್ತು ಸಾರಭೂತ ಅಂಶವಾದ ನಿರುದ್ಯೋಗವನ್ನು ಅದು ತೊಡೆದುಹಾಕಿತು. ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವಲಸಿಗರ ಮೇಲಿನ ದ್ವೇಷಕ್ಕೆ ಈ ಒಂದು ಬಹು ಪ್ರಮುಖ ಕಾರಣ. ಅದನ್ನು ಹಿಂದಿನ ಸಮಾಜವಾದಿ ದೇಶಗಳು ನಿವಾರಿಸಿದವು.



ಮೂರನೆಯ ಜಗತ್ತಿನ ದೇಶಗಳ ಜನ ಅಮೆರಿಕದಂತಹ ದೇಶಗಳಿಗೆ ವಲಸೆ ಹೋಗ ಬಯಸುವ ಕಾರಣವೆಂದರೆ, ಈ ದೇಶಗಳಲ್ಲಿರುವ ಅತಿಯಾದ ನಿರುದ್ಯೋಗವೇ. ನಿಜ, ವಲಸೆ ಹೋಗುವವರು ನಿರ್ಗತಿಕರೇನಲ್ಲ. ಪ್ರತಿಯೊಬ್ಬ ವಲಸಿಗನೂ "ಕತ್ತೆ ಮಾರ್ಗ"ದ ಮೂಲಕ ಅಮೆರಿಕವನ್ನು ಪ್ರವೇಶಿಸಲು ವ್ಯವಸ್ಥೆಗೊಳಿಸಿದ ಮಧ್ಯವರ್ತಿಗಳಿಗೆ 40–50 ಲಕ್ಷ ರೂ.ಗಳಷ್ಟು ಹಣವನ್ನು ತೆರಬೇಕಾಗುತ್ತದೆ ಎಂಬ ಅಂಶವು ಅವನ ಬಳಿ ಅಷ್ಟೋ-ಇಷ್ಟೋ ಜೀವನೋಪಾಯ ಇತ್ತು ಎಂಬುದನ್ನು ತೋರಿಸುತ್ತದೆ. ವಲಸೆ ಹೋಗುವ ಅವನ ಬಯಕೆಯು ಖಂಡಿತವಾಗಿಯೂ ಎರಡು ಅಂಶಗಳಿಂದ ಉಂಟಾಗುತ್ತದೆ: ಅರ್ಹತೆಗೆ ತಕ್ಕ ಉದ್ಯೋಗ ಮತ್ತು ಉದ್ಯೋಗಕ್ಕೆ ತಕ್ಕ ಪ್ರತಿಫಲ ದೊರಕದಿರುವ ಪರಿಸ್ಥಿತಿ, ಮತ್ತು ಅವನ ಸಮಾಜದಲ್ಲಿ ನೆಲೆಸಿರುವ ಅಗಾಧ ಅಸಮಾನತೆಯ ಪರಿಸ್ಥಿತಿಯಲ್ಲಿ ಅವನು ಹೊಂದಿರುವ ಸ್ಥಾನ-ಮಾನ ಮತ್ತು ಅವನಿಗೆ ಒದಗಿದ ಸ್ಥಿತಿ-ಗತಿಗಳು ಅವನನ್ನು ಅತೃಪ್ತನನ್ನಾಗಿ ಮಾಡಿರುವುದು. ಈ ಎರಡೂ ಅಂಶಗಳು ದೇಶದಲ್ಲಿ ಬಂಡವಾಳಶಾಹಿಯನ್ನು ಬೆಳೆಸುವ ಯೋಜನೆಯ ಕಾರಣದಿಂದಾಗಿ ಉದ್ಭವಿಸುತ್ತವೆ. ದೇಶದ ಜಿಡಿಪಿಯ ಬೆಳವಣಿಗೆ ದರ ಎಷ್ಟೇ ಉನ್ನತವಾಗಿರಲಿ, ಜಿಡಿಪಿಯ ಗಾತ್ರ ಎಷ್ಟೇ ಟ್ರಿಲಿಯನ್ ಡಾಲರ್ ಆಗಿರಲಿ, ಈ ಅಂಶಗಳು ಮಾತ್ರ ಇದ್ದೇ ಇರುತ್ತವೆ. ಹಾಗಾಗಿ, ಕೆಲವು ಜನವಿಭಾಗಗಳಲ್ಲಿ ವಲಸೆ ಹೋಗುವ ಬಯಕೆ ಕೂಡ.

ದೇಶಕ್ಕೆ ಸ್ವಾತಂತ್ರ್ಯ ಬಂದ 75 ವರ್ಷಗಳ ನಂತರವೂ, ಜನ ಹತಾಶೆಯಿಂದ ಯಾವುದನ್ನೂ ಲೆಕ್ಕಿಸದೆ, ಇಂತಹ ವಲಸಿಗರನ್ನು ಪ್ರಾಣಿಗಳಂತೆ ನಡೆಸಿಕೊಳ್ಳುವ ಮತ್ತು ಅವರನ್ನು ಪಂಜರದಲ್ಲಿ ಕೂಡಹಾಕಿ ಮನೆಗೆ ಸಾಗಿಸುವಂತಹ ಅಪಾಯವಿದ್ದರೂ ಲೆಕ್ಕಿಸದೆ, ವಲಸೆ ಹೋಗ ಬಯಸುವ ಒಂದು ಸಮಾಜವನ್ನು ಹೊಂದಿದ್ದೇವೆ ಎಂಬುದು ಒಂದು ನಾಚಿಕೆಗೇಡಿನ ಸಂಗತಿಯೇ ಸರಿ. ಇದು, ಮೂರನೇ ಜಗತ್ತಿನ ದೇಶಗಳಲ್ಲಿ ಇಂದು ಬಂಡವಾಳಶಾಹಿ ಸಮಾಜವನ್ನು ನಿರ್ಮಿಸುವ ಪ್ರಯತ್ನದ ಒಂದು ಅನಿವಾರ್ಯ ಫಲಿತಾಂಶವೇ ಆಗಿದೆ.

ಮತ್ತೊಂದೆಡೆಯಲ್ಲಿ, ಸ್ವತಃ ಅಮೆರಿಕನ್ ಸಮಾಜವೇ ಹಲವಾರು ವರ್ಷಗಳ ಹಿಂದೆ

ಪುಟ 14 ಕ್ಕೆ

ಪರ್ಯಾಯ ರಾಜಕೀಯ ಶಕ್ತಿಯಾಗಿ ಕಮ್ಯುನಿಸ್ಟ್ ಪಕ್ಷ– ಇಎಂಎಸ್ ನಂಬೂದರಿ ಪಾಡ್....... ಪುಟ 11 ರಿಂದ

ಪರಿಣಾಮವಾಗಿ, ಮೂರನೇ ಹಂತದಲ್ಲಿ ರಾಷ್ಟ್ರವ್ಯಾಪಿ ಮುಷ್ಕರಗಳು, ರೈತರ ಪ್ರತಿಭಟನೆಗಳು, ಎಲ್ಲ ವರ್ಗಗಳ ಜನರ ಪ್ರತಿಭಟನೆಗಳು ಭುಗಿಲೆದ್ದವು. ತೆಲಂಗಾಣ, ಪುನ್ನಾಪುರ–ವಯಲಾರ್ ನಂತಹ ಐತಿಹಾಸಿಕ ಹೋರಾಟಗಳಲ್ಲಿ ಅವು ಪರಾಕಾಷ್ಠೆಯನ್ನು ತಲುಪಿದವು.

ಮೂರು ಹಂತಗಳಲ್ಲಿಯೂ, ಕಮ್ಯುನಿಸ್ಟ್ ಪಕ್ಷದ ಕಾರ್ಮಿಕ ವರ್ಗದ (ಕ್ರಾಂತಿಕಾರಿ) ಧೋರಣೆಯು, ಕಾಂಗ್ರೆಸ್ಸಿನ ಬಂಡವಾಳಶಾಹಿ (ಚೌಕಾಸಿ) ಧೋರಣೆಯ ನಡುವೆ ಘರ್ಷಣೆ ನಡೆಯಿತು. ಕಾಂಗ್ರೆಸ್ಸಿನ ಬಂಡವಾಳಶಾಹಿ ಧೋರಣೆಯು ತಾತ್ಕಾಲಿಕವಾಗಿ ಯಶಸ್ಸನ್ನು ಸಾಧಿಸಿದರೂ, ಅಂತಿಮ ವಿಜಯವು ಕಮ್ಯುನಿಸ್ಟರ ಕಾರ್ಮಿಕ ವರ್ಗದ ಧೋರಣೆಯಿಂದ ಸಿಕ್ಕಿದೆ. ಸ್ವಾತಂತ್ರ್ಯಾನಂತರದ ಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಸಾಧಿಸಿದ ಪ್ರಗತಿಯಿಂದ ಇದು ಸ್ಪಷ್ಟವಾಯಿತು. ಕಮ್ಯುನಿಸ್ಟ್ ಪಕ್ಷವು ರಾಷ್ಟ್ರೀಯ ಅಸೆಂಬ್ಲಿ ಮತ್ತು ನಾಲ್ಕು ರಾಜ್ಯ ವಿಧಾನಸಭೆಗಳಲ್ಲಿ ಪ್ರಮುಖ ವಿರೋಧ ಪಕ್ಷದ ಸ್ಥಾನಕ್ಕೆ ಏರಿತು. ಐದು ವರ್ಷಗಳ ನಂತರ, ಅದು ಒಂದು ರಾಜ್ಯದ (ಕೇರಳ) ಆಡಳಿತ ಪಕ್ಷದ ಸ್ಥಾನಕ್ಕೆ ಏರಿತು.

ಭಾರತದ ವಿಶ್ವಾಸಾರ್ಹ ಮಿತ್ರ

"ಕ್ವಿಟ್ ಇಂಡಿಯಾ" ಚಳವಳಿಯ ಸಮಯದಲ್ಲಿ ಸೋವಿಯತ್ ಒಕ್ಕೂಟದ ವಿರುದ್ಧ ತಮ್ಮ ದ್ವೇಷವನ್ನು ಬಹಿರಂಗವಾಗಿ ವ್ಯಕ್ತಪಡಿಸಿದ ಕಾಂಗ್ರೆಸ್ ನಾಯಕರ ಸೈದ್ಧಾಂತಿಕ ಬಡತನವೂ ಸ್ವಾತಂತ್ರ್ಯದ ನಂತರ ಬೆಳಕಿಗೆ ಬಂದಿತು. ಸ್ವತಂತ್ರ ಭಾರತದ ಮೊದಲ ಸರ್ಕಾರವು ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ರಾಷ್ಟ್ರಗಳ ಮಿತ್ರ ರಾಷ್ಟ್ರವಾಗಿತ್ತು! ಸಮಾಜವಾದಿ ಶಿಬಿರವು ಭಾರತದ ಅತ್ಯುತ್ತಮ–ಅತ್ಯಂತ ವಿಶ್ವಾಸಾರ್ಹ ಮಿತ್ರ ಎಂಬುದು ಎಲ್ಲರಿಗೂ ಸ್ಪಷ್ಟವಾಗುತ್ತದೆ.

ಹೀಗೆ ಹೇಳುವುದರಿಂದ "ಭಾರತ ಬಿಟ್ಟು ತೊಲಗಿ" ಹೋರಾಟವನ್ನು ವಿರೋಧಿಸಲು ಕಮ್ಯುನಿಸ್ಟ್ ಪಕ್ಷದ ಮೊದಲ ಅಖಿಲ ಭಾರತ ಸಮ್ಮೇಳನದಲ್ಲಿ ಅನುಮೋದಿಸಲಾದ ನೀತಿಯಲ್ಲಿ ಯಾವುದೇ ದೋಷವಿಲ್ಲ ಎಂಬ ಅರ್ಥವಲ್ಲ. ಪಕ್ಷವು ಆ ನೀತಿಯನ್ನು ರೂಪಿಸಿತು, ಒಟ್ಟಾರೆಯಾಗಿ, ಅದು ಸರಿಯಾಗಿದೆ; ಅದು ಕಾನೂನುಬದ್ಧವಾಗಿದೆ; ಆದರೆ, ಅದರ ಅನುಷ್ಠಾನದಲ್ಲಿ ಪಕ್ಷ ಕೆಲವು ತಪ್ಪುಗಳನ್ನು ಮಾಡಿರುವುದು ಕೂಡ ನಿಜ. ಆ ತಪ್ಪುಗಳ ಪರಿಣಾಮವಾಗಿ, ಪಕ್ಷವು ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳಿಂದ ತಾತ್ಕಾಲಿಕವಾಗಿ ಪ್ರತ್ಯೇಕಿಸಲ್ಪಟ್ಟಿತು. ಪಕ್ಷವು ಇದನ್ನು ನಂತರ (ಎರಡನೇ ಅಖಿಲ ಭಾರತ ಸಮ್ಮೇಳನದಲ್ಲಿ) ಸ್ವಯಂ ವಿಮರ್ಶಾತ್ಮಕ ದೃಷ್ಟಿಕೋನದಿಂದ ಪರಿಗಣಿಸಿತು.

ಜಾಗತಿಕ ಆಂದೋಲನದ ಅವಿಭಾಜ್ಯ ಅಂಗ

ಆದರೆ ಭಾರತೀಯ ಸ್ವಾತಂತ್ರ್ಯ ಹೋರಾಟ ಮತ್ತು ಜಾಗತಿಕ ಫ್ಯಾಸಿಸ್ಟ್ ವಿರೋಧಿ ಹೋರಾಟದ ನಡುವಿನ ಸಂಬಂಧದ ಬಗ್ಗೆ ಮೊದಲ ಕಾಂಗ್ರೆಸ್ನಲ್ಲಿ ಮತ್ತು ಅದಕ್ಕೂ ಮೊದಲು ಕಮ್ಯುನಿಸ್ಟ್ ಪಕ್ಷವು ತೆಗೆದುಕೊಂಡ ನಿಲುವು ಸಂಪೂರ್ಣವಾಗಿ ಸರಿಯಾಗಿತ್ತು. ಪರಿಣಾಮವಾಗಿ, ಶ್ರಮಜೀವಿ ರಾಜಕೀಯ ಶಕ್ತಿಯಾಗಿ ಕಮ್ಯುನಿಸ್ಟರು ಇಂದಿಗೂ ತೆಗೆದುಕೊಂಡಿರುವ ಧೋರಣೆಗಳು ಅವರನ್ನು ಜಾಗತಿಕ ಸಾಮ್ರಾಜ್ಯಶಾಹಿ–ವಿರೋಧಿ ಚಳವಳಿಯ ಅವಿಭಾಜ್ಯ ಅಂಗವನ್ನಾಗಿ ಮಾಡಿವೆ.

ರಾಷ್ಟ್ರೀಯ ಜನಾಂಗೀಯ ಸಮಸ್ಯೆ

ಇದನ್ನು ಪೂರ್ಣಗೊಳಿಸುವ ಮೊದಲು, ಪಾಕಿಸ್ತಾನ ಮತ್ತು ರಾಷ್ಟ್ರೀಯತೆಯ ವಿಷಯದ ಕುರಿತು ಮೊದಲ ಸಮ್ಮೇಳನದಲ್ಲಿ ನಡೆದ ಚರ್ಚೆಯನ್ನು ನಾನು ಉಲ್ಲೇಖಿಸಲು ಬಯಸುತ್ತೇನೆ. ಭಾರತವು ಏಕೀಕೃತ ರಾಷ್ಟ್ರವೇ ಅಥವಾ ಭಾರತವು ಹಿಂದೂ–ಮುಸ್ಲಿಂ ಎಂಬ ಎರಡು ರಾಷ್ಟ್ರಗಳನ್ನು ಒಳಗೊಂಡಿದೆಯೇ ಎಂಬುದು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಿನ ವಿವಾದವಾಗಿತ್ತು. ಕಮ್ಯುನಿಸ್ಟ್ ಪಕ್ಷದ ಮೊದಲ ಕಾಂಗ್ರೆಸ್ ತೆಗೆದುಕೊಂಡ ನಿಲುವು ಎರಡನ್ನೂ ತಿರಸ್ಕರಿಸಿತು.

ಭಾರತ ಬಹು ಜನಾಂಗೀಯದ ಒಂದು ವ್ಯವಸ್ಥೆಯಾಗಿದೆ. ಆದರೆ ಅದರ ಬಹು–ಜನಾಂಗೀಯತೆಯು ಧರ್ಮದ ಮೇಲೆ ಆಧಾರಿತವಾಗಿಲ್ಲ. ಭಾರತವು ಭಾಷೆ ಮತ್ತು ಸಾಂಸ್ಕೃತಿಕ ಜೀವನದ ಆಧಾರದ ಮೇಲೆ ಒಂದು ಡಜನ್ ಗಿಂತಲೂ ಹೆಚ್ಚು ರಾಷ್ಟ್ರೀಯತೆಗಳನ್ನು ಹೊಂದಿರುವ ದೇಶವಾಗಿದೆ. ಈ ವಾಸ್ತವವನ್ನು ಗುರುತಿಸಿ, ಸ್ವಾಯತ್ತ ಹಕ್ಕುಗಳನ್ನು ಹೊಂದಿರುವ ರಾಷ್ಟ್ರೀಯತೆಗಳ ಹೊಸ ಪ್ರಜಾಪ್ರಭುತ್ವ (ಫೆಡರಲ್) ರಾಜ್ಯವನ್ನು ನಿರ್ಮಿಸಬೇಕು, ಆ ಪ್ರಕ್ರಿಯೆಯ ಭಾಗವಾಗಿ ರಾಜಪ್ರಭುತ್ವದ ಅಡಿಯಲ್ಲಿರುವ ರಾಜ್ಯಗಳನ್ನು ಆಯಾ ರಾಷ್ಟ್ರೀಯತೆಗಳ ರಾಜ್ಯಗಳೊಂದಿಗೆ ಸಂಯೋಜಿಸಬೇಕು. ಇದರ ಆಧಾರದ ಮೇಲೆ, ರಾಜ್ಯಗಳನ್ನು ಪುನರ್ವಿಂಗಡಿಸುವ ಮತ್ತು ಅವುಗಳಿಗೆ ವ್ಯಾಪಕ ಅಧಿಕಾರಗಳನ್ನು ನೀಡುವ ಒಕ್ಕೂಟವನ್ನು ರಚಿಸಬೇಕು. ಇದು ಪಕ್ಷದ ಬೇಡಿಕೆಯಾಗಿತ್ತು. ಈ ನಿಲುವಿನ ನಿಖರತೆಯು ರಾಜ್ಯಗಳ ಸತತ ರೂಪಾಂತರಗಳಿಂದ ಮತ್ತು ಕೇಂದ್ರ–ರಾಜ್ಯ ಸಂಬಂಧಗಳ ವಿಷಯದ ಬಗ್ಗೆ ಹೊರಹೊಮ್ಮಿದ ಸಾರ್ವಜನಿಕ ಅಭಿಪ್ರಾಯದಿಂದ ಸಾಬೀತಾಯಿತು.

ಇದರಲ್ಲಿಯೂ ಸಹ (ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ತೆಗೆದುಕೊಂಡ ವಿಧಾನದಂತೆಯೇ) ಕೆಲವು ಕಾರ್ಯವಿಧಾನದ ದೋಷಗಳು ಸಂಭವಿಸಿವೆ. ಇದರ ಪರಿಣಾಮವಾಗಿ, ಕಮ್ಯುನಿಸ್ಟ್ ಪಕ್ಷವು ಮುಸ್ಲಿಂ ಲೀಗ್ನ ಪಾಕಿಸ್ತಾನದ ಬೇಡಿಕೆಯನ್ನು ಬೆಂಬಲಿಸುತ್ತದೆ ಎಂಬ ಗ್ರಹಿಕೆ ಹರಡಿತು. ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳಿಂದ ಪಕ್ಷ ದೂರವಾಗಲು ಇದು ಕೂಡ ಕಾರಣವಾಗಿತ್ತು.

ಆದರೆ ಭಾರತ ಕಮ್ಯುನಿಸ್ಟ್ ಪಕ್ಷದ ಆ ಮೊದಲ ಅಖಿಲ ಭಾರತ ಸಮ್ಮೇಳನದಲ್ಲಿಯೇ ಸ್ವತಂತ್ರ ಭಾರತವು ಸ್ವಾಯತ್ತ ರಾಜ್ಯಗಳ ಒಕ್ಕೂಟವಾಗಬೇಕೆಂದು: ಅದು ಧರ್ಮದ ಆಧಾರದ ಮೇಲೆ ಅಲ್ಲ, ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ರಾಷ್ಟ್ರೀಯತೆಗಳ ಆಧಾರದ ಮೇಲೆ ಸೃಷ್ಟಿಯಾಗಬೇಕೆಂದು ನಿರ್ಧರಿಸಿತು;. ಈ ಪರಿಕಲ್ಪನೆಯನ್ನು ಮೊದಲ ಬಾರಿಗೆ ರೂಪಿಸಲಾಯಿತು. ಆ ಗೌರವ ಮೊದಲ ಸಮ್ಮೇಳನಕ್ಕೆ ಸಲ್ಲುತ್ತದೆ.

–ಕನ್ನಡಕ್ಕೆ: ಸಿಚಿ

ವಲಸಿಗರನ್ನು ಪಂಜರದ ಪಶುಗಳಂತೆ ಕಾಣುವ ಅಮಾನವೀಯತೆ...... ಪುಟ 13 ರಿಂದ

ಯುರೋಪಿನಿಂದ ವಲಸೆ ಬಂದು ಸ್ಥಳೀಯ ಜನರಿಗೆ ಸೇರಿದ ಭೂಮಿಯನ್ನು ಕಿತ್ತುಕೊಂಡು ವಲಸೆಯ ಮೂಲಕವೇ ಅಸ್ತಿತ್ವಕ್ಕೆ ಬಂದಿದ್ದರೂ ಸಹ, ಟ್ರಂಪ್ ವಲಸಿಗರನ್ನು ನಿರ್ಭಿಡೆಯಿಂದ ಗಡೀಪಾರು ಮಾಡಲು ಸಾಧ್ಯವಾಗಿರುವುದು, ಅಮೆರಿಕದಲ್ಲಿ ಉಂಟಾಗಿರುವ ಸಾಮೂಹಿಕ ನಿರುದ್ಯೋಗದಿಂದಲೇ. ಬೂರ್ಜ್ವಾ ಆರ್ಥಿಕ ಸಿದ್ಧಾಂತವು, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯ ದೀರ್ಘಕಾಲೀನ ಬೆಳವಣಿಗೆಯು ಅದರ ಕಾರ್ಮಿಕ ಬಲದ ಬೆಳವಣಿಗೆಯ ದರವನ್ನು ಅವಲಂಬಿಸಿರುತ್ತದೆ ಎಂಬ ಒಂದು ಸಂಪೂರ್ಣ ಹುಸಿ ವಾದವನ್ನು ಮುಂದಿಡುತ್ತದೆ. ಅದು ಒಂದು ವೇಳೆ ನಿಜವೇ ಆಗಿದ್ದರೆ, ಅಮೆರಿಕಕ್ಕೆ ವಲಸೆ ಬರುವವರನ್ನು ಆ ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆಯ ದರವನ್ನು ಹೆಚ್ಚಿಸುವ ಒಂದು ಸಾಧನವಾಗಿ ಬರಮಾಡಿಕೊಳ್ಳಬೇಕಾಗಿತ್ತು. ಹಾಗೆ ಆಗಲಿಲ್ಲ. ಮಾತ್ರವಲ್ಲ, ಈ ನಿರುದ್ಯೋಗದ ಪಿಡುಗು, ವಲಸೆಯ ಬಗ್ಗೆ ಟ್ರಂಪ್ ತಳೆದಿರುವ ಕಠಿಣ ನಿಲುವು ಜನಪ್ರಿಯವಾಗುವಂತೆ ಮಾಡಿದೆ.

ಒಟ್ಟಿನಲ್ಲಿ ಪರಿಸ್ಥಿತಿಯ ವಿಪರ್ಯಾಸವೆಂದರೆ, ಜರ್ಮನಿಯ ಸಹ್ರಾ ವಾಗೆನ್‌ನೆಕ್ಟ್ ರವರ ಅತ್ಯಂತ ಎಡಪಂಥೀಯ ಪಕ್ಷವು ಕೂಡ ವಲಸೆಯ ಬಗ್ಗೆ ಜರ್ಮನಿಯ ಅಧಿಕಾರರೂಢ ಬಲಪಂಥೀಯ ವ್ಯವಸ್ಥೆಯ ನಿಲುವಿಗಿಂತ ಭಿನ್ನವಾಗಿರದಂತಹ ನಿಲುವು ತಳೆಯುವಂತಾಗಿದೆ. ಈ ಪಕ್ಷ ತನ್ನ ಮಾತೃಪಕ್ಷವಾದ ಎಡಪಂಥೀಯ 'ಡಿ ಲಿಂಕ್' ಪಕ್ಷವು ನಾಟೋ ಕೂಟ ನಡೆಸುತ್ತಿರುವ ಯುದ್ಧಗಳಿಗೆ ಪರೋಕ್ಷ ಬೆಂಬಲ ನೀಡಿದ್ದನ್ನು ವಿರೋಧಿಸಿ ಅದರಿಂದ ಹೊರಬಂದ ಪಕ್ಷ ಎಂಬುದನ್ನು ಗಮನಿಸಬೇಕು. ನಿರುದ್ಯೋಗದ ಪಿಡುಗು ಎಷ್ಟೊಂದು ವ್ಯಾಪಕವಾಗಿದೆಯೆಂದರೆ, ಅದು ವಲಸಿಗರ ಮೂಲ ದೇಶ ಮತ್ತು ಅವರು ವಲಸೆ ಹೋಗಬೇಕೆಂದಿರುವ ದೇಶ ಎರಡನ್ನೂ ಬಾಧಿಸುತ್ತಿದೆ. ಇದು ಬಂಡವಾಳಶಾಹಿಯ ಅಸ್ತಿತ್ವದುದ್ದಕ್ಕೂ ನೆರಳಿನಂತೆ ಅದನ್ನು ಹಿಂಬಾಲಿಸಿರುವ ಪಿಡುಗು. ಅದು ಪ್ರಸ್ತುತ ಬಿಕ್ಕಟ್ಟಿನ ಸಂದರ್ಭದಲ್ಲಿ ಒಂದು ವಿಷಕಾರೀ ಸ್ವರೂಪವನ್ನು ಪಡೆದಿದ್ದು, ನಾವೀಗ ನೋಡುತ್ತಿರುವ ಅಮಾನವೀಯತೆಯ, ಜನರನ್ನು ದನಗಳಂತೆ ಕಾಣುವ ಮತ್ತು ಅವರನ್ನು ಸರಪಳಿಗಳಲ್ಲಿ ಬಿಗಿದು ಗಡಿಪಾರು ಮಾಡುವ ಅಮಾನವೀಯತೆಯ ಹಿಂದೆ ಇರುವ ಅಂಶವಾಗಿದೆ.

'ಕೆಳವರ್ಗ'ದವರು ಎಂಬ ವಸಾಹತುಶಾಹೀ ಕಳಂಕ

ಇದಕ್ಕೆ ವ್ಯತಿರಿಕ್ತವಾಗಿ, ಹಿಂದಿನ ಸಮಾಜವಾದಿ ಸಮಾಜಗಳು ಈ ಪಿಡುಗಿನಿಂದ ಸಂಪೂರ್ಣವಾಗಿ ಮುಕ್ತವಾಗಿದ್ದವು. ವಾಸ್ತವವಾಗಿ ಅವುಗಳಿಗೆ ಎದುರಾದುದು ನಿರುದ್ಯೋಗವಲ್ಲ. ಬದಲಿಗೆ, ಕಾರ್ಮಿಕರ ಕೊರತೆಯನ್ನು ಅವು ಎದುರಿಸಿದವು. ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಮೈಕೆಲ್ ಕಲೆಕಿಯ ಮಾರ್ಗವನ್ನು ಅನುಸರಿಸಿದ ಪ್ರಸಿದ್ಧ ಹಂಗೇರಿಯನ್ ಅರ್ಥಶಾಸ್ತ್ರಜ್ಞ ಯನೋಸ್ ಕೊರ್ನೈ(ಅವರೇನೂ ಸಮಾಜವಾದಿಯಲ್ಲ), "ಬೇಡಿಕೆ–ನಿರ್ಬಂಧಿತ" ಮತ್ತು "ಸಂಪನ್ಮೂಲ–ನಿರ್ಬಂಧಿತ" ಅರ್ಥವ್ಯವಸ್ಥೆಗಳ ನಡುವೆ ವ್ಯತ್ಯಾಸವಿದೆ ಎಂದರು. ಬಂಡವಾಳಶಾಹಿ ಅರ್ಥವ್ಯವಸ್ಥೆಯು ಒಂದು ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯಾಗಿದೆ ಮತ್ತು ಸಮಾಜವಾದಿ ಅರ್ಥವ್ಯವಸ್ಥೆಯು ಸಂಪನ್ಮೂಲ–ನಿರ್ಬಂಧಿತ ವ್ಯವಸ್ಥೆಯಾಗಿದೆ ಎಂದು ಅವರು ಹೇಳಿದರು. ಕೊರತೆ, ಪಡಿತರ ಮತ್ತು ಸರತಿ ಸಾಲುಗಳು ಹಿಂದಿನ ಸಮಾಜವಾದಿ ಸಮಾಜಗಳ ಲಕ್ಷಣಗಳು ಎಂದು ಹೇಳಲಾಗಿತ್ತು; ಅಂದರೆ, ಸಂಪನ್ಮೂಲಗಳ ಪೂರ್ಣ ಬಳಕೆಯೊಂದಿಗೆ ಅವರು ಉತ್ಪಾದಿಸಬಹುದಾದ ಸರಕುಗಳ ಪ್ರಮಾಣವು ಜನರ ಕೊಳ್ಳುವ ಶಕ್ತಿಗಿಂತ ಕಡಿಮೆಯಿತ್ತು; ಲಭ್ಯವಿರುವ ಶ್ರಮಿಕ ಬಲವನ್ನೂ ಒಳಗೊಂಡಂತೆ ಸಂಪನ್ಮೂಲಗಳನ್ನು ಪೂರ್ಣವಾಗಿ ಬಳಸಿಕೊಳ್ಳಲಾಗಿತ್ತು. ವಾಸ್ತವವಾಗಿ, ಈ ಸಮಾಜವಾದಿ ಸಮಾಜಗಳು ಆಧುನಿಕ ಕಾಲದಲ್ಲಿ ಪೂರ್ಣ ಉದ್ಯೋಗವನ್ನು ಹೊಂದಿದ ಏಕ ಮಾತ್ರ ಸಮಾಜಗಳಾಗಿವೆ. ಎಷ್ಟರಮಟ್ಟಿಗೆ ಎಂದರೆ, ಅವು ಉತ್ಪಾದನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರದ ಗಮನಾರ್ಹ ಏರಿಕೆಯ ಮೂಲಕ ಶ್ರಮಿಕ ಬಲವನ್ನು ಹೆಚ್ಚಿಸಿಕೊಳ್ಳಬೇಕಾಯಿತು. ಇದು ಒಂದು ಭಾರೀ ಆಳವಾದ ಸಾಮಾಜಿಕ ಪರಿಣಾಮವನ್ನೇ ಬೀರಿತು. ಉದ್ಯೋಗವು ಒದಗಿಸುವ ಆದಾಯ ಗಳಿಕೆಯಷ್ಟೇ ಅಲ್ಲ, ನಿರುದ್ಯೋಗದೊಂದಿಗೆ ಅನಿವಾರ್ಯವಾಗಿ ಬರುವ ಸ್ವಾಭಿಮಾನವನ್ನು ಕಳಕೊಳ್ಳುವ ಪರಿಸ್ಥಿತಿಯಿಂದ ಅವರು ಬಾಧೆ ಪಡಬೇಕಾಗಿರಲಿಲ್ಲ.

ಅನೇಕ ಬರಹಗಾರರು, ಎಡಪಂಥೀಯ ಬರಹಗಾರರೂ ಕೂಡ ಹಿಂದೆ ಅಸ್ತಿತ್ವದಲ್ಲಿದ್ದ ಸಮಾಜವಾದಿ ಸಮಾಜಗಳ ವಿರುದ್ಧವಾಗಿ ಬಹಳಷ್ಟು ಬರೆದಿದ್ದಾರೆ. ಸಮಾಜವಾದಿ ವ್ಯವಸ್ಥೆಯ ಕುಸಿತದ ನಂತರ, ನಮ್ಮಂತಹ ಸಮಾಜಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯವೇ ಇಲ್ಲ ಎಂಬ ಅಭಿಪ್ರಾಯವನ್ನು ಸೃಷ್ಟಿಸಲಾಗಿದೆ. ಸತ್ಯವೆಂದರೆ, ನಾವು ಬಂಡವಾಳಶಾಹಿ ವ್ಯವಸ್ಥೆಯನ್ನು ಅನುಸರಿಸುವವರೆಗೂ, ಅದು ಕೋಟ್ಯಾಧಿಪತಿಗಳನ್ನು ಸೃಷ್ಟಿಸುತ್ತಿರಬಹುದಾದರೂ, ವಸಾಹತುಶಾಹಿ ಯುಗದಲ್ಲಿ ನಮ್ಮ ಜನರಿಗೆ ಅಂಟಿಕೊಂಡ "ಕೆಳವರ್ಗದ" ಭಾರತೀಯರು ಎಂಬ ಕಳಂಕವು ಎಂದಿಗೂ ಬಿಡುವುದಿಲ್ಲ. ದುಡಿಯುವ ಸಾಮಾನ್ಯ ಜನರನ್ನು ದನಗಳಂತೆ ನಡೆಸಿಕೊಳ್ಳುವುದು ಮುಂದುವರಿಯುತ್ತದೆ; ಅವರಲ್ಲಿ ಕೆಲವರು ಉತ್ತಮ ಜೀವನವನ್ನು ಅರಸಿ ಸಾಗರದಾಚೆಗೆ ಹೋಗಿಯೇ ಹೋಗುತ್ತಾರೆ, ಅವರನ್ನು ಕೈಕಾಲುಗಳಿಗೆ ಕೋಳ ಬಿಗಿದು ಹಿಂದಕ್ಕೆ ಅಟ್ಟಲಾಗುತ್ತದೆ. ಒಂದು ಸಮಾಜವಾದಿ ಸಮಾಜ ಮಾತ್ರವೇ ನಿರುದ್ಯೋಗದ ಪಿಡುಗನ್ನು ಮತ್ತು ನಮ್ಮ ಜನರನ್ನು ಪಂಜರದ ಪಶುಗಳಂತೆ ನಡೆಸಿಕೊಳ್ಳುವ ದುರದೃಷ್ಟವನ್ನು ನಿವಾರಿಸಬಹುದು. ನಮ್ಮ ದೇಶದಲ್ಲಿ ಹಿಂದಿನ ತಪ್ಪುಗಳಿಂದ ಕಲಿಯುವ ಮೂಲಕ ಇಂತಹ ಒಂದು ಉತ್ತಮವಾದ ಸಮಾಜವಾದಿ ಸಮಾಜವನ್ನು ನಿರ್ಮಿಸಲು ನಮಗೆ ಸಾಧ್ಯವಿದೆ.

ಸುಂದರ ಮಲೆಕುಡಿಯ ಕೈ ಕಡಿದ ಪ್ರಕರಣ.... ಪುಟ 16 ರಿಂದ

ಬಂಧಿಸದೇ ರಕ್ಷಿಸುವ ನಾಟಕ ಆಡುತ್ತಿದ್ದರು. ಹೋರಾಟ ತೀವ್ರಗೊಂಡ ಬಳಿಕ ಆರೋಪಿಗಳನ್ನು ಹುಡುಕಿ ಬಂಧಿಸಿದ್ದರು. ತನಿಖೆ ನಡೆಸಿದ ಪೊಲೀಸರು ಗೋಪಾಲಗೌಡ ಹಾಗೂ ಇತರ ಆರೋಪಿಗಳ ವಿರುದ್ದ ಪ್ರಕರಣ ದಾಖಲಿಸಿಕೊಂಡಿದ್ದರು. ಈ ಬಗ್ಗೆ ಪೊಲೀಸರು ಸಲ್ಲಿಸಿದ ದೋಷಾರೋಪಣೆ ಪಟ್ಟಿಯನ್ನು ಸ್ವೀಕರಿಸಿದ ನ್ಯಾಯಾಲಯ ಆರೋಪಿಗಳ ವಿರುದ್ದ ಆರೋಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಶಿಕ್ಷೆ ವಿಧಿಸಿ ಆದೇಶ ನೀಡಿದೆ.

ಅತ್ಯಂತ ಕ್ಲಿಷ್ಟಕರವಾದ ಈ ಹೋರಾಟದಲ್ಲಿ ನ್ಯಾಯ ದೊರಕಿಸಿಕೊಡಲು ಶ್ರಮಿಸಿದ ಎಲ್ಲರಿಗೂ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಡಿ.ವೈ.ಎಫ್.ಐ, ಸಿಪಿಐ(ಎಂ) ಮತ್ತು ವಿವಿಧ ಸಮಾನ ಮನಸ್ಕ ಸಂಘಟನೆಗಳು ಅಭಿನಂದಿಸಿವೆ.

ಡಾ. ಬಂಜಗೆರೆ ಜಯಪ್ರಕಾಶ್ ಅವರು ಅನುವಾದ ಮಾಡಿರುವ 2008ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ, ಜಾನ್ ಪರ್ಕಿನ್ಸ್ ನ ಕೃತಿಯಾದ "ಪಾಪ ನಿವೇದನೆ" ಕೃತಿಯನ್ನು ಓದುವ ತುರ್ತು ಎಂದಿಗಿಂತ ಇಂದು ಹೆಚ್ಚಿದೆ. ವಿಶ್ವದ ದೊಡ್ಡಣ್ಣ ಎಂದು ಕರೆಸಿಕೊಳ್ಳಲು ಅಮೇರಿಕಾ ತೃತೀಯ ಜಗತ್ತಿನ ರಾಷ್ಟ್ರಗಳನ್ನು ಹೇಗೆ ಬಳಸಿಕೊಳ್ಳುತ್ತದೆ ಎಂಬುದನ್ನು ಈ ಕೃತಿ ಎಳೆ ಎಳೆಯಾಗಿ ಬಿಡಿಸಿಟ್ಟಿದೆ.

ಪುಸ್ತಕ ವಿಮರ್ಶೆ । ಪಾಪ ನಿವೇದನೆ

ಪವಿತ್ರ ಎಸ್.
ಸಹಾಯಕ ಪ್ರಾಧ್ಯಾಪಕರು

ಎಕಾನಾಮಿಕ್ ಹಿಟ್ ಮನ್ ಎಂದು ಕರೆಸಿಕೊಳ್ಳುವ ಬಂಡವಾಳಶಾಹಿಯ ಏಜೆಂಟರು ತೃತೀಯ ಜಗತ್ತಿನ ರಾಷ್ಟ್ರಗಳನ್ನು ಸಾಲದ ಹುದಿಲಿನಲ್ಲಿ ಸಿಲುಕಿ ಇನ್ನೆಂದು ಹೊರಬರದಂತೆ ಮಾಡುತ್ತಾರೆ. ಈ ಕೆಲಸಗಳಿಗೆ ಎಕಾನಾಮಿಕ್ ಹಿಟ್ ಮನ್ ಗಳಿಗೆ ಕನಸ್ಸಲ್ಲೂ ಊಹಿಸಿದ ಸಂಬಳವನ್ನು ನೀಡುತ್ತಾರೆ. ಇವರ ಭವಿಷ್ಯದ ಮುಂದಾಲೋಚನೆಯ ಪರಿಣಾಮವೇ ಇಂದು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಭಿವೃದ್ಧಿ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಗುಲಾಮಿತನ, ನೆಲದ ಸಂಪನ್ಮೂಲಗಳನ್ನು ಬಳಸಿಕೊಂಡು ಧನಿಕರಾದ ಬಂಡವಾಳಶಾಹಿಗಳು ಮತ್ತು ಸಂಬಳಕ್ಕಾಗಿ ಕಷ್ಟಪಟ್ಟರು ಸರಿಯಾಗಿ ವೇತನ ಸಿಗದೆ ಪರದಾಡುವ ಕಾರ್ಮಿಕರು.

ಬಡ ರಾಷ್ಟ್ರಗಳ ಸಂಪತ್ತನ್ನು ತನ್ನ ಒಡಲಲ್ಲಿ ಶೇಖರಿಸಿ ಕೊಂಡಿರುವ ಅಮೇರಿಕಾ ಇಂದು ದೊಡ್ಡಣ್ಣನಂತೆ ಮೆರೆಯತ್ತಿದೆ. ಇದಕ್ಕಾಗಿ ಅಮೇರಿಕಾ ನಡೆದು ಬಂದಿರುವ ಹಾದಿಯಲ್ಲಿ ಮತ್ತೆಂದೂ ಹಸಿರು ಚಿಗುರುವುದಿಲ್ಲ ಎಂಬುದು ವಾಸ್ತವ. ಇದರಿಂದ ತೊಂದರೆಗೊಳಗಾಗಿ ಹಕ್ಕುಗಳನ್ನು ಕೇಳಲು ಬಡ ರಾಷ್ಟ್ರಗಳ ಜನರು ಆಯ್ದುಕೊಂಡಿರುವುದು ಕಮ್ಯುನಿಸಂ ಮತ್ತು ಟೆರರಿಸಂ. ಇವು ಕೆಟ್ಟವುಗಳೆಂದು ಅಭಿಪ್ರಾಯ ಮೂಡಿಸಿ ಅಭಿವೃದ್ಧಿಯ ಹೆಸರಿನಲ್ಲಿ ಬಡ ರಾಷ್ಟ್ರಗಳನ್ನು ಸುಲಿಗೆ ಮಾಡುವ ಅಮೇರಿಕಾದ ಕುತಂತ್ರ ಬುದ್ಧಿಗೆ ಸಹಕರಿಸುವವರನ್ನು ಸೃಷ್ಟಿಸಿಕೊಂಡು ಸಲೀಸಾಗಿ ಹೆಜ್ಜೆ ಹಾಕುವ ದೊಡ್ಡಣ್ಣನಿಗೆ ಗೊತ್ತಿಲ್ಲವೇ? ಕಮ್ಯುನಿಸಂ ಮತ್ತು ಟೆರರಿಸಂ ಅವರ ಕಾರ್ಯ ವಿಧಾನಗಳ ಫಲಿತಾಂಶಗಳೆಂದು. ಗೊತ್ತಿದ್ದರೂ ಅಮೇರಿಕಾ ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ದೊಣ್ಣೆ ಯಾರು ಕೈಲಿರುತ್ತೋ ಅವನದೇ ಹೆಮ್ಮೆ ಎನ್ನುವ ಸೂತ್ರವನ್ನು ಅಮೇರಿಕಾ ನಂಬುತ್ತದೆ.

ಅದಕ್ಕೆಂದೆ ಯಾವುದೇ ಬಡ ರಾಷ್ಟ್ರಗಳಲ್ಲಿ ಸಮಾಜವಾದಿ ಆಲೋಚನೆಗಳು ಮೊಳಕೆ ಹೊಡೆಯದಂತೆ ಕಠಿಣ ಪರಿಪಾಲನೆ ನಡೆಸಿದರು. ಹೋರಾಟಗಾರರು ಸಮಾಜದೊಂದಿಗೆ ಬೆರೆಯದಂತೆ ಮಾಡಿದರು. ಸತ್ಯಕ್ಕಾಗಿ ಹೋರಾಟ ಮಾಡುವ ಹೋರಾಟಗಾರರನ್ನು ಟೆರರಿಸ್ಟ್ ಗಳೆಂದು ಕರೆದರು. ಭಾರತದಲ್ಲಿ ನಕ್ಸಲೈಟ್ ಎಂದು ಕರೆದು ಸಮಾಜಕ್ಕೂ ಮತ್ತು ಅವರಿಗೂ ಕಂದಕ ಸೃಷ್ಟಿಯಾಗುವಂತೆ ಮಾಡಿದರು. ನೊಂದವರಿಗೆ ಸಹಾಯ ಮಾಡುವುದನ್ನು ಕರ್ತವ್ಯವನ್ನಾಗಿ ಭಾವಿಸಿದ್ದವರು ಟೆರರಿಸ್ಟ್ ಗಳಾಗಬೇಕಿಲ್ಲ. ಅದೇ ಸಮಯದಲ್ಲಿ ಕಮ್ಯುನಿಸ್ಟ್, ಸಮಾಜವಾದಿ ಕೂಡ ಆಗಬೇಕಿಲ್ಲ. ಇದಕ್ಕೆ ಪ್ರಶ್ನಿಸುವ, ಹೋರಾಟ ಮಾಡುವ ಮನೋಭಾವವಿದ್ದರೆ ಸಾಕು. ಇಂತಹ ಮನೋಭಾವದವರನ್ನು ಅಮೇರಿಕಾದ ಪ್ರಭುತ್ವ ಹೇಗೆಲ್ಲಾ ಹತ್ತಿಕ್ಕಿದೆ ಎಂಬುದಕ್ಕೆ ಇತಿಹಾಸ ಕಣ್ಮುಂದೆ ಇದೆ.

ಅಮೇರಿಕಾದ ಈ ಮನಸ್ಥಿತಿಗೆ ಕಾರಣವೇನು ಎಂದರೆ, ಅವರಿಗೆ ಅವರೇ ಬರೆದುಕೊಂಡ



"ಮ್ಯಾನಿಫೆಸ್ಟ್ ಡೆಸ್ಟಿನಿ" ಎಂಬ ಕರಾರು ಪತ್ರ. ಈ ಜಗತ್ತಿನ ನೈಸರ್ಗಿಕ ಸಂಪನ್ಮೂಲಗಳೆಲ್ಲಾ ಅಧಿಕಾರಯುತವಾಗಿ ಅಮೇರಿಕಾಗೆ ಸೇರಿದ್ದು. ಉಳಿದ ದೇಶದ ಜನರು ಅದನ್ನು ಪೂರೈಸುವ ಪೂರೈಕೆದಾರರು ಎಂಬ ಮನಸ್ಥಿತಿ. ಜಗತ್ತನ್ನು ಇಷ್ಟು ನಾಶಗೊಳಿಸಲು ಕಾರಣವಾಗಿದೆ.

ಅಮೇರಿಕಾ ಕಾಲಿಡುವ ದೇಶಗಳಲ್ಲಿನ ಹೋರಾಟಗಾರರು ಆ ದೇಶದ ಅಧ್ಯಕ್ಷರಾಗಿ ಇನ್ನಿಲ್ಲದಂತೆ ಸಾವಿಗೀಡಾಗುತ್ತಾರೆ. "ಸ್ವಾತಂತ್ರ್ಯ ಹೋಮರ್ ಆಶಯ ಆ ಆಶಯವನ್ನು ಕೊಲ್ಲುವ ಕ್ಷಿಪಣಿ ಇನ್ನು ಕಂಡುಹಿಡಿಯಲ್ಪಟ್ಟಿಲ್ಲ" ಎಂಬ ಘೋಷಣೆ ನೀಡಿದವನನ್ನೇ ಹೆಲಿಕಾಪ್ಟರ್ ದುರಂತವೆಂದು ಬಿಂಬಿಸಿ ಕೊಂದುಹಾಕುತ್ತಾರೆ. ಇದಕ್ಕೆ ಈಕ್ವೆಡಾರ್ ಅಧ್ಯಕ್ಷ ಕೂಡ ಹೊರತಲ್ಲ. ಮನುಷ್ಯ ಜೀವಕ್ಕೆ ಬೆಲೆ ಎಂದರೆ ಅದು ಅಮೇರಿಕಾದ ಮಾತನ್ನು ಕೇಳುವವರೆಗೆ ಮಾತ್ರ. ಕೇಳದಿದ್ದರೆ ಹೆಣವಾಗಲು ತಯಾರಾದಂತೆ.

ಅಮೇರಿಕಾದ ಶ್ರೇಷ್ಠ ಮನಸ್ಥಿತಿಯೇ ಪನಾಮ ದೇಶದವರಿಗೂ ಇದೆ. ಅದಕ್ಕೆ ಉತ್ತಮ ಉದಾಹರಣೆ ಎಂದರೆ "ಪನಾಮ ಸ್ತ್ರೀಯರಿಗೆ ವ್ಯಭಿಚಾರ ಮಾಡಲು ಅವಕಾಶವಿಲ್ಲ ಅವರು ಬಾರ್ ಗಳಲ್ಲಿ ವೇಯ್ಟರ್ ಗಳಾಗಿ, ಡ್ಯಾನ್ಸರ್ಗಳಾಗಿ ಕೆಲಸ ಮಾಡಬಹುದು ಆದರೆ ಮೈಮಾರಿಕೊಳ್ಳುವಂತಿಲ್ಲ ಆ ಕೆಲಸವನ್ನು ವಿದೇಶಿಯರಿಗೆ ಬಿಟ್ಟುಬಿಡಲಾಗಿದೆ". ಎಂಬುದು ಹೆಣ್ಣನ್ನು ಭೋಗದ ವಸ್ತುವಿನಂತೆ ನೋಡುವುದರೊಂದಿಗೆ ಒಂದು ಕೆಟ್ಟ ಸಮಾಧಾನ ಆ ಹೆಣ್ಣುಗಳು ನಮ್ಮ ದೇಶದವರಲ್ಲಾ ಎಂಬುದು. ಅಷ್ಟೆ ಅಲ್ಲದೇ "ಅವರು ತಮ್ಮ ದೇಶಗಳಲ್ಲಿನ ಕ್ರೌರ್ಯವನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಇಲ್ಲಿಗೆ ಬರುತ್ತಾರೆ" ಎಂಬ ಮನಸ್ಥಿತಿ.

ಇನ್ನೂ ಅಮೇರಿಕಾದ ದೊಡ್ಡಣ್ಣನ ಸ್ಥಾನ ಹುಟ್ಟಿದ್ದು, ಬೆಳವಣಿಗೆ ಹೊಂದಿದ್ದು ಹೇಗೆ ಎಂಬುದನ್ನು ಗಮನಿಸಿದರೆ, "ಅಮೇರಿಕವನ್ನು ಎದುರಿಸಿ ನಿಲ್ಲುವುದು ನಮ್ಮ ಗುರಿ ಅಲ್ಲ ಬಡವರ ಪರವಾಗಿ ನಿಂತುಕೊಳ್ಳುವುದೇ ನಮಗೆ ಬೇಕಾಗಿರುವುದು ಅದೆಲ್ಲ ಸಾಧ್ಯವಾಗಬೇಕಾದರೆ ನಮಗೆ ಮೂಲಭೂತ ಸೌಕರ್ಯಗಳು ಬೇಕು, ವಿದ್ಯುತ್ ಬೇಕು, ಬಡವರನ್ನು ತಲುಪುವ ಹಗ್ಗದ ಸಬ್ಸಿಡಿ ವಿದ್ಯುತ್ ಬೇಕು. ಚುರುಕಾದ ಸಾರಿಗೆ, ಕಮ್ಯುನಿಕೇಷನ್ ಸೌಕರ್ಯಗಳು ಬೇಕು. ಇವೆಲ್ಲವನ್ನು ಮಾಡುವುದಕ್ಕೆ ವಿಶ್ವಬ್ಯಾಂಕ್ ಇಂಟರ್ ಅಮೇರಿಕನ್ ಡೆವಲಪ್ಮೆಂಟ್ ಬ್ಯಾಂಕ್ ಹಣ ಬೇಕು. ಇಂತಹ ಮನಸ್ಥಿತಿಯನ್ನು ಬಡ ರಾಷ್ಟ್ರಗಳ ಜನರಲ್ಲಿ ಬಿತ್ತಿ, ಆ ದೇಶದವರನ್ನು ಕೈವಶ ಮಾಡಿಕೊಂಡು ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆಹೊಡೆದಿರುವುದು.

ಈಕ್ವೆಡಾರ್, ಸೌದಿ ಅರೇಬಿಯಾ, ಇರಾನ್, ಇರಾಕ್, ಅಫ್ಘಾನಿಸ್ತಾನ, ಪನಾಮ ಹೀಗೆ ಪೆಟ್ರೋಲಿಯಂ ಸಿಗುವ ದೇಶಗಳನ್ನು ಅಭಿವೃದ್ಧಿಯ ಕಪಿಮುಷ್ಠಿಯಲ್ಲಿ ಬಂಧಿಸಿ ತೈಲ ಸಂಗ್ರಹವನ್ನು ಹೆಚ್ಚಿಸಿಕೊಂಡು, ಈ ದೇಶಗಳನ್ನು ಇನ್ನಿಲ್ಲದಂತೆ ದಿವಾಳಿ ಮಾಡಿತು. ಸಪ್ತ ಸೋದರಿಯರು ಎಂದು ಹೆಸರಾದ ಏಳು ಪ್ರಮುಖ ತೈಲ ಕಂಪನಿಗಳು ತೈಲದ ಬೆಲೆಯನ್ನು ಕಡಿತಗೊಳಿಸಬೇಕೆಂಬ ಹುನ್ನಾರ ಹೂಡಿದ್ದಾವೆ ಎಂಬುದನ್ನು ತಿಳಿದುಕೊಂಡ ಕೆಲವು ದೇಶಗಳು ಸೇರಿ ಆತುರಾತುರವಾಗಿ ಒಪೆಕ್ ರಚನೆ ಮಾಡಿಕೊಂಡಿತು. ಸದ್ದಾಂ ಹುಸೇನ್ ನನ್ನು ರಕ್ಷಿಸಿ, ಬೆಂಬಲಿ ಇರಾಕ್ ನ ತೈಲಾಗಾರಗಳನ್ನು ಬರಿದು ಮಾಡಿತು. ಇದಕ್ಕೆ ಬದಲಾಗಿ ಸದ್ದಾಂ ಗೆ ಆಧುನಿಕ ಯುದ್ದೋಪಕರಣಗಳನ್ನು ಸರಬರಾಜು ಮಾಡಿತು. ತೈಲಾಗಾರಗಳು ಬರಿದಾದಾಗ ಸದ್ದಾಂ ನನ್ನು ಹೊರಗಟ್ಟಲ್ಪಟ್ಟಿತು. ಇದರ ಪ್ರತಿಫಲವೆ ಅಮೇರಿಕಾದ ಟ್ರೇಡ್ ಸೆಂಟರ್ ಮೇಲಿನ ದಾಳಿ.

ಕಾರ್ಪೊರೇಟ್ ಶಾಹಿಯ ಮೂರು ಸ್ತಂಭಗಳಾದ ಬಹು ರಾಷ್ಟ್ರೀಯ ಸಂಸ್ಥೆಗಳು, ಅಂತರಾಷ್ಟ್ರೀಯ ಬ್ಯಾಂಕುಗಳು ಮತ್ತು ಸರ್ಕಾರ ಇವುಗಳ ನಡುವಿನ ಸಂಬಂಧದಲ್ಲಿ ಬಿರು ಮೂಡಿಸಿ ತಾನು ಲಾಭ ಪಡೆದುಕೊಳ್ಳುತ್ತದೆ. ಭಾರಿ ಸಾಲಗಳ ಮುಖಾಂತರ ದೇಶಗಳನ್ನು ಅಭಿವೃದ್ಧಿ ಮಾಡುತ್ತೇವೆಂಬ ಮೋಸಗಾರಿಕೆಯ ಮಾತುಗಳಿಂದ ಮರುಳು ಮಾಡಿ ಅಭಿವೃದ್ಧಿ ಎಂಬುದು ಬಡ ರಾಷ್ಟ್ರಗಳ ಜನರಿಗೆ ಉರುಳಾಗುವಂತೆ ಮಾಡುತ್ತದೆ. ಮೀಡಿಯಾವನ್ನು ಕೂಡ ಕೊಂಡು ಕೊಂಡು ತೈಲ ಕಂಪನಿಗಳ ಅಧೀನದಲ್ಲಿರಿಸಿ, ಅಭಿವೃದ್ಧಿ ಎಂಬ ಕಣ್ಣಿಗೆ ಕಾಣದ ಮರೀಚಿಕೆಯನ್ನು ಜನರು ಬೆಂಬತ್ತುವಂತೆ ಮಾಡುತ್ತದೆ. ಸಮಕಾಲೀನ ಭಾರತದ ಮಾಧ್ಯಮಗಳನ್ನು ಗಮನಿಸಿದರೆ ಈ ವಿಷಯಗಳು ಮತ್ತಷ್ಟು ಸ್ಪಷ್ಟವಾಗುತ್ತದೆ.

ಅಷ್ಟೇ ಅಲ್ಲದೇ ಅಮೇರಿಕಾ ಸಾಧಾರಣವಾಗಿ ತನ್ನ ದೇಶದ ಪ್ರಜೆಗಳನ್ನು ಅಪಾಯಕಾರಿ ಪ್ರಾಂತ್ಯಗಳಲ್ಲಿ ಕೆಲಸ ಮಾಡುವುದಕ್ಕೆ ಅನುಮತಿಸುವುದಿಲ್ಲ ಅದಕ್ಕಾಗಿಯೇ ಬಹಳ ಕಡೆ ಸ್ಥಳೀಯರನ್ನು ತೆಗೆದುಕೊಳ್ಳುತ್ತವೆ. ಸ್ಥಳೀಯರ ಪ್ರಾಣಗಳಿಗೆ ಬೆಲೆ ಇಲ್ಲವೆಂಬುದು ಅಮೇರಿಕಾ ದೇಶದ ಅಭಿಪ್ರಾಯ. ಇಲ್ಲಿ ಯೋಚಿಸಲೇ ಬೇಕಾದ ಸಂಗತಿಯೊಂದು ಅದಕ್ಕೆ ಪುಷ್ಠಿಕೊಡುವಂತೆ ಎದುರಾಗಿದೆ. ಈಗ ಅಮೇರಿಕಾ ಭಾರತದ ಪ್ರಜೆಗಳನ್ನು ಎಷ್ಟು ನಿಕೃಷ್ಟವಾಗಿ ನಡೆಸಿಕೊಂಡು ಗಡಿಪಾರು ಮಾಡಿದೆ ಎಂಬುದು ಕಣ್ಮುಂದೆ ಇದೆ.

ಕಾರ್ಪೊರೇಟೀಕರಣವನ್ನು ವಿರೋಧಿಸುವವರು ಬದುಕಲು ಬಿಡುವುದು ಅಮೇರಿಕಾಗೆ ಇಷ್ಟವಿಲ್ಲ. ಬುಡಕಟ್ಟು ಜನರನ್ನು ತೈಲಕ್ಕಾಗಿ ಅವರ ಬದುಕನ್ನು ಕಸಿದುಕೊಂಡು ಸಂಸ್ಕೃತಿಯನ್ನು ಬುಡ ಸಮೇತ ನಾಶ ಮಾಡಿದ್ದಕ್ಕೆ ಈಕ್ವೆಡಾರ್ ಉದಾಹಣೆಯಾಗಿ ನಮ್ಮ ಕಣ್ಮುಂದೆ ಇದೆ. ಅದೇ ಧ್ವನಿ ಇಂದು ಭಾರತದಲ್ಲಿ ಕೇಳಿ ಬರುತ್ತಿದೆ. ಬಂಡವಾಳಶಾಹಿಯೊಬ್ಬರು "ಕಾರ್ಮಿಕರು ವಾರದಲ್ಲಿ 70 ಗಂಟೆ ಕೆಲಸ ಮಾಡ್ಬೇಕು". ಎಂಬ ಹೇಳಿಕೊಡುತ್ತಾ ಸರ್ವಾಧಿಕಾರಿಯಾಗುತ್ತಿದ್ದಾರೆ.

ಅಮೇರಿಕಾ ಕೇವಲ ತೈಲ ನಿಕ್ಷೇಪಗಳನ್ನು ಮಾತ್ರ ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ಬಯಸುತ್ತಿಲ್ಲ. ನೀರಿನ ಮೇಲೂ ಅಧಿಕಾರ ಬಯಸುತ್ತಿದೆ "ನೀರೆಂಬುದು ಆ ಕಡೆ ಆರ್ಥಿಕವಾಗಿ ಈ ಕಡೆ ರಾಜಕೀಯವಾಗಿ ಬಹಳ ಪ್ರಾಧಾನ್ಯತೆ ಪಡೆದುಕೊಂಡಿದೆ. ಅಮೇರಿಕಾ ನಡೆಸಿರುವ ಹೆಚ್ಚಿನ ಯುದ್ಧಗಳು ತೈಲಗಳಿಗಾಗಿ ಆಗಿದ್ದರೆ, ಮುಂದೊಂದು ದಿನ ನಡೆಯುವ ಯುದ್ಧಗಳು ನೀರಿಗಾಗಿ ಎಂಬುದನ್ನು ಈ ಕೃತಿ ಸೂಚ್ಯವಾಗಿ ಹೇಳುತ್ತಿದೆ. ಅನೇಕ ಬಹು ರಾಷ್ಟ್ರೀಯ ಕಂಪನಿಗಳು ಈಗ ಖಾಸಗೀಕರಣದ ತರಾತುರಿಯಲ್ಲಿ ಆಫ್ರಿಕಾ, ಲ್ಯಾಟಿನ್ ಅಮೇರಿಕ, ಪಶ್ಚಿಮ ಏಷ್ಯಾ ದೇಶಗಳಲ್ಲಿ ಇರುವ ಜಲ ಸಂಪನ್ಮೂಲದ ಮೇಲೆ ಕಣ್ಣು ಹಾಕಿವೆ.

ಇವೆಲ್ಲವನ್ನೂ ನೋಡಿದರೆ ಪ್ರಜಾಪ್ರಭುತ್ವ ಎಂಬುದು ಹಳೆಯ ಮಾತು. ಈಗ ನಡೆಯುತ್ತಿರುವುದು ಕಾರ್ಪೊರೇಟ್ ಪ್ರಭುತ್ವ ಎಂಬುದು ಪ್ರತಿನಿತ್ಯ ಸಾಬೀತಾಗುತ್ತಲೆ ಇದೆ. ಕಣ್ಕಟ್ಟಿಕೊಂಡಿರುವ ಜನರು ಎಚ್ಚೆತ್ತುಕೊಳ್ಳಬೇಕಾದ ಜರೂರು ಇದೆ.

ಕೊನೆಯದಾಗಿ "ನಿಮ್ಮ ಮಕ್ಕಳಿಗಾಗಿ ಏನು ಬಿಟ್ಟು ಹೋಗುತ್ತೀರಿ ಎಂಬುದಲ್ಲ

ನಿಮ್ಮ ಮಕ್ಕಳಲ್ಲಿ ಏನು ಬಿಟ್ಟು ಹೋಗುತ್ತೀರಿ ಎಂಬುದು ." ಯೋಚಿಸಬೇಕಾದದ್ದು ಅನಿವಾರ್ಯ.

NEW No. MAG(3)/NPP/205/2021-2022
JANASHAKTHI KANNADA VARA PATRIKE February 24-March 2, 2025 Price: Rs. 10/- Date of Publication: 21 February 2025 RNI No. KARKAN /2006/17926 Posted on 26-02-2025
Posted at BG PSO, BG - 560026 **Posted at Periodical Rate - Rs. 2**

ಕನ್ನಡದ ಭವಿಷ್ಯ ಕರಾಳವಾಗಿದ್ದು, ಕನ್ನಡ ಶಾಲೆಗಳು ನಶಿಸಿ ಹೋಗುವ ಹಂತದಲ್ಲಿದೆ: ಪುರುಷೋತ್ತಮ ಬಿಳಿಮಲೆ ಕಳವಳ



ಕನ್ನಡದ ಭವಿಷ್ಯ ಕರಾಳವಾಗಿದ್ದು, ಕನ್ನಡ ಶಾಲೆಗಳು ನಶಿಸಿ ಹೋಗುವ ಹಂತದಲ್ಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರಿನ ಕ್ರಿಯಾ ಮಾಧ್ಯಮ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಾತೃ ಭಾಷೆ ದಿನ ಹಾಗೂ ಕೆಂಪು ಪುಸ್ತಕ ದಿನ ಹಾಗೂ 'ಓದುವ ಖುಷಿ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆ ಹಾಗೂ ಅಸ್ಮಿತೆಯ ಮುಂದೆ ಹಲವು ಸವಾಲುಗಳಿವೆ. ಕನ್ನಡ ಶಾಲೆಗಳ ಉಳಿವಿಗೆ ಈಗಲೇ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ಕನ್ನಡವೇ ಕ್ರಮೇಣ ಮರೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳಬೇಕಿದೆ. ಕನ್ನಡ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಳ್ಳದೆ ಹೋದಲ್ಲಿ ಭಾಷೆ ಸಂಸ್ಕೃತಿ ನಶಿಸಿಹೋಗುತ್ತದೆ' ಎಂದರು.

ಇದೇ ವೇಳೆ ಕೃತಿ ಬಿಡುಗಡೆ ಮಾಡಿದ ಪತ್ರಕರ್ತ ಜಿ.ಎನ್. ಮೋಹನ್ ಮಾತನಾಡಿ, ಪುಸ್ತಕ ಎನ್ನುವುದು ಬದಲಾವಣೆಯನ್ನು ತರುವ ಪ್ರಮುಖ ಅಸ್ತ್ರ, ಇದು ಸಮಾಜವನ್ನು ಜಡವಾಗಿ ಇರಲು ಬಿಡದ ಬದಲಾವಣೆಯ ವೇಗವರ್ಧಕ. ಪುಸ್ತಕ ಪ್ರೀತಿಯನ್ನು ಎಲ್ಲೆಡೆ ಬಲಪಡಿಸುವ, ಹಂಚುವ ಕೆಲಸವಾಗಬೇಕು' ಎಂದು ಹೇಳಿದರು.

ಬಳಿಕ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಮುಖ್ಯಸ್ಥ ಬಸವರಾಜ ಕಲ್ಲುಡಿ ಮಾತನಾಡಿ, 'ಓದುವ ಸಂಸ್ಕೃತಿ ನಶಿಸಿ ಹೋಗುವ ಹಂತದಲ್ಲಿದೆ. ಆಧುನಿಕ ಸಾಧನ ಹಾಗೂ ತಂತ್ರಜ್ಞಾನದಿಂದಾಗಿ ಯುವಪೀಳಿಗೆ ಓದಿನಿಂದ ಸಂಪೂರ್ಣ ವಿಮುಖರಾಗಿದ್ದಾರೆ. ಓದಿನತ್ತ ಮತ್ತೆ ಅವರನ್ನು ಸೆಳೆಯುವುದು ಸವಾಲಿನ ಕೆಲಸ' ಎಂದರು.

ಪ್ರಕಾಶಕ, ಮಾಧ್ಯಮ ತಜ್ಞ ಜಿ.ಎನ್.ಮೋಹನ್ ಅವರು 'ಓದುವ ಖುಷಿ ಮತ್ತು ಸಾಮಾಜಿಕ ಬದಲಾವಣೆ' ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಕ್ರಿಯಾ ಮಾಧ್ಯಮದ ಎನ್.ಕೆ.ವಸಂತರಾಜ್, ಕೃತಿಯ ಅನುವಾದಕ ತಡಗಳಲೆ ಸುರೇಂದ್ರ ರಾವ್ ಉಪಸ್ಥಿತರಿದ್ದರು. ಜಯಲಕ್ಷ್ಮೀಯವರು ಚಿರಸ್ಮರಣೆಯ ಒಂದು ಭಾಗವನ್ನು ಹಾಗೂ ದೇವಿಕಾ ಅವರು ರೈತರಿಗಾಗಿ ನಿರಂಜನ್ ಕೃತಿಯ ಒಂದು ಭಾಗವನ್ನು ವಾಚನ ಮಾಡುವ ಮೂಲಕ ಓದುವ ಹಿಗ್ಗಿಗೆ ಮೆರಗು ತುಂಬಿದರು.



ಸುಂದರ ಮಲೆಕುಡಿಯ ಕೈ ಕಡಿದ ಪ್ರಕರಣ; ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಿದ ನ್ಯಾಯಾಲಯ



ಸುಮಾರು ಹತ್ತು ವರ್ಷಗಳ ಹಿಂದೆ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ನೆರಿಯ ಗ್ರಾಮದ ಕಾಟಾಜೆ ಎಂಬಲ್ಲಿ ನಡೆದ ಕೊಲೆಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರಿನ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಬುಧವಾರ ನಾಲ್ಕು ಮಂದಿ ಆರೋಪಿಗಳಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದ ಗೋಪಾಲಗೌಡ ಯಾನೆ ಗೋಪಾಲಕೃಷ್ಣ ಗೌಡ, ಮಂಗಳೂರಿನ ಕುಡುಪು ಪಾಲ್ದನೆಯ ಎ.ದಮಯಂತಿ, ಬೆಳ್ತಂಗಡಿ ತಾಲೂಕಿನ ಬಂದಾರು ಗ್ರಾಮದ ವಸಂತಗೌಡ ಯಾನೆ ರಾಮಣ್ಣಗೌಡ, ನೆರಿಯ ಗ್ರಾಮದ ಪುಷ್ಪಲತಾ ಶಿಕ್ಷೆಗೊಳಗಾದ ಆರೋಪಿಗಳಾಗಿದ್ದಾರೆ.

ಆರೋಪಿ ಗೋಪಾಲಗೌಡನಿಗೆ ಮೂರು ವರ್ಷಗಳ ಕಾಲ ಕಠಿಣ ಸಜೆ ಮತ್ತು ಒಂದು ಲಕ್ಷ ರೂಗಳ ದಂಡ ಹಾಗೂ ದಂಡ ತೆರಲು ವಿಫಲವಾದಲ್ಲಿ ಮತ್ತೆ 6 ತಿಂಗಳ ಸಾದಾ ಸಜೆ, ಆರೋಪಿಗಳಾದ ದಮಯಂತಿ, ವಸಂತ ಗೌಡ, ಪುಷ್ಪಲತಾರಿಗೆ 2 ವರ್ಷ ಗಳ ಶಿಕ್ಷೆ ಮತ್ತು ತಲಾ 15 ಸಾವಿರ ರೂ. ದಂಡ ಹಾಗೂ ದಂಡ ತರಲು ವಿಫಲವಾದಲ್ಲಿ ಮತ್ತೆ 3 ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ. ಸೆ.506ರ ಅಡಿ ನಾಲ್ಕು ಮಂದಿ ಆರೋಪಿಗಳಿಗೆ 6 ತಿಂಗಳ ಸಾದಾ ಶಿಕ್ಷೆ ವಿಧಿಸಿ ನ್ಯಾಯಾಧೀಶ ಮಲ್ಲಿಕಾರ್ಜುನ ಸ್ವಾಮಿ ಎಚ್. ಎಸ್. ತೀರ್ಪು ನೀಡಿದ್ದಾರೆ. ದಂಡದ ಮೊತ್ತ 1.45 ಲಕ್ಷ ರೂ.ವನ್ನು ಗಾಯಾಳು ಸುಂದರ ಮಲೆಕುಡಿಯ ಅವರಿಗೆ ಪರಿಹಾರವಾಗಿ ನೀಡಲು ಆದೇಶಿಸಿದ್ದಾರೆ.

2015ರ ಜು. 26ರಂದು ಸಂಜೆ, ನೆರಿಯ ಗ್ರಾಮದ ಕಾಟಾಜೆ ಎಂಬಲ್ಲಿನ ಜಮೀನಿನಲ್ಲಿದ್ದ ಕಾಡನ್ನು ರೇವತಿ ಮತ್ತು ಬಿ.ಎ. ಸುಂದರ ಮಲೆಕುಡಿಯ ಅವರು ಮಕ್ಕಳಾದ ಪೂರ್ಣೇಶ್ ಮತ್ತು ಪೂರ್ಣಿಮಾರೊಂದಿಗೆ ಕಡಿಯುತ್ತಿ ದ್ದಾಗ ಆರೋಪಿಗಳು ಅಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದದಿಂದ ಬೈದು ಕಳ ಕತ್ತರಿಸುವ ಯಂತ್ರದಿಂದ ಸುಂದರ ಮಲೆಕುಡಿಯರ ಕೈಬೆರಳುಗಳನ್ನು ತುಂಡರಿಸಿ ಗಂಭೀರ ಗಾಯಗೊಳಿಸಿದ್ದರು. ಬಳಿಕ ಪರಾರಿಯಾಗಿದ್ದರು. ಈ ಬಗ್ಗೆ ಬೆಳ್ತಂಗಡಿ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಸುಂದರ ಮಲೆಕುಡಿಯ ಅವರ ಕೈ ಕಡಿದ ಪ್ರಕರಣ ಇಡೀ ದೇಶದ ಗಮನ ಸೆಳೆದಿತ್ತು. ನೆರಿಯದಲ್ಲಿ ಬೆಳ್ತಂಗಡಿ ಯಲ್ಲಿ ಹಾಗೂ ಮಂಗಳೂರಿನಲ್ಲಿ ದೊಡ್ಡ ಮಟ್ಟದ ಹೋರಾಟವೇ ನಡೆದಿತ್ತು. ಬೆಂಗಳೂರು ದ' ಹ' ಲಿ ೦ು ಿ ಲ್ಲಿ ೦ು ಿ ೂ ಘಟನೆ ಪ್ರತಿಭಟನೆಗಳಿಗೆ ಕಾರಣವಾಗಿತ್ತು. ಸಿಪಿಐಎಂ ಪಕ್ಷ ಅಂದು ನ್ಯಾಯಕ್ಕಾಗಿ



ನಡೆದ ಹೋರಾಟದ ನೇತೃತ್ವ ವಹಿಸಿತ್ತು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಡಿವೈಎಫ್ಐ, ಎಸ್ಎಫ್ಐ, ಸಿಐಟಿಯು, ಮಲೆಕುಡಿಯರ ಸಮುದಾಯದ ಸಂಘಟನೆಗಳು ಮತ್ತು ಇತರೆ ಎಲ್ಲಾ ಸಮಾನ ಮನಸ್ಕ ಸಂಘಟನೆಗಳು, ಸಿಪಿಐ(ಎಂ) ನಿರಂತರ ಹೋರಾಟವನ್ನು ನಡೆಸಿದ್ದವು.

ಆಸ್ಪತ್ರೆಗೆ ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿ ಯಾಗಿದ್ದ ದಿ.ಸೀತರಾಮ್ ಯೆಚೂರಿ ಭೇಟಿ ನೀಡಿದ ನಂತರ ಪ್ರಕರಣ ಮಹತ್ವ ಪಡೆದುಕೊಂಡಿತ್ತು. ಸಂಸತ್ ಸದಸ್ಯರಾಗಿದ್ದ ಜಿತೇಂದ್ರ ಚೌಧುರಿ ಕಿಸಾನ್ ಸಭಾದ ವಿಜೂಕೃಷ್ಣನ್ ಜೊತೆಗಿದ್ದರು.

ಪೊಲೀಸರ ಒಂದುವಿಭಾಗ ಆರೋಪಿಗಳನ್ನು

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**